ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇಂಥ ವಿಚಾರದಲ್ಲಿ ಮನೆಕಟ್ಟಿಕೊಳ್ಳಲು ಅವಕಾಶ ಕೊಡಬೇಕೆಂದು ಕೆಲವು ಪ್ರದೇಶಗಳಿಂದ ಪ್ರಸ್ತಾವನೆಗಳು ಬಂದಿವೆ. ಆದರೆ, ಪ್ರಸ್ತುತ ಜಾರಿಯಲ್ಲಿರುವ ಕಾನೂನಿನಂತೆ ರಾಜ್ಯಸರಕಾರಕ್ಕೆ ಅರಣ್ಯಭೂಮಿಯನ್ನು ಕೊಡುವುದಕ್ಕೆ ಅಧಿಕಾರವಿಲ್ಲ. ಅವಶ್ಯಕ ಎನಿಸುವ ಇಂಥ ಪ್ರಸ್ತಾವನೆಗಳನ್ನು ನಾವು ಅನುಮತಿಗಾಗಿ ಕೇಂದ್ರಸರಕಾರಕ್ಕೆ ಕಳುಹಿಸಿಕೊಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಬೆಟ್ಟಪ್ರದೇಶದಲ್ಲಿ ಮನೆಕಟ್ಟಿಕೊಳ್ಳಲು ಅವಕಾಶ ಮಾಡಿಕೊಡುವ ಪ್ರಸ್ತಾವನೆಯನ್ನು ನಾವು ಸೂಕ್ತ ರೀತಿಯಲ್ಲಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಡುತ್ತೇವೆ.

ಡಾ|| ಎಂ. ಪಿ. ಕರ್ಕಿ : ಅಧ್ಯಕ್ಷರೇ ಈ ಬೆಟ್ಟ ಜಮೀನಿಗೆ ಸಂಬಂಧಪಟ್ಟಿದ್ದರ ಬಗ್ಗೆ ಈಗಾಗಲೇ ಸಚಿವ ಸಂಪುಟದ ಉಪಸಮಿತಿ ಒಂದು ನಿರ್ಣಯ ಕೊಟ್ಟಿದೆ. ಅದರ ಬಿಲ್ ಅನ್ನು ತಾವು ಮಂಡಿಸಬೇಕಾಗಿದೆ ಆದಷ್ಟು ಬೇಗ ಬೆಟ್ಟದಜಮೀನನ್ನು ರೈತರಿಗೆ ಹಸ್ತಾಂತರ ಮಾಡುವಂತಹ ಬಿಲ್ ಅನ್ನು ಈ ಅಧಿವೇಶನದಲ್ಲೇ ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ಅವರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ವಿತ್ತೀಯ ಕಾರ್ಯಕಲಾಪ.

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ (ಮುಂದು) ಬೇಡಿಕೆ ಸಂಖ್ಯೆ (1,2,3,4,45,8)

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಅಧ್ಯಕ್ಷರೇ ಅಂತೂ ಕರೆದಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಇವತ್ತು ಕೃಷಿ ತೋಟಗಾರಿಕೆ ಮತ್ತು ಪಶುಸಂಗೋಪನೆ ಇಲಾಖೆಗಳ ಮೇಲೆ ನಾನು ಮಾತನಾಡಲು ಬಯಸುತ್ತೇನೆ. ಒಂದು ಮಾತನ್ನು ಮೊದಲೇ ಹೇಳಬೇಕಾಗಿದೆ. ಕೃಷಿಸಚಿವರಾಗಿ ಮಾನ್ಯ ಬೈರೇಗೌಡರು ಬಂದ ಮೇಲೆ ಬಹುಶಃ ಕೆಲಸಗಳಾಗಿದೆ. ನಾವೇನೆ ಭಾಷಣ ಮಾಡಿದರೂ ಅವರೇನು ಈ ರೀತಿ ಹೇಳಿದರು ಎಂದು ತಿಳಿದುಕೊಳ್ಳಬಾರದು. ಆದರೂ ನಾವಿಲ್ಲಿ ನಿಂತು ನ್ಯೂನತೆಗಳನ್ನು ಎತ್ತಿ ತೋರಿಸಬೇಕಾದ್ದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡು ನನ್ನ ಮಾತು ಪ್ರಾರಂಭ ಮಾಡುತ್ತೇನೆ. ಅಧ್ಯಕ್ಷರೇ, ತಮಗೆ ಗೊತ್ತು, ಇವತ್ತು ನಗರಗಳಲ್ಲಿ ಜನಸಾಂದ್ರತೆ ಜಾಸ್ತಿಯಾಗುತ್ತಿದೆ, ಗ್ರಾಮೀಣ ಪ್ರದೇಶದಲ್ಲಿ ತೀರಾ ಕಡಿಮೆಯಾಗುತ್ತಿದೆ. ನಾನು ಒಂದು ಕಡೆ ಓದುತ್ತಿದ್ದೆ, ಎರಡು ಸಾವಿರ ಇಸವಿ ವೇಳೆಗೆ ಭಾರತದ ಸ್ಥಿತಿ ಹೇಗಿರಬಹುದು ಅಂದರೆ ಬೆಂಗಳೂರು ನಗರದಲ್ಲಿ ಕೂಡ ನಾವು ಹಿಂದುಗಡೆ ಆಕ್ಸಿಜನ್ ಸಿಲಿಂಡರ್ ಇಟ್ಟುಕೊಂಡು ಉಸಿರಾಡಿಕೊಂಡು ಓಡಾಡುವಂತಹ ಕಾಲ ಬರುತ್ತದೆ. ಇವತ್ತು ಕುಡಿಯುವ ನೀರಿಗಾಗಿ ಬಾಟಲ್ ಇಟ್ಟುಕೊಂಡು ಹೋಗುತ್ತಿದ್ದೇವೆ. ಇದ್ಯಾಕೆ ಆಗುತ್ತದೆ ಎಂದು ಒಂದು ಕ್ಷಣ ಯೋಚನೆ ಮಾಡಿದೆ, ಹಳ್ಳಿಜೀವನ ಅಷ್ಟು ದುಸ್ತರವಾಗಿದೆ. ಅಲ್ಲಿ ಜೀವಿಸುವುದು ಅವಮಾನ ಎನ್ನುವ ಸ್ಥಿತಿಗೆ ಬಂದಿದೆ. ನಮಗೆ ರಕ್ಷಣೆ ಇಲ್ಲ ಎನ್ನುವ ಕಾಲ ಬಂದಿದೆ. ಸೂರ್ಯ ಹುಟ್ಟಿ ಸೂರ್ಯ ಮುಳುಗಿದರೆ ಸಂಬಳ ತೆಗೆದುಕೊಳ್ಳುವವನ ಎದುರಿಗೆ ಬದುಕುವುದು ನಾಚಿಕೆಗೇಡು ಎನ್ನುವ ಪ್ರಸಂಗ ನಿರ್ಮಾಣವಾಗುತ್ತದೆ. ಇದನ್ನು ಯಾರಾದರೂ ಸರಿ

ಮಾಡುತ್ತಾರಾ ಅಂದರೆ ಓ.ಪಿ. ಕಲಾ, ಎನ್ನುವವರ ಪುಸ್ತಕ ನಾನು ಓದುತ್ತಿದ್ದೆ, ಭಾರತದಲ್ಲಿ ಕೃಷಿ ನೀತಿ ಅಂತ ಇಂಗ್ಲಿಷಿನದು. ಸಾಧ್ಯವೇ ಇಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಹೇಳುತ್ತಾರೆ. ಇವನು ಬೇರೆಯವರಿಗೋಸ್ಕರ ಬದುಕಿರುವವನು ದುಡಿದು ಬೇರೆಯವರನ್ನು ಸಾಕುವುದೇ ಇವನ ಉದ್ದೇಶ, ಇವನ ಜೀವನದ ಮರ್ಮ ಎಂದು ಹೇಳಿದ್ದಾರೆ. ಈ ಸ್ಥಿತಿಯಲ್ಲೇನಾದರೂ ನಮಗೆ ಸ್ವಲ್ಪ ಪರಿಹಾರ ಕಾಣಬೇಕು ಅಂದರೆ ಸರ್ಕಾರಗಳು ಕೆಲಸ ಮಾಡಬೇಕ ಅಂದರೆ ಒಂದುಕಡೆ ನಾವು ಬೆಳೆಯುವ ಬೆಳೆಗೆ ಪೂರಕವಾಗಿ ಮಾಡಬೇಕು, ಇನ್ನೊಂದು ಕಡೆ ಅದನ್ನು ಮಾರಾಟ ಮಾಡುವ ಕಡೆ ನಮಗೆ ಸಹಾಯವಾಗಬೇಕು. ಈ ಮಧ್ಯೆ ಅಲ್ಲಿ ಹಾಕುವ ಬಂಡವಾಳ, ಶ್ರಮ ಏನಾದರೂ ಸ್ವಲ್ಪ ವಾಪಸ್ ಬರಬೇಕು ಅಂದರೆ ಹಾಕುವ ಬಂಡವಾಳ ಕಡಿಮೆ ಮಾಡುವ ಕಾರ್ಯಕ್ರಮಗಳು ಮಾಡಬೇಕು. ಅದರಲ್ಲಿ ಬರುವ ವರಮಾನ ಜಾಸ್ತಿ ಬರುವಂತೆ ಮಾಡಬೇಕು. ಇವತ್ತು ಆ ಎರಡೂ ಇಲ್ಲ. ನಮ್ಮ ಬೆಳೆ ಬೆಳೆಯುವುದಕ್ಕೆ ಏನು ಇನ್‌ಪುಟ್ಸ್ ಕಾರ್ಯಕ್ರಮಗಳಾಗಬೇಕಾಗಿತ್ತು ಅದು ದುಬಾರಿಯಾಗಿದೆ. ಇನ್ನೊಂದು ಕಡೆ ಇದು ಬೈಯರ್ಸ್ ಮಾರ್ಕೆಟ್ ಯಾರು ಕೊಳ್ಳುತ್ತಾನೆ ಆತ ಹೇಳಿದ ಧಾರಣೆಗೆ ದವಸಧಾನ್ಯ ಅಥವಾ ಉತ್ಪಾದನೆಗಳನ್ನು ಮಾರುವಂತಹ ಸ್ಥಿತಿ ನಿರ್ಮಾಣವಾಗಿದೆ. ಈ ಇನ್‌ಪುಟ್ಸ್ ಕಾರ್ಯಕ್ರಮಗಳ ಬಗ್ಗೆ ನಾನು ಮಾತನಾಡಬೇಕೆಂದರೆ ಬಹುಶಃ ಈಗೆರಡುಮೂರು ವರ್ಷದವರೆಗೆ ಇದು ಸಮಾಧಾನಕರವಾದ ಸ್ಥಿತಿಯಲ್ಲಿತ್ತು. ಪುಸ್ತಕ ಓದುವವರು ಪುಸ್ತಕ ಬರೆಯುವವರು ಈ ರಾಷ್ಟ್ರದ ಅರ್ಥಸಚಿವರಾಗಿ ಬರುವವರೆಗೆ ರೈತನಿಗೆ ಸ್ವಲ್ಪ ಸಹಾಯ ಆಗುತ್ತಿತ್ತು. ದಿಢೀರಂತ 40 ಪರ್ಸೆಂಟ್ ಗೊಬ್ಬರದ ಮೇಲಿನ ಸಬ್ಸಿಡಿ ತೆಗೆದನಂತರ ಗೊಬ್ಬರ ದುಬಾರಿಯಾಯಿತು. ಬೈರೇಗೌಡರಿಗೆ ಗೊತ್ತು ಇವತ್ತು ಒಂದು ಎಕರೆ ರಾಗಿಗೆ ನಾವು 45 ಕೆಜಿ. ಬಿಎಪಿ ಹಾಕಬೇಕಾಗಿದೆ ಅದು 450 ರೂಪಾಯಿ ಆಗುತ್ತದೆ, ಯೂರಿಯಾ ಹಾಕಬೇಕಾಗಿದೆ, ಅದು 50-60ರೂಪಾಯಿ ಆಗುತ್ತದೆ. ರಾಗಿಯೇನಾದರೂ ಬರುತ್ತದಾ ಅಂದರೆ ನಾನು ಮತ್ತೇ ಆ ಪುಸ್ತಕವನ್ನೇ ಕೋಟ್ ಮಾಡಬೇಕಾಗುತ್ತದೆ, ಕನಿಷ್ಟ 4 ವರ್ಷಕ್ಕೊಂದ್ಸಲ ಫ್ಯಾಮಿನ್ ಬರುತ್ತದೆ ಭಾರತದಲ್ಲಿ, ಪ್ರಕೃತಿ ನಮ್ಮ ಮೇಲೆ ಕೋಪಿಸಿಕೊಳ್ಳುತ್ತದೆ ಏಕೆಂದರೆ ಅದು ಶಾಪ ನಮಗೆ, ರೈತರು ಮುಂದುವರೆಯ ಕೂಡದು ಏಕೆಂದರೆ ಬೇರೆ ವ್ಯವಹಾರ ಗೊತ್ತಿಲ್ಲ ಸಾಯಕೂಡದು, ಏಕೆಂದರೆ ಅವನಿಗೆ ಆಸ್ತಿ ಇದೆ. ಈ ಸ್ಥಿತಿಯಲ್ಲಿರುವಾಗ ಸರ್ಕಾರಗಳು ನಮ್ಮ ರಕ್ಷಣೆಗೇನು ಬರಬೇಕಾಗಿತ್ತು ಅಷ್ಟಾಗಿ ಬರಲಿಲ್ಲ ಎಂದು ಭಾವಿಸಿಕೊಂಡು ಅವರದೇ ಆದ ಕಾರ್ಯಕ್ರಮಗಳನ್ನು ನಾನು ಉದಾಹರಿಸುತ್ತ ಒಂದೆರೆಡು ಮಾತು ಆಡುತ್ತೇನೆ. ನಾವು ಬೆಳೆಯುವ ಬೆಳೆಯ ಬೀಜದಿಂದ ಆರಂಭಿಸುತ್ತೇನೆ ಅಧ್ಯಕ್ಷರೇ, ನಮಗೆ ರಾಜ್ಯ ಸರ್ಕಾರದ ಬೀಜನಿಗಮದಿಂದ ದೃಢೀಕರಿಸಿದ ಬೀಜಗಳನ್ನು ಕೊಡುತ್ತಿದ್ದರು. ಕಳೆದ ವರ್ಷದವರೆಗೆ ಇದಕ್ಕೆ ಕೇಂದ್ರ ಸರ್ಕಾರದ್ದು ಸುಮಾರು 3 ರೂಪಾಯಿ ಒಂದು ಕೆಜಿಗೆ ಸಬ್ಸಿಡಿ ಇತ್ತು ಹತ್ತು ವರ್ಷವಾದ ಮೇಲೆ ಆ ಬೀಜವನ್ನು ನೀವು ಸ್ವಂತದ್ದು ಮಾಡಿಕೊಂಡಿರಬೇಕು ಅಥವಾ ಆ ಬೀಜ ಅದರ ಯೋಗ್ಯತೆ ದಾರ್ಢ್ಯತೆ ಕಳೆದುಕೊಂಡಿದೆ ಎನ್ನುವ ಕಾರಣಕ್ಕೆ ಆ ಸಬ್ಸಿಡಿಯನ್ನು ನಿಲ್ಲಿಸಬೇಕು ಎಂದು ತೀರ್ಮಾನ ಮಾಡಿದರು. ಒಂದು ಕೆಜಿ ಬೀಜದ ರಾಗಿ ಇವತ್ತು ಬೇಕು ಅಂದರೆ 10 ರೂಪಾಯಿಗಳು ಆಗುತ್ತದೆ ಇವತ್ತು. ಮಾರುಕಟ್ಟೆಯಲ್ಲಿ ಅದರ ಧಾರಣೆ 3 ರೂಪಾಯಿ 60 ಪೈಸೆ 3-60ಕ್ಕೆ ರಾಗಿ ಸಿಗುತ್ತದೆ ಅನ್ನುವಾಗ 10 ರೂಪಾಯಿ ಕೊಟ್ಟು

ಬೀಜದ ರಾಗಿ ತಗೊಂಡು ಹೋಗಿ ರೈತ ಹಾಕುತ್ತಾನಾ ಅನ್ನುವುದು ಒಂದು ಪ್ರಶ್ನೆ ಈ ವಿಷಯ ನಾನು ಒಂದೆರಡು ಸಲ ಸನ್ಮಾನ್ಯ ಸಚಿವರ ಜೊತೆ ಮಾತನಾಡಿದ್ದೇನೆ. ನಮಗಿರುವ ಒತ್ತಡಗಳಲ್ಲಿ ಕಡಿಮೆ ಧಾರಣೆಗೆ ಏನು ಸಿಗುತ್ತದೋ ಅದನ್ನು ಕೊಂಡುಕೊಳ್ಳಲು ಬಯಸುತ್ತೇವೆ. ದೃಢೀಕರಣದ ಬಗ್ಗೆ ನಮಗೆ ನಂಬಿಕೆ ಇಲ್ಲ. ಏಕೆಂದರೆ ನೀವು ಯಾರನ್ನು ಸೀಡ್‌ಗ್ರೋಯರ್ಸ್ ಸಪ್ಲೈಯರ್ಸ್ ಎಂದು ಇಟ್ಟುಕೊಂಡಿದ್ದೀರಿ ಅವರ ಬಗ್ಗೆ ವಿಶ್ವಾಸವನ್ನು ಜನಕ್ಕೆ ನೀವು ಕ್ರಿಯೇಟ್ ಮಾಡಲೇ ಇಲ್ಲ. ಆದರೆ ಸಬ್ಸಿಡಿ ಏನಿತ್ತು ಇದನ್ನು ಮಧ್ಯದವರು ಉಪಯೋಗಿಸಿಕೊಂಡು ಏನು 10 ರೂಪಾಯಿ ಕೊಟ್ಟರೂ ಪರವಾಗಿಲ್ಲ7 ರೂಪಾಯಿಗೆ ಬೀಜದ ರಾಗಿ ಸಿಗುತ್ತಿತ್ತು ಎಂದೇ ಹೇಳಿದಿವಿ ಅದೂ ಕೂಡ ಇವತ್ತು ಸಿಗಲಾರದಂತಹ ಸ್ಥಿತಿ ಆಗಿಬಿಟ್ಟಿದೆ. ಆ ಕಡೆ ಸನ್ಮಾನ್ಯ ಸಚಿವರು ಸ್ವಲ್ಪ ಗಮನಹರಿಸಬೇಕು. ಒಂದೇ ಒಂದು ಹೊಸ ವರೈಟಿ ಬಿಟ್ಟರೆ ಇನ್ನೆಲ್ಲ ಬೀಜಗಳಿಗೆ ಈ ವರ್ಷ ಸಬ್ಸಿಡಿ ನಿಂತಿದೆ. ಇನ್ನು ಈ ಬೀಜಗಳನ್ನು ಮಾಡುತ್ತಿರುವುದು ಈ ಹೇಗೆ ಮಾನ್ಯ ಭೈರೇಗೌಡರರು ಬಂದ ಮೇಲೆ ಸ್ವಲ್ಪ ಬೀಜ ಉತ್ಪಾದಕರಿಗೆ ಸಹಾಯ ಮಾಡಿದ್ದಾರೆ. ಅವರಿಗೆ ಪರವಾಗಿಲ್ಲ ಸರ್ಕಾರದ ವತಿಯಿಂದ ನಾನೇನಾದರೂ ಮಾಡಿಕೊಳ್ಳಬಹುದು ಅನ್ನುವ ಹಾಗಿದೆ ಮಾನವನ ಪ್ರಕೃತಿ ಸಹಜ ಹಕ್ಕು, ಅವರ್‍ಯಾರು ನಿಮ್ಮ ಹತ್ತಿರ ಏನು ಫೌಂಡೇಶನ್‌ಸ್ಟೋನ್ ಎಂದು ತಗೊಂಡುಹೋಗುತ್ತಾರೆ ಅದನ್ನು ಬಿತ್ತನೆ ಮಾಡಿ ಬೀಜ ತಂದು ನಿಮಗೆ ಕೊಡುತ್ತಾ ಇಲ್ಲ. ಆ ಬೀಜ ತಗೊಂಡುಹೋಗಿ ಅವರು ಯಾರಿಗೋ ಹಂಚುತ್ತಾರೆ, ಇನ್ಯಾರೋ ಬೆಳೆದದ್ದು ತಂದು ನಿಮಗೆ ಕೊಡುತ್ತಾರೆ. ಶೇಂಗಾ ಬೀಜದ ಬಗ್ಗೆ ಬೈರೇಗೌಡರೇ ನಿಮಗೆ ನಾನು ಹೇಳಬೇಕೂಂದರೆ 2,200 ರೂಪಾಯಿ ಇವತ್ತು ಶೇಂಗಾ ಬೀಜ ಇದೆ. ಮಾರುಕಟ್ಟೆಯಲ್ಲಿ 1000-1200 ರೂಪಾಯಿ ಸೆಲ್ಫ್‌ಪಾಲಿನೇಶನ್ ವರೈಟಿ ಇದು, ಇದರಲ್ಲೇನು ಭಾರೀ ವ್ಯತ್ಯಾಸ ಬರುವುದಿಲ್ಲ. ನಿಮ್ಮ ಸೀಡ್ ಕಾರ್ಪೋರೇಷನ್, ನಿಮ್ಮ ಕೆಓಎಫ್ ನಿಮ್ಮ ಇಲಾಖೆಯಲ್ಲಿ ಕೊಡುವ ಯಾವುದೇ ಬೀಜ 2,250 ರೂಪಾಯಿಗೆ ಕಮ್ಮಿ ಇಲ್ಲ. ಪಕ್ಕದ ಆಂಧ್ರ ಪ್ರದೇಶದಲ್ಲಿ1,400 ರೂಪಾಯಿಗೆ ಆ ಬೀಜ ಸಿಗುತ್ತದೆ. ನಮ್ಮ ತುಮಕೂರು ಜಿಲ್ಲೆಯ ಮಧುಗಿರಿ, ಪಾವಗಡ ಬೆಲ್ಟ್‌ನಲ್ಲಿ ನಿಮ್ಮ ಶೇಂಗಾಬೀಜ ಕೊಳ್ಳುವ ಪರಿಸ್ಥಿತೀನೇ ನಿರ್ಮಾಣ ಆಗಿಲ್ಲ. ಬೀಜ ತಗೊಂಡುಹೋಗಿ ದೃಢೀಕರಿಸಿದ ಬೀಜ ಕೊಡುತ್ತೀವಿ ಅನ್ನುವವರು ಸ್ವಂತ ಬೆಳೆದ ಬೀಜವಲ್ಲ ಅವರದೇ ಆದ ಯಾವುದೋ ವ್ಯವಸ್ಥೆ ಮಾಡಿಕೊಂಡುಬಿಟ್ಟರು. ಅವರೇ ಒಂದಷ್ಟು ಜನ ಶೇರ್‌ಹೋಲ್ಡರ್ಸ್ ಎಂದು ಆಗಿಬಿಟ್ಟರು, ಅವರಿಗೆ ತಾವು ಭಾರಿ ಬಜೆಟರಿ ಸಪೋರ್ಟ್ ಕೊಟ್ಟಿರಿ ಎಂದು ಅವರದೇ ಒಂದು ಜಾಲ ಇವತ್ತು ರಾಜ್ಯದಲ್ಲಿ ಆರಂಭವಾಗಿದೆ. ತಾವು ಈ ಕಡೆ ಸ್ವಲ್ಪ ಗಮನಹರಿಸಬೇಕು. ಇಲ್ಲೆಲ್ಲ ಒಳ್ಳೆಯ ಕೆಲಸವಾಗಬೇಕು, ರೈತನಿಗೆ ಒಳ್ಳಯ ಬೀಜ ಸಿಗಬೇಕೆಂದು ತಮಗೇನೂ ಒಳ್ಳೆಯ ಭಾವನೆ ಇದೆ, ವಾಸ್ತವ ಬೇರೆ ಆಗಿಬಿಟ್ಟಿದೆ. ಆ ಕಡೆ ನಮಗೇನು ಕಳಪೆಬೀಜ ಕೊಡುತ್ತಿದ್ದಾರೆ ಅದನ್ನು ತಾವು ಆಸಕ್ತಿವಹಿಸಿ ನೋಡಬೇಕು. ಇದನ್ನು ಬೀಜ ನಿಗಮ ಏನಿದೆ ಬಹುಶಃ 1.60 ಲಕ್ಷ ಹೆಕ್ಟೇರ್‌ಗೆ ಬೀಜ ಸಪ್ಲೈ ಮಾಡುವ ಯೋಜನೆ ನಿಮಗಿದೆ, ಯೋಚನೆ ಮಾಡಿದರೆ, ಅಷ್ಟೊಂದು ಸಾಮರ್ಥ್ಯ ಅವರಿಗಿಲ್ಲ, ಅದರ ಮೇಲೆ ನೀವು ಒಂದೇ ಕಡೆ ಕೊಳ್ಳಬೇಕೂಂತ ಏನು ನಿರ್ಧಾರ ತಗೊಂಡುಬಿಟ್ಟಿದ್ದೀರಿ ಇದರಿಂದ ನಮಗೆ ತೊಂದರೆಯಾಗಿದೆ. ಒಂದೇ ಕಡೆ ತಗೊಳ್ಳೋದು ಬಹುಶಃ ಕಷ್ಟವಾಗುತ್ತದೆ. ಯಾವುದಾದರೂ ಮನಾಪಲಿ ನೀವು ಕ್ರಿಯೇಟ್ ಮಾಡಿದರೆ ಇಂಟೆಗ್ರಿಟಿ ಒಳ್ಳೆಯದಿದ್ದು ಕನ್‌ಸರ್ನ್ ಇದ್ದರೆ ಒಳ್ಳೆಯದಾಗುತ್ತದೆ. ಸ್ವಲ್ಪ ಹೆಚ್ಚುಕಡಿಮೆಯಾದರೆ ಅಷ್ಟೇ ಕೆಡುಕೂ

ಆಗುತ್ತದೆ. ಅದಕ್ಕೇ ವಿಕೇಂದ್ರೀಕರಣ ಕನ್‌ಸೆಪ್ಟ್ ಸರಿ ಅನ್ನುವುದು. ಆಕಸ್ಮಾತ್ ತಪ್ಪುಗಳಾದರೆ ಜನಗಳ ಮೇಲೆ ಕಡಿಮೆ ಪರಿಣಾಮ ಆಗುತ್ತದೆ ಎಂದು ಭಾರಿ ಉತ್ತಮರ ಕೈಗೆ ನೀವು ಆಡಳಿತ ಕೊಟ್ಟು ವ್ಯವಸ್ಥೆ ಮಾಡಿದರೆ ನಿಜವಾಗಲೂ ಒಳ್ಳೆಯದಾಗುತ್ತದೆ. ಆದರೆ, ಇವತ್ತು ಈ ಭೂಮಿಮೇಲೆ ಅಂತಹ ಪರಿಸ್ಥಿತಿ ಇಲ್ಲ ಸ್ವಾಮಿ. ಅಷ್ಟೊಂದು ನಂಬಿಕಸ್ಥ ಜನ ನಮ್ಮೆದುರಿಗೆ ಬದುಕಿಲ್ಲ. ಅವನಿಗೆ ದುಡ್ಡು ಬೇಕು, ಇನ್ನೊಬ್ಬ ರೈತ ಸಾಯುತ್ತಿದ್ದಾನೋ ಬದುಕುತಿದ್ದಾನೋ ಯೋಚನೆ ಮಾಡುವ ಸ್ಥಿತಿಯಲ್ಲಿ ಇಲ್ಲ, ಆ ಕಡೆ ಹೆಚ್ಚಿಗೆ ತಾವು ಗಮನಕೊಡಬೇಕು ಬೀಜಗಳನ್ನು ಸರ್ಟಿಫೈ ಮಾಡುವ ಜನ ಏನಿದ್ದಾರೆ ಅವರ ಮೇಲೆ ಕೂಡ ನಿಗಾ ಇಡಬೇಕು. ಒಂದು ಮಾತು ನಾನು ಕೇಳಲು ಬಯಸುತ್ತೇನೆ. ಸೀಡನ್ನು ಸರ್ಟಿಫೈ ಮಾಡಿ ನಾವು ರೈತರಿಗೆ ಕೊಟ್ಟಮೇಲೆ ಅದು ಮೊಳಕೇನೆ ಹೊಡೆಯದೇ ಹೋದರೆ ನೀವು ಅವನಿಗೇ ದಂಡ ಹಾಕುತ್ತೀರಿ, ಅವನ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ ಅಂತ ಕಾನೂನು ಮಾಡಿಕೊಂಡಿದ್ದೀರಿ ಅದನ್ನು ಹಾಕಿ ಬೆಳೆದ ರೈತನ ಗತಿಯೇನು ಎಂದು ಎಲ್ಲೂ ಹೇಳಲೇ ಇಲ್ಲ. ನಿಮ್ಮ ಬೀಜದ ವೆರೈಟೀಸ್ ಬೇರೆ ಆಗಿದ್ದರೆ ಕನಿಷ್ಟವಾದರೂ ಪರಿಹಾರ ಕೊಡಬಾರದಾ? ಕನಿಷ್ಟ ಒಬ್ಬ ರೈತನಿಗೆ ಪರಿಹಾರ ಕೊಡಬೇಕಾದದ್ದು ನಿಮ್ಮ ಜವಾಬ್ದಾರಿ ಅಲ್ಲವೇ? ಇವತ್ತು ಅದಕ್ಕೆ ಶಾಸನ ಇಲ್ಲ. ನಾನು ಕೈವೊಡ್ಡಿಕೊಂಡು ಕೇಳಬೇಕು. ಕೆಲಾಮಿಟಿ ರಿಲೀಫ್ ಫಂಡ್ ನಲ್ಲೋ ಇನ್ಯಾವುದರಲ್ಲೋ ಸ್ವಾಮಿ ಏನೋ ಮಾಡಿ ನನ್ನನ್ನು ಉದ್ಧಾರ ಮಾಡಿ, ಇಲ್ಲದಿದ್ದರೆ ನಾನು ಸತ್ತುಹೋಗುತ್ತೇನೆ, ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಒಂದು ಕಾನೂನನ್ನು ತಾವು ಮಾಡಬೇಕಾಗಿತ್ತು. ಅಥವಾ ಕೇಂದ್ರಸರ್ಕಾರಕ್ಕೆ ಸಲಹೆಯನ್ನು ಮಾಡಬೇಕಾಗಿತ್ತು. ನೀವು ಏನಾದರೂ ಸರ್ಟಿಫೈಡ್ ಅಥವಾ ದೃಢೀಕರಣ ಮಾಡಿದ ಬೀಜವನ್ನು ಕೊಟ್ಟಿದ್ದರೆ ಅದರಲ್ಲೇನಾದರೂ ಮೂಲತಃ ದೋಷವಿದ್ದರೆ ಯಾರು ಬೀಜ ಸಪ್ಲೈ ಮಾಡಿರುತ್ತಾನೆ, ಮತ್ತೆ ಯಾರು ಅದನ್ನು ಸರ್ಟಿಫೈ ಮಾಡಿರುತ್ತಾನೆ, ಅವರಿಬ್ಬರ ಮೇಲೆ ಜವಾಬ್ದಾರಿಯನ್ನು ಫಿಕ್ಸ್ ಮಾಡಿ ರೈತನ ನೆರವಿಗೆ ತಾವು ಬರುವಂಥ ಸ್ಥಿತಿ ತರಬೇಕೆಂದು ಕೇಳುತ್ತೇನೆ. ಎರಡನೆಯದು ಬೀಜಗಳು ತಾವೇನು ಸರ್ಕಾರದ ವತಿಯಿಂದ ಸಪ್ಲೈ ಮಾಡುತ್ತಿದ್ದೀರಿ. ಅಥವಾ ಕಾರ್ಪೊರೇಷನ್ ವತಿಯಿಂದ ಸಪ್ಲೈ ಮಾಡುತ್ತಿದ್ದೀರಿ, ಅದು ಖಾಸಗಿಯವರ ಜೊತೆ ಸ್ಪರ್ಧೆ ಮಾಡುವುದಕ್ಕೆ ಲಾಯಕ್ ಆಗಿದ್ದಾವೆಯೇ? ಮೈಕೋದವರ ಜೊತೆ ಇಂಡೋ ಅಮೇರಿಕನ್ ಸೀಡ್ಸ್‌ನವರ ಜೊತೆ ನೀವೇನಾದರೂ ಇವತ್ತು ಕಾಂಪೀಟ್ ಮಾಡುವಂಥ ಬೀಜವನ್ನು ಇವತ್ತು ಕರ್ನಾಟಕದಲ್ಲಿ ಉತ್ಪತ್ತಿ ಮಾಡುತ್ತಿದ್ದೀರೋ? ಯಾರಾದರೋ ಮೊದಲನೇ ಆದ್ಯತೆ ಕೊಟ್ಟು ನಿಮ್ಮ ಹತ್ತಿರ ಬೀಜವನ್ನು ಕೊಳ್ಳುತ್ತಾರೆಯೇ? ನಿಮ್ಮ ಇಲಾಖೆಯಲ್ಲಿ ಏನಾದರೂ ಸಬ್ಸಿಡಿ ಇಲ್ಲ ಎಂದ ದಿವಸ ಯಾರಾದರೂ ಬಂದು ಅಲ್ಲಿ ಬೀಜ ಕೊಳ್ಳುತ್ತಾರೆ ಎಂದರೆ ಸನ್ಮಾನ್ಯ ಭೈರೇಗೌಡರೇ, ಇಲ್ಲ. ನಾವು ಅವರ ಜೊತೆಗೆ ಸ್ಪರ್ಧೆ ಮಾಡಲಿಕ್ಕಾಗಲಿಲ್ಲ. ನಾನು ಮೊನ್ನೆ ಲಂಕೇಶ್‌ರವರು ಒಂದು ಪುಸ್ತಕವನ್ನು ಓದುತ್ತಿದ್ದೆ. ಅವರದೇ ಚರಿತ್ರೆ ಬರೆದುಕೊಂಡಿರುವುದು. ಟೊಮೆಟೊವನ್ನು ನಾನು ಬೆಳೆಯಲಿಕ್ಕಾಗಲಿಲ್ಲ, ವಿಫಲವಾಗಿಬಿಟ್ಟೆ. ಟೊಮೆಟೊ ಬೆಳೆಯಲಿಕ್ಕೆ ಇಂಡೋ ಅಮೇರಿಕನ್ ಸೀಡ್ಸ್‌ನವರು ಅಥವಾ ರೂಪಾಲಿ ಸೀಡ್ಸ್‌ನವರೇ ಲಾಯಕ್ಕು. ನಾನು ಅದನ್ನು ಹಾಕಿ ಫೇಲ್ ಆದೆ ಎಂದು ಬರೆಯುತ್ತಾನೆ. ಎಷ್ಟು ಕಟು ಸತ್ಯ ಅದು ಎಂದು ತಾವು ಯೋಚನೆ ಮಾಡಬೇಕು.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು).

ಇವತ್ತು ನಮಗೇನು ಇದೆ, ಬಹುಶಃ ಅವರ ಜೊತೆ ಸ್ಪರ್ಧೆ ಮಾಡುವ ಶಕ್ತಿ ಇಲ್ಲ. ಹಾಗಾಗಿ ತಾವು ಇವತ್ತೇನು ಸರ್ಟಿಫೈಡ್ ಬೀಜಗಳನ್ನು ಕೊಡುವ ವ್ಯವಸ್ಥೆಯನ್ನು ತಂದಿದ್ದೀರಿ. ಅದರಿಂದ ಮನೋಪಲಿ ತರಲಿಕ್ಕೆ ತಾವು ವ್ಯವಸ್ಥೆಯನ್ನು ಮಾಡಿದ್ದೀರಿ. ಇಂಥವೇ ಕೆಲವು ಜನ ಬೆಳೆದುಕೊಡಬೇಕು ಎಂದು ಹೇಳಿ ನೀವು ನಿಗದಿ ಮಾಡಿದ್ದೀರಿ, ಅದರಲ್ಲೇನಾದರೂ ವಿಫಲತೆಯಾದರೆ ಕನಿಷ್ಟ ರೈತನಿಗೆ ಪರಿಹಾರ ಕೊಡುವ ಸ್ಥಿತಿಯನ್ನು ತಾವು ತರಬೇಕು. ಇದಾದನಂತರ ರಾಸಾಯನಿಕ ಗೊಬ್ಬರ ಏನು ಬಳಕೆಯಾಗುತ್ತಿದೆ, ಅದು ಒಂದು ವಿಪರ್ಯಾಸ. ಒಂದು ಕಡೆ ತಾವು ರಾಸಾಯನಿಕ ಗೊಬ್ಬರ ಬಳಸಿ ಎಂದು ಹೇಳಿ ಬಜೆಟರಿ ಸಪೋರ್ಟ್ ಮಾಡುತ್ತೀರಿ. ಇನ್ನೊಂದು ಕಡೆ ಜೈವಿಕ ಗೊಬ್ಬರಕ್ಕೆ ನಾವು 35 ಲಕ್ಷ 45 ಲಕ್ಷ ಅನುದಾನ ಇಟ್ಟಿದ್ದೇವೆ ಎನ್ನುತ್ತೀರಿ. ನಾನು ಯಾರೋ ಅಧಿಕಾರಿಗಳನ್ನು ಕರೆದು ಕೇಳಿದರೆ ಅದು ಅರ್ಧ, ಇದು ಅರ್ಧ ಬಳಸಿಕೊಂಡು ಹೋಗಬಹುದು ಎನ್ನುತ್ತಾರೆ. ಇದೇನು ವಾಸ್ತವವೇ? ಇದಕ್ಕೇನಾದರೂ ಬುದ್ಧಿ ಇದೆಯೇ ಎಂದು ಕೇಳಬೇಕಾಗುತ್ತದೆ. ನೀವು ಒಪ್ಪಿಕೊಳ್ಳಬೇಕು, ಇವತ್ತು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್‌ನ್ನು ಬಳಸುವುದು ಮಾರಕವಾದ ವಸ್ತು ಎಂದು, ಹೇಳಿ ನೀವು ತೀರ್ಮಾನಕ್ಕೆ ಬಂದರೆ ನೇರವಾಗಿ ಹೇಳಿಬಿಡಿ. ಇನ್ನು ಇದನ್ನು ಬಳಸಬೇಡಿ. ಈಗ ಆಗಿರುವ ಅಪಾಯವೇ ಸಾಕು. ಇನ್ನು ಮುಂದೆ ಇದರಿಂದ ತೊಂದರೆಯಾಗುವುದು ಬೇಡ ಎಂದು. ಅದು ಬೇಕು, ಇದು ಬೇಕು ಎಂದು ಹೇಳಿ ಇಲ್ಲಿಯವರೆಗೆ ಬೆಳೆದುಕೊಂಡು ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ಇವತ್ತು ಈ ಗೊಬ್ಬರಗಳು ಕೂಡ ಕಳಪೆ ದರ್ಜೆಯಲ್ಲಿವೆ. ಏಕೆಂದರೆ ತಾವು ತಮ್ಮ ಯೋಜನೆಯಲ್ಲಿ ಹೇಳಿದ್ದೀರಿ. ಯಾರು ಬೇಕಾದರೂ ಗೊಬ್ಬರ ಕೊಡಬಹುದು. ನಾವು ಕೊಂಡು ಕೊಂಡು ಸಪ್ಲೈ ಮಾಡುತ್ತೇವೆ ಎಂದು ಹೇಳಿದ್ದೀರಿ. ಮೊದಲೇ ಒಂದು ನಿರ್ಧಾರ ಇತ್ತು. ನಿಗದಿತವಾದ ಕಂಪನಿಯವರು ರಾಷ್ಟ್ರಮಟ್ಟದ ಅರ್ಹತೆ, ಯೋಗ್ಯತೆ ಇರುವವರು ಮಾತ್ರ ಕೊಡುತ್ತಿದ್ದವರು ಇವತ್ತ ತಮಗೆ ಗೊಬ್ಬರವನ್ನು ಸಪ್ಲೈ ಮಾಡಲಿಕ್ಕೆ ಕಡಿಮೆಮಾಡಿದ್ದಾರೆ. ತಾವು ಎರಡು ವರ್ಷದ್ದು, ಮೂರು ವರ್ಷದ್ದು ಮಾಹಿತಿಯನ್ನು ತೆಗೆಸಿ ನೋಡಿದರೆ ನೀರಾವರಿ ಮತ್ತೆ ತೋಟಗಾರಿಕೆ ಬೆಳೆ ಇರುವ ಕಡೆ ಸ್ವಲ್ಪ ಗೊಬ್ಬರದ ಕನ್‌ಸಮ್ಸನ್ ಚೆನ್ನಾಗಿರುವುದು ಬಿಟ್ಟರೆ, ಖುಷ್ಕಿ ಬೆಳೆಗೆ ರೈತ ನಿಮ್ಮ ಗೊಬ್ಬರವನ್ನು ಹೆಚ್ಚಾಗಿ ಬಳಸುತ್ತಿಲ್ಲ. ಅದಕ್ಕೆ ಎರಡು ಕಾರಣ. ಒಂದು ದುಬಾರಿ. ಇನ್ನೊಂದು ಬಹುಶಃ ಗೊಬ್ಬರದ ಕ್ವಾಲಿಟಿ. ಗುಣಮಟ್ಟ ಕಡಿಮೆಯಾಗಿದೆ ಎಂದು ಹೇಳಿ ತಾವು ಬಳಸಬೇಕು. ಇನ್ನು ಇನ್‌ಪುಟ್ಸ್‌ನಲ್ಲಿ ಸಂರಕ್ಷಣಾ ರಾಸಾಯನಿಕಗಳು ಏನಾಗಿದೆ ಸ್ವಾಮಿ? ಕರ್ನಾಟಕ ರಾಜ್ಯದಲ್ಲಿ ಪೆಸ್ಟಿಸೈಡ್ಸ್ ಕಂಪನಿಗಳು ಎಷ್ಟು ಹುಟ್ಟಿವೆ ಎಂದರೆ ಈ ಲಿಸ್ಟ್ ಹೇಳುವುದಕ್ಕೆ ಭೈರೇಗೌಡರ ಕೈಯಲ್ಲಿ ಆಗುವುದಿಲ್ಲ. ಅವರು ಬೇಕಾದ್ದು ಹೇಳುತ್ತಾರೆ. ಎಕ್ಸೈಸ್ ಬಗ್ಗೆ ಹೇಳುತ್ತಾರೆ. ಕೆ.ಇ.ಬಿ.ಯದು ಹೇಳುತ್ತಾರೆ. ನಾನೇನಾದರೂ ಎಷ್ಟು ಕಂಪನಿಗಳು ಪೆಸ್ಟಿಸೈಡ್ಸ್ ಸಪ್ಲೈ ಮಾಡುತ್ತೇವೆ ಎಂದು ಹೇಳುವುದಕ್ಕಾಗದೆ ಸೋತುಬಿಟ್ಟು ಆಗ್ರೋ ಇಂಡಸ್ಟ್ರೀಸ್‌ನವರಿಗೆ ವಹಿಸಿಬಿಟ್ಟರು. ಅವರು ನೀವೇ ಯಾರಾದರೂ ನಾಲ್ಕೈದು ಕಂಪನಿಯವರಿಗೆ ಹೇಳಿ ಬಿಟ್ಟು ಒಂದಿಷ್ಟು ಪೆಸ್ಟಿಸೈಡ್ಸ್ ಸಪ್ಲೈ ಮಾಡಿಬಿಡಿ ಎಂದು ಹೇಳಿದರು. ಆ ಪೆಸ್ಟಿಸೈಡ್ಸ್ ಕಂಪನಿಯವರು ಹೇಗೆ ಆಗಿದ್ದಾರೆಂದರೆ ಹೇಳುವ ಸ್ಥಿತಿಯಲ್ಲಿಲ್ಲ. ಏನು ಸಪ್ಲೈ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನಿಮ್ಮ ಇಲಾಖೆಯಲ್ಲಿ 4 ಜನ 5 ಜನ ಈ ಅಧಿಕಾರಿಗಳನ್ನು ಅವರ ಕೆಲಸದ ಜೊತೆ ಎಂಟ್ರಸ್ಟ್ ಮಾಡಿದ್ದೀರಿ ಈಕ್ವಾಲಿಟಿ ಕಂಟ್ರೋಲ್‌ಗೆ, ಅವರಿಗೆ

ಅದರಲ್ಲಿ ಆಸಕ್ತಿಯೇ ಇಲ್ಲ. ಅವರು ಯಾವುದನ್ನೂ ಎಕ್ಸಾಮಿನ್ ಮಾಡಿಸುವುದಕ್ಕೆ ಹೋಗುವುದೇ ಇಲ್ಲ. ಹಾಗೂ ಒಂದು ಪಕ್ಷ ಮಾಡಿಬಿಟ್ಟರೆ ಅವರ ಮೇಲೆ ಕೇಸ್ ಹಾಕಲಿಕ್ಕೆ ಇವರಿಗೆ ಅಧಿಕಾರವೇ ಇಲ್ಲ. ನಾನು ತಮಗೊಂದು ಸಲಹೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ನೀವೇನಾದರೂ ಗೊಬ್ಬರ ಅಥವಾ ಕಳಪೆ ಬೀಜ ಅಥವಾ ಪೆಸ್ಟಿಸೈಡ್ಸ್ ಮೇಲೆ ಪಬ್ಲಿಕ್ ಪ್ರಾಸಿಕ್ಯೂಟರ್ ನಂಬಿಕೊಂಡು ಕೇಸು ನಡೆಸುತ್ತೇನೆ ಎಂದು ತಿಳಿದುಕೊಂಡಿದ್ದರೆ ಆ ವಿಚಾರವನ್ನು ಬದಲಾಯಿಸಬೇಕು. ಒಂದು ಪ್ಯಾನಲ್ ಆಫ್ ಅಡ್ವೋಕೇಟ್ಸ್ ಆದರೂ ಮಾಡಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಕೇಸ್ ಹಾಕುವುದಕ್ಕೆ ಮಾಡಬೇಕು. ನಿಮ್ಮ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ಇಂಥ ಕೇಸುಗಳನ್ನು ನಡೆಸಲಿಕ್ಕೆ ಆಸಕ್ತಿಯೂ ಇಲ್ಲ. ವಿತ್ ಡ್ಯೂ ರಿಗಾರ್ಡ್ಸ್ ನಾನೂ ಕೂಡ ಎನ್‌ರೋಲ್ಡ್ ಅಡ್ವೋಕೇಟ್. ಆಸಕ್ತಿ ಇಲ್ಲ ಎಂದರೆ ಕ್ರಿಮಿನಲ್ ಕೇಸುಗಳನ್ನು ನಡೆಸುವಷ್ಟು ಖುಷಿಯಾಗಿ ಈ ಕೇಸುಗಳನ್ನು ನಡೆಸುವುದಕ್ಕಾಗುವುದಿಲ್ಲ ಅವರು. ದಯಮಾಡಿ ಅಲ್ಲಿರುವ ನಿಮ್ಮ ಜಾಯಿಂಟ್ ಡೈರಕ್ಟರ್‌ಗೂ, ಡೆಪ್ಯೂಟಿ ಡೈರೆಕ್ಟರ್‌ಗೂ ಅವರ ಹಂತದಲ್ಲಿ ಒಂದು ಪ್ಯಾನಲ್ ಆಫ್ ಅಡ್ವೋಕೇಟ್ಸ್ ಮಾಡಿ ಇಂಥ ಕಳಪೆ ದರ್ಜೆ ಬೀಜ ಅಥವಾ ಗೊಬ್ಬರವನ್ನು ಸಪ್ಲೈ ಮಾಡಿದಂಥವರ ವಿರುದ್ಧವಾಗಿ ಕೇಸ್ ಹಾಕಲಿಕ್ಕೆ ಅದನ್ನು ಎಕ್ಸ್‌ಪಿಡಿಯೇಟ್ ಮಾಡಲಿಕ್ಕೆ ತಾವು ಎಲ್ಲಾದರೂ ಅವಕಾಶ ಮಾಡಬೇಕು. ಇದರ ಜೊತೆಗೆ ನಮಗೆ ಭಾರಿ ನೋವಿನ ಸಂಗತಿ ಎಂದರೆ ಈ ವಿಶ್ವವಿದ್ಯಾನಿಲಯಗಳು. ನಾನು ಇನ್‌ಪುಟ್ಸ್‌ನೊಳಗೆ ಮಾತನಾಡುತ್ತಿದ್ದೇನೆ ಅಧ್ಯಕ್ಷರೇ. ಇನ್‌ಪುಟ್ಸ್ ಕಾರ್ಯಕ್ರಮದ ಬಗ್ಗೆ ತಾವು ಏನು ಮಾಡಬೇಕಾಗಿತ್ತು? ಯಾವ ರೈತನಿಗೆ ಯಾವ ಕಾಲಕ್ಕೆ ಯಾವ ಬೆಳೆ ಹಾಕಬೇಕು. ಯಾವ ಕಾಲದಲ್ಲಿ ನಿಮ್ಮ ಋತುಮಾನ ಹೇಗೆ ಇರುತ್ತದೆ, ಅಥವಾ ವಾತಾವರಣ ಹೇಗೆ ಇರುತ್ತದೆ ಅಥವಾ ಪ್ರಕೃತಿ ಹೇಗೆ ಇರುತ್ತದೆ ಎಂದು ತಿಳಿಸುವ ವ್ಯವಸ್ಥೆ ಮಾಡಬೇಕು ಏಕೆಂದರೆ ಇದು ಸೆಟ್‌ಲೈಟ್ ಏಜ್. ಎಲ್ಲರಿಗೂ ಗೊತ್ತು. ಮಳೆ ಯಾವಾಗ ಬೀಳಬಹುದು. ಮೋಡ ಯಾವಾಗ ಆಗಬಹುದು. ಅಥವಾ ನೀವು ಬೆಳೆದ ಬೆಳೆ ಹತ್ತು ವರ್ಷ ಆದಮೇಲೆ ಎಕ್ಸಟಿಂಕ್ಟ್ ಆಗುತ್ತೆ, ಹೊಸ ವೆರೈಟಿ ಯಾವಾಗ ಬೆಳೆಯಬೇಕು, ಇದನ್ನು ಹೇಳಲಿಕ್ಕೆ ನಿಮ್ಮ ಎರಡು ಯೂನಿವರ್ಸಿಟಿಗಳಿಂದ ಆಗಲೇ ಇಲ್ಲ. ನಿಮ್ಮ ಎರಡು ವಿಶ್ವ ವಿದ್ಯಾನಿಲಯಗಳು ಸಂಶೋಧನೆಯನ್ನು ನಡೆಸಿದ್ದರೆ ಒಂದು ಪಿಹೆಚ್‌ಡಿ ತೆಗೆದುಕೊಳ್ಳುವುದಕ್ಕೆ, ಇನ್ನೊಂದು ಇನ್ಯಾರೊ ಮಾಡಿದ್ದನ್ನು ನಾನು ಕಾಪಿ ಮಾಡಿದ್ದಕ್ಕೆ. ಕರ್ನಾಟಕದಲ್ಲಿರುವ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ರೈತರಿಗೆ ಬೇಕಾದ ಸಂಸ್ಥೆ ಎಂದು ಅನಿಸಿಕೊಳ್ಳಲೇ ಇಲ್ಲ. ಇಲ್ಲಿ ಎರಡು ಸಾವಿರ ಚಿಲ್ಲರೆ ವಿದ್ಯಾರ್ಥಿಗಳಿಗೆ ನಾಲ್ಕು ಸಾವಿರ ಸಿಬ್ಬಂದಿ ಇದ್ದಾರೆ. ರೂರಲ್ ರೀಸರ್ಚ್ ಸ್ಟೇಷನ್‌ನಲ್ಲಿ ಮಾಡಿದ್ದೀರಿ. ಯಾರ ಸಂಪರ್ಕ ಮಾಡುತ್ತಿದ್ದಾರೆ? ಏನು ಕೆಲಸ ಮಾಡುತ್ತಿದ್ದಾರೆ? ಅಷ್ಟೊಂದು ಸಿಬ್ಬಂದಿ ಇದ್ದುಕೊಂಡು, ಯಾವತ್ತಾದರೂ ನಿಗಾ ಇಟ್ಟಿದ್ದೀರಾ? ಸ್ವಲ್ಪ ನೀವು ಆರ್.ಆರ್. ಎಸ್.ಗಳ ಮೇಲೆ ಕಂಟ್ರೋಲ್ ಇವತ್ತು ತೆಗೆದುಕೊಳ್ಳಬೇಕು. ನಾನು ಎರಡು ಮೂರು ಸಲ ಹೇಳಿದ್ದೆ. ಆ ಭಾಗದಲ್ಲಿರುವ ರೈತರ ಜೊತೆ ಸ್ಪಂದನ ಮಾಡಿ, ಅವರ ಜೊತೆ ಇಂಟರ್‍ಯಾಕ್ಟ್ ಮಾಡಿ ಆ ಬೆಳೆಯನ್ನು ಏನಾದರೂ ಮಾಡಿ ಇವತ್ತೊಂದು ನೀವು ಫೌಂಡೇಷನ್ ಸೀಡ್ ಎಂದು ಹೇಳಿಕೊಂಡು ಹೋಗುತ್ತಿದ್ದೀರಿ. ಇವತ್ತು ಫೌಂಡೇಷನ್ ಸೀಡ್ ಇಲ್ಲ. ಅದೆಲ್ಲಾ ಪಲ್ಯೂಟೆಡ್ ಸೀಡ್. ನಿಮ್ಮ ಹತ್ತಿರ ಹಸಿರುಗಂಬಿ ರಾಗಿ ಎಂದರೆ ಎಲ್ಲೂ ಸಿಕ್ಕುವುದಿಲ್ಲ. ಸುಮ್ಮನೆ ಮಾತನಾಡುತ್ತೇವೆ ದೊಡ್ಡದಾಗಿ ಹಸಿರುಗಂಬಿ ರಾಗಿ ಎಂದು.

ಒರಿಜಿನಲ್ ಫೌಂಡೇಷನ್ ಜೋಳ ನಿಮ್ಮ ಹತ್ತಿರ ಯಾವುದೂ ಇವತ್ತು ಸಿಕ್ಕುತ್ತಿಲ್ಲ. ಎಲ್ಲಾ ಪಲ್ಯೂಟ್ ಆಗಿರುವುದೇ. ಆ ಫೌಂಡೇಷನ್ ಸೀಡನ್ನು ಯಾರಾದರೂ ಉಳಿಸಿಕೊಂಡಿದ್ದಾರೆಯೇ ಎಂದು ನೋಡಿದರೆ ನಿಮ್ಮ ಯೂನಿವರ್ಸಿಟಿಯವರ ಹತ್ತಿರವೂ ಇಲ್ಲ. ಅದರಿಂದ ನಾನು ಡೆವಲಪ್ ಮಾಡಿದ್ದೇನೆ, ನಾನು ಸೀಡಿಗೆ ಸಪೋರ್ಟ್ ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ ಯಾವುದೇ ಸಂಶೋಧನೆ ರೈತರಿಗೆ ಬೇಕಾದ್ದು, ರೈತನ ಕಷ್ಟಕ್ಕೆ ಬೇಕಾದ್ದು ಅವನು ಬೆಳೆಯುತ್ತಿರುವ ಬೆಳೆಯಲ್ಲಿ ಹೆಚ್ಚು ಬೆಳೆ ಬೆಳೆಯುವಂಥಾದ್ದು, ಹೆಚ್ಚು ಲಾಭ ತರುವ ಬೆಳೆಯನ್ನು ಗುರುತು ಮಾಡಲಿಕ್ಕಾಗಲಿಲ್ಲ. ರಾಗಿ ಇಂಡಾಫ್ 1 ರಿಂದ 17ರವರೆಗೆ ಬಂದರು ಅಷ್ಟೆ. ಈಗ ಯಾವುದೋ ಒಂದು ಸಣ್ಣ ವೆರೈಟಿಯನ್ನು ಡೆವಲಪ್ ಮಾಡಿದರೆ ಅವರಿಗೆ ಬೇಕಾಗಿಲ್ಲ. ಈ ಕಡೆ ತಾವು ಗಮನ ಹರಿಸಬೇಕು. ಯೂನಿವರ್ಸಿಟಿಗಳಲ್ಲಿ ಹೆಚ್ಚು ಬರೀ ರಾಜಕೀಯ. ಇವತ್ತು ಇನ್ಸ್ಟ್ರಕ್ಟರ್. ನಾಳೆ ಅಸಿಸ್ಟೆಂಟ್ ಪ್ರೊಫೆಸರ್. ನಾಡಿದ್ದು ಅಸೋಸಿಯೇಟ್ ಪ್ರೊಫೆಸರ್. ಮರುದಿವಸವೇ ಪ್ರೊಫೆಸರ್. ತಮಗೆ ಗೊತ್ತು. 23-24 ವರ್ಷದವರೆಲ್ಲರೂ ಅಲ್ಲಿ ಪ್ರೊಫೆಸರ್‌ಗಳು. ಮತ್ತೆ ಅವರಿಗೆ ಯಾವಾಗಲೋ ವಿರಾಮವಿದ್ದಾಗ ಒಂದೊಂದು ಪಿಹೆಚ್‌ಡಿ ಬೇರೆ ಸಿಕ್ಕಿಬಿಟ್ಟಿರುತ್ತದೆ. ನಾನು ಯೂನಿವರ್ಸಿಟಿ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಆದರೆ ಉತ್ತರ ಭಾರತದ ಯೂನಿವರ್ಸಿಟಿಗೆ ಅಗ್ರಿಕಲ್ಚರ್ ಯೂನಿವರ್ಸಿಟಿ ನಿಮ್ಮ ಹೆಬ್ಬಾಳದ್ದು ಆಗಲಿ? ಧಾರವಾಡದ್ದಾಗಲೀ ಹೋಲಿಸಿದರೆ ಯಾರು ಗೌರವ ಕೊಡುವ ಸ್ಥಿತಿಯಲ್ಲಿ ಇವತ್ತು ಇಲ್ಲ. ಅವು ರಾಜಕೀಯ ಕೇಂದ್ರಗಳಾಗಿವೆ. ಇವತ್ತು ಸಂಶೋಧನೆ ನಿಮ್ಮ ರೀಸರ್ಚ್ ಡೀನ್ ಇವತ್ತು ಯೂನಿವರ್ಸಿಟಿಯಲ್ಲಿ ಸೊನ್ನೆಯಾಗಿದ್ದಾರೆ. ಅವರನ್ನು ತಾವು ಗಮನಿಸಬೇಕಾಗುತ್ತದೆ. ಈ ಯೂನಿವರ್ಸಿಟಿಗಳಿರುವುದು ಯಾರಿಗೋಸ್ಕರ? ಅವರು ಪಿಹೆಚ್‌ಡಿ ತೆಗೆದುಕೊಳ್ಳುವುದಕ್ಕೆ, ಅವರು ಪ್ರಮೋಷನ್ ತೆಗೆದುಕೊಳ್ಳುವುದಕ್ಕಲ್ಲ ಸ್ವಾಮಿ. ನಮಗೇನಾದರೂ ಸಹಾಯವಾಗಲಿ ಎಂದು. ಈ ದೇಶದ ಜನಕ್ಕೆ ತೆರಿಗೆ ಹಾಕಿ ತಂದು ಅವರಿಗೆ ಹಣ ಕಟ್ಟುತ್ತಿರುವುದು. ಗೌರ್ನಮೆಂಟ್ ಆಫ್ ಇಂಡಿಯಾ, ಐ.ಸಿ.ಎ.ಆರ್.ನವರು ನಾವು ದುಡ್ಡು ಕೊಡುತ್ತಿರುವುದು ಒಂದೇ ಒಂದು ಮೂಲ ಉದ್ದೇಶ ಈ ರಾಜ್ಯದ ಕೃಷಿಗೆ ಅವಲಂಬನೆಯಾಗಿ, ಪೂರಕವಾಗಿ ಏನಾದರೂ ಸ್ವಲ್ಪ ಸಹಾಯ ಮಾಡುವಂಥ ಸಂಶೋಧನೆಯನ್ನು ಮಾಡಲಿ ಎಂದು ಹೇಳಿ ಮಾಡಿರುವುದು. ಆ ಕಡೆ ಅವು ಬಹಳ ವಿಫಲವಾಗಿದೆ. ತಾವು ದಯಮಾಡಿ ಅವರ ಬಗ್ಗೆ ಗಮನ ಹರಿಸಬೇಕು. ಇನ್ನು ಇದರ ಜೊತೆಗೆ ಆ ಸಂಶೋಧನೆಗೆ ಪೂರಕವಾದ ತರಬೇತಿ ನಮಗೆ ಆಗಬೇಕಾಗುತ್ತೆ. ತಾವು ತಮ್ಮ ಯೋಜನೆಗಳಲ್ಲಿ ಬರೆಯುತ್ತೀರಿ, ತರಬೇತಿ ಮಾಡುತ್ತೇವೆ, ಮಹಿಳೆಯರಿಗೆ ಮಾಡುತ್ತೇವೆ, ಜಿಲ್ಲೆಯಿಂದ ಜಿಲ್ಲೆಗೆ ಕಳುಹಿಸುತ್ತೇವೆ, ರಾಜ್ಯದಿಂದ ರಾಜ್ಯಕ್ಕೆ ಕಳುಹಿಸುತ್ತೇವೆ. ಯಾವ ವಿಷಯದ ಬಗ್ಗೆ ತರಬೇತಿ ಕೊಡುತ್ತೀರಿ? ಯಾವುದಾದರೂ ಒಂದು ಹೊಸ ವಸ್ತುವಿದ್ದರೆ ತರಬೇತಿಗೆ ಹೋಗುವವರಿಗೂ ಆಸಕ್ತಿ ಇರುತ್ತದೆ. ಹೇಳಿದ್ದೇ ಹೇಳಿದರೆ ಯಾರು ಕೇಳುತ್ತಾರೆ? ಒಂದು ಹೊಸ ಸಂಶೋಧನೆ ಮಾಡಿ ಇದರಿಂದ ನಿನಗೆ ಪ್ರಯೋಜನವಾಗುತ್ತದೆ. ಬೆಸ್ಟ್ ರೆಮಿಡಿ ಇವತ್ತು ಬೆಸ್ಟ್ ರೆಮ್ಯುನರೇಷನ್. ನಮಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದರೆ ಅದೇ ಬೆಸ್ಟ್ ರೆಮಿಡಿ. ಯಾರು ನಮಗೆ ಹೇಳಬೇಕಾಗಿಲ್ಲ. ಟ್ರೈನ್ ಮಾಡಬೇಕಾಗಿಲ್ಲ. ನಿನಗೆ ಇಲ್ಲಿ ಆದಾಯ ಜಾಸ್ತಿ ಸಿಗುತ್ತದೆ ಎಂದರೆ ಹುಡುಕಿಕೊಂಡುಹೋಗಿ ರೈತರು ಆ ಕೆಲಸವನ್ನು ಮಾಡುತ್ತಾರೆ. ಆ ಕೆಲಸ ಮಾಡುವ ಕಡೆ ಸಂಶೋಧನೆಯಾಗಲಿಲ್ಲ. ಟ್ರೈನಿಂಗ್ ಆಗಲಿಲ್ಲ.

ಅಧ್ಯಕ್ಷರು : ಅಗ್ರಿಕಲ್ಚರ್ ಯೂನಿವರ್ಸಿಟಿಯಿಂದ ಬೇರೆ ಬೇರೆ ಡಿಗ್ರಿಗಳನ್ನು ಪಡೆದುಕೊಂಡು ಬರುತ್ತಾರಲ್ಲ. ಅವರಲ್ಲಿ ಎಷ್ಟು ಜನ ಇಂಡಿಪೆಂಡೆಂಟ್ ಆಗಿ ಏನಾದರೂ ಆ ಉದ್ದೇಶ ಹುಡುಕಿಕೊಂಡು ಹೋಗುತ್ತಿದ್ದಾರೆ, ಎಷ್ಟು ಜನ ಸರ್ವೀಸಿಗೆ ಹೋಗುತ್ತಿದ್ದಾರೆ ಎನ್ನುವ ಐಡಿಯಾ ಏನಾದರೂ ಇದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಸ್ವಲ್ಪ ಜಿ.ವಿ.ಎಸ್.ಸಿ.ಓದಿರುವ ಹುಡುಗರು ಇಂಡಿಪೆಂಡೆಂಟ್ ಆಗಿ ಹೋಗುತ್ತಿದ್ದಾರೆ. ಬಿ.ಎಸ್‌ಸಿ, ಎ.ಜಿ.ಯವರು ಎಲ್ಲೂ ಕಾಣಲಿಲ್ಲ. ಅವರು ಗೌರ್ನಮೆಂಟ್ ಕೆಲಸದ ಮೇಲೆ ಡಿಪೆಂಡ್ ಆಗಿರುವುದನ್ನು ಬಿಟ್ಟರೆ ಸ್ವಂತ ಮಾಡುತ್ತೇನೆ ಎಂದು ಕಾಣಲಿಲ್ಲ. ಸತ್ಯವಾಗಿ ಹೇಳಬೇಕೆಂದರೆ ನನ್ನ ಕ್ಷೇತ್ರದಲ್ಲಿ ಒಬ್ಬ ಹುಡುಗ ಎಂಎಸ್‌ಸಿ(ಎ.ಜಿ) ಮಾಡಿ ಬಾಳೆ ಹಾಕಿಬಿಟ್ಟಿದ್ದ. ನಾನು ಸದನದಲ್ಲಿ ಅವತ್ತು ಹೇಳಿದೆ. ನಾನು ಬಹಳ ನೊಂದು ಹೇಳಿದೆ. ಸುದರ್ಶನ್ ಎನ್ನುವ ಒಬ್ಬ ಹುಡುಗ ಒಂದೂವರೆ ಸಾವಿರ ಗಿಡ ಬಾಳೆಯನ್ನು ಹಾಕಿದ್ದ. ಮೊನ್ನೆ ಗಾಳಿಬಂದು ಪೂರಾ ಬಾಳೆ ಬಿದ್ದುಹೋಯಿತು.

ಅಧ್ಯಕ್ಷರು : ಫಾರೆಸ್ಟ್ರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಫಾರೆಸ್ಟ್ರಿಗೆ ಸ್ಕೋಪೇ ಇಲ್ಲವಲ್ಲ.

ಅಧ್ಯಕ್ಷರು : ಡೈರಿ ಡೆವಲಪ್‌ಮೆಂಟ್.

ಶ್ರೀ ಜೆ.ಸಿ. ಮಾಧುಸ್ವಾಮಿ : ಡೈರಿ ಡೆವಲಪ್‌ಮೆಂಟ್‌ನಲ್ಲಿ ಬಹುಶಃ ನಾನು ಕೆ.ಎಂ.ಎಫ್. ಅನುಭವದಲ್ಲಿ ಹೇಳಬೇಕೆಂದರೆ ಕ್ಯಾಂಪಸ್ ರೆಕ್ರೂಟ್‌ಮೆಂಟ್‌ನ್ನೇ ಕಡಿಮೆ ಮಾಡಿಬಿಟ್ಟಿದ್ದೇವೆ.

ಅಧ್ಯಕ್ಷರು : ಪಾಸ್ ಮಾಡಿಕೊಂಡು ಬಂದವರು ಏನು ಮಾಡುತ್ತಿದ್ದಾರೆ ಎಂದು ಹೇಳಿ. ಸ್ವಂತ ವ್ಯಾಪಾರ ಏನಾದರೂ ಮಾಡುತ್ತಿದ್ದಾರೆಯೇ? ಮಾರ್ಕೆಟಿಂಗ್ ಅಂಡ್ ಕೋಆಪರೇಷನ್.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್ ತಾವು ಟೈಮ್ ಕೊಟ್ಟರೆ ಹೇಳುತ್ತೇನೆ. ಎರಡು ಮೂರು ಕೋರ್ಸ್ ಬಗ್ಗೆ ನಾವು ಹೇಳಬೇಕು. ಜನರಲ್ ಕೋರ್ಸ್‌ನಲ್ಲಿ ಹೇಳುತ್ತಿರುವುದು ಸೈಕಾಲಜಿ, ಕ್ರಿಮಿನಾಲಜಿ, ಎಕನಾಮಿಕ್ಸ್ ಎಂದು ಮೈಸೂರಿನಲ್ಲಿ ಪ್ರಾರಂಭ ಮಾಡಿದಾಗ ಹೇಳಿದ್ದರು; ಸಬ್ ಇನ್ಸಪೆಕ್ಟರ್ ಕೆಲಸಕ್ಕೆ ಅರ್ಹತೆ ಎಂದು ಹೇಳಿದ್ದರು. ಕೇವಲ ಒಂದೇ ಒಂದು ಪರ್ಸೆಂಟ್ ಕೆಲಸ ಸಿಗಲಿಲ್ಲ. ಡೈರಿನಲ್ಲಿ ಹಾಗೆಯೇ. ನಾವೇನು ಡೈರಿನಲ್ಲಿ ರಿಕ್ರೂಟ್‌ಮೆಂಟ್ ಮಾಡಿದೆವು. ಡೈರಿ ಡಿಪ್ಲೋಮೊ ಬದಲು ಡಿಗ್ರಿಯನ್ನು ಡೈರಿ ಟೆಕ್ನಾಲಜಿಯಲ್ಲಿ ತಗೆದುಕೊಂಡು ಬನ್ನಿ ಎಂದು ಹೇಳಿದೆವು. ಯಾರೂ ಇವತ್ತು ಸ್ವಂತ ಕೆಲಸ ಮಾಡಲಿಕ್ಕೆ ಲಾಯಕ್ಕಾದ ಗ್ರಾಜುಯೇಟ್ಸ್ ಆಗಿ ಆಚೆಗೆ ಬರಲೇ ಇಲ್ಲ. ನಾನೂ ಕೂಡ ಒಂದು ಸಲ ಅವರ Alumnus ceremony ಹೋಗಿದ್ದೆ. ನಾನು ಅವತ್ತು ನೇರವಾಗಿ ಹೇಳಿದೆ. ಯೂನಿವರ್ಸಿಟಿಯಿಂದ ತೆಗೆದುಕೊಂಡು ಬರುವ ಡಿಗ್ರಿಯನ್ನು ರೆಕಗ್ನೈಸ್ ಮಾಡುವ ಲೆವೆಲ್‌ನಲ್ಲಿ ಕೆಎಂಎಫ್ ಇಲ್ಲ ಎಂದು ಹೇಳಿದ್ದೆ. ಖಂಡಿತ ನಾನು ಹೇಳಿದ್ದೆ. ಇನ್ನು ನಮ್ಮ ಅಗ್ರಿಕಲ್ಚರಲ್ ಸೈನ್ಸ್ ಪದವೀಧರರನ್ನು ನೀವು ಏನಾದರೂ ಕರ್ನೂಲಿನಿಂದ ಬಂದಿರುವ ಗ್ರಾಜುಯೇಟ್ಸ್‌ಗೆ ಹೋಲಿಸಿದರೆ ನಾಚಿಕೆ ಆಗುತ್ತದೆ. ಇದು ವಾಸ್ತವ.

ಶ್ರೀ ಸಿ. ಭೈರೇಗೌಡ : ತಾವು ಬಹಳ ಉತ್ತಮವಾದಂತಹ ಪ್ರಶ್ನೆಯನ್ನು ಮಾನ್ಯ

ಮಾಧುಸ್ವಾಮಿಯವರಿಗೆ ಕೇಳಿದಿರಿ. ಅದಕ್ಕೆ ನಾನೂ ಸಹ ತಮ್ಮ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ಈಗ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿರತಕ್ಕ ಕರಿಕುಲಮ್ ಮತ್ತು ಅಲ್ಲಿ ಕೊಡತಕ್ಕ ತರಬೇತಿ ಇವೆಲ್ಲವೂ ಸಹ ಒಬ್ಬ ವಿಶ್ವವಿದ್ಯಾನಿಲಯದಿಂದ ಬರತಕ್ಕ ವಿದ್ಯಾರ್ಥಿ ಯುವಕ ಅವನು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಬೇಕು ಎನ್ನತಕ್ಕ ಉದ್ದೇಶದಿಂದ ಡಿಸೈನ್ ಮಾಡಿಲ್ಲ. ನಾನು ಅದನ್ನು ನೇರವಾಗಿ ಒಪ್ಪಿಕೊಳ್ಳುತ್ತೇನೆ. ಇದು ಯಥಾಪ್ರಕಾರ ನಮ್ಮ ವಿದ್ಯಾಭ್ಯಾಸದ ವ್ಯವಸ್ಥೆಯಲ್ಲಿದೆ. ನಮ್ಮ ಜನರಲ್ ಎಜುಕೇಶನ್ ಆದ ಬಿಎ, ಬಿಎಸ್‌ಸಿ ಇದೆಲ್ಲಾ ಹೇಗೆ ಮೆಕಾಲೆ ಬರೆದಂತಹ ಆಧಾರದ ಮೇಲೆಯೇ ಆ ರೀತಿಯಾದಂತಹ ವಿದ್ಯಾಭ್ಯಾಸವನ್ನು ಇಲ್ಲಿಯವರೆಗೆ ನಾವು ರೂಢಿಸಿಕೊಂಡು ಬಂದಿದ್ದೇವೆ. ಅದೇ ರೀತಿ ಕೃಷಿ ವಿದ್ಯಾಭ್ಯಾಸದಲ್ಲಿಯೂ, ಕೃಷಿ ಬೋಧನೆಯಲ್ಲೂ ಬಂದಿದೆ. ಅದನ್ನು ನಾನಂತೂ ಕೂಡ ವ್ಯವಸಾಯಗಾರನಾಗಿ, ರೈತನಾಗಿ ಮನಗಂಡಿದ್ದೇನೆ. ಒಂದು ಸಾರಿಯಲ್ಲ, ಅನೇಕ ಸಾರಿ ನಾನು ವಿಶ್ವವಿದ್ಯಾನಿಲಯಕ್ಕೆ ಅನೇಕ ಸಂದರ್ಭದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಭೇಟಿ ಕೊಟ್ಟಾಗ, ಮತ್ತು ಇವರು ನನ್ನನ್ನು ಅನೇಕ ಸಭೆ, ಸಮಾರಂಭಗಳಿಗೆ ಕರೆದಿದ್ದಂತಹ ಸಂದರ್ಭದಲ್ಲಿ ನಾನು ಅವರನ್ನು ಒಂದು ಪ್ರಶ್ನೆ ಮೊದಲು ಕೇಳುತ್ತಿದ್ದೆ. ಏನು ಅಂದರೆ ಇವತ್ತು ನಮ್ಮ ದೇಶದಲ್ಲಿರತಕ್ಕ ವ್ಯವಸಾಯ ಎಷ್ಟರಮಟ್ಟಿಗೆ ಅಭಿವೃದ್ಧಿ ಆಗಿದೆ? ವಿಶ್ವವಿದ್ಯಾನಿಲಯದಲ್ಲಿ ಏನು ನೀವು ತರಬೇತಿ ಕೊಟ್ಟಿದ್ದೀರಿ? ದೊಡ್ಡ ದೊಡ್ಡ ಪಂಡಿತರು ಇದ್ದೀರಿ. ನೀವೇನು ರೈತರಿಗೆ ಕಾಂಟ್ರಿಬ್ಯೂಷನ್ ಕೊಟ್ಟಿದ್ದೀರಿ? ಕೊನೆಗೆ ನಾನು ಕೇಳಿರತಕ್ಕ ಪ್ರಶ್ನೆ ಏನಪ್ಪ ಎಂದರೆ ನೀವು ರೈತನಿಗೆ ಅತಿ ಮುಖ್ಯವಾಗಿರತಕ್ಕದ್ದು ನೇಗಿಲು ಹಾಗೂ ಇನ್ನುಳಿದಿರತಕ್ಕ ಸಲಕರಣೆಗಳು ಬೇಕು. ಕುಡಗೋಲು ಅಂತೂ ಬೇಕು. ನೀವು ಏನೋ ದೊಡ್ಡದಾಗಿ ಯಂತ್ರವನ್ನು ಮಾಡದೇ ಇದ್ದರೆ ಹೋಗಲಿ. ಸಾಮಾನ್ಯ ರೈತನು ಬಳಸತಕ್ಕ ಕುಡಗೋಲು, ಅದು ಸರಿಯಾಗಿದೆಯೇ? ಅದರ ಆಕಾರ ಎಲ್ಲವೂ ಸರಿಯಾಗಿದೆಯೇ? ಅದರಿಂದ ಹೆಚ್ಚಿನ ಮಾನವ ಶ್ರಮ ಎಷ್ಟು ಬಳಕೆ ಆಗಬೇಕಾಗಿತ್ತು, ಅದು ಸರಿಯಾದ ರೀತಿಯಲ್ಲಿ ಬಳಕೆ ಆಗಿದೆಯೇ? ಇದರ ಬಗ್ಗೆ ನೀವೇನಾದರೂ ಆಲೋಚನೆ ಮಾಡಿದ್ದೀರೋ ಎಂದು ಕೇಳಿದೆ. ನನಗೆ ಗೊತ್ತಿರುವ ಹಾಗೆ ಯಾವ ವಿಶ್ವವಿದ್ಯಾಲಯದಲ್ಲಿಯೂ ಕೂಡ ಇದರ ಬಗ್ಗೆ ಆಲೋಚನೆ ನಡೆಸಿಲ್ಲ. ಇದು ಒಬ್ಬ ರೈತನಾಗಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕೇಳಿರುವಂತಹ ಪ್ರಶ್ನೆ. ಈಗಲೂ ಸಹ ನಾನು ಒಬ್ಬ ಮಂತ್ರಿಯಾಗಿ ಪ್ರಶ್ನೆ ಹಾಕಿದಾಗ ಅದಕ್ಕೂ ಕೂಡ ಏನು ಹಿಂದೆ ಉತ್ತರ ದೊರಕುತ್ತಿತ್ತು, ಅದೇ ಉತ್ತರ ದೊರಕುತ್ತಿದೆ. ಇದು ವಾಸ್ತವಾಂಶ. ಆದ್ದರಿಂದ ನಾನು ಬರೀ ಕುಡಗೋಲಿನ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಅದೇ ರೀತಿ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಆದರೆ ಸಮಯದ ಪ್ರಜ್ಞೆಯಿಂದ ನಾನು ಅದನ್ನು ಅಷ್ಟಕ್ಕೇ ಸೀಮಿತಗೊಳಿಸುತ್ತೇನೆ. ಆದ್ದರಿಂದ, ಏನು ಮಾಡಿದ್ದೇವೆ ಎಂದರೆ ಈ ವರ್ಷದಿಂದ ಪ್ರಾರಂಭ ಮಾಡಿ ನಮ್ಮ ಕೃಷಿ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರತಕ್ಕ ವಿದ್ಯಾರ್ಥಿಗಳು ಈಗ ಹಳ್ಳಿಗಳಿಗೆ ಹೋಗಬೇಕು. ಈಗ ಕಾರ್ಯಕ್ರಮ ಇಲ್ಲ ಎಂದು ಹೊಸದಾಗಿ ಮಾಡಿದ್ದೇವೆಂದು ಹೇಳುತ್ತಿಲ್ಲ. ಅಂತಿಮ ವರ್ಷದಲ್ಲಿ ಇರತಕ್ಕ ವಿದ್ಯಾರ್ಥಿಗಳು ಅವರು ರಾವೇ ಪ್ರೋಗ್ರಾಮ್ ಎಂದು ಹೇಳಿ ಹಳ್ಳಿಯಲ್ಲಿ ಇರಬೇಕು. ಅಲ್ಲಿ ಅವರು ಒಂದು ಸೆಮಿಸ್ಟರ್‌ವರೆಗೆ ಹೋಗಿ ಇರಬೇಕು. ಅವರಿಗೆ ಅಲ್ಲಿ ರೂರಲ್ ಟ್ರೈನಿಂಗ್ ಎನ್ನತಕ್ಕದ್ದನ್ನು ಕೊಡುತ್ತಿದ್ದಾರೆ. ಈಗ ನಾವು ಈ ವರ್ಷದಿಂದ ಎರಡನೇ

ವರ್ಷದಲ್ಲಿ ಬರತಕ್ಕ ವಿದ್ಯಾರ್ಥಿಗಳು ಕಡ್ಡಾಯವಾಗಿ ಇಂತಿಷ್ಟು ಅವಧಿಯೊಳಗೆ ಹಳ್ಳಿಯೊಳಗೆ ಇರಬೇಕು. ಅವರ ಜೊತೆಯಲ್ಲಿಯೇ ಪ್ರೊಫೆಸರ್‌ಗಳು ಆಗಿರತಕ್ಕವರು, ವಿಜ್ಞಾನಿಗಳು ಆಗಿರತಕ್ಕವರು, ಸಹ ಹಳ್ಳಿಯಲ್ಲಿರಬೇಕೆಂದು ಮಾಡಿದ್ದೇವೆ. ಇದನ್ನು ಏಕೆ ಮಾಡಿದ್ದೇವೆಂದರೆ ಇದು ಮೊದಲಿನಿಂದ ಕೂಡ ಬೇರೆ ಬೇರೆ ಜನರಲ್ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿ ಒಬ್ಬ ದೊಡ್ಡ ಪ್ರೊಫೆಸರ್ ಎಂದರೆ ತ್ರೀ ಪೀಸಸ್ ಸೂಟ್, ಮತ್ತೆ ಹೀಗಿರಬೇಕೆಂಬ ಕಲ್ಪನೆ ಏನು ಇದೆ, ಆ ಕಲ್ಪನೆಯನ್ನು ಕೂಡ ಇಲ್ಲಿ ಮಾಡಬೇಕು ಎಂದು ಇದ್ದೇವೆ. ಒಂದು ಬಿಗಿ ಇರಬೇಕು ಎಂದು ಹೇಳಿ ಒಬ್ಬ ಪ್ರೊಫೆಸರ್ ಕಲ್ಪನೆ ಇಲ್ಲಿಯೂ ಮಾಡಿದ್ದೇವೆ. ಬಿಗಿ ಇರಬೇಕು ಎಂದು ಹೇಳಿ ಪ್ರೊಫೆಸರ್‌ಗಳಿಗೆ ಬಂದು ಬಿಟ್ಟಿದೆ. ಇಲ್ಲ ಅದು ಆಗುವುದಿಲ್ಲ. ಕೃಷಿನೇ ಬೇರೆ, ಬೇರೆ ಬೇರೆ ಕಾಲೇಜಿನಲ್ಲಿರತಕ್ಕ ಎಜುಕೇಶನ್ ಬೇರೆ. ಈ ಕೃಷಿಯಲ್ಲಿ ನಾವು ರೈತರನ್ನು ಗಮನದಲ್ಲಿಟ್ಟುಕೊಂಡು, ಅವನು ಯಾವ ರೀತಿ ಉತ್ಪಾದನೆ ಮಾಡುತ್ತಿದ್ದಾನೆ, ಅವನಿಗೆ ಕೃಷಿಯಲ್ಲಿ ನ್ಯೂನತೆಗಳು ಏನು ಇದ್ದಾವೆ? ಆ ನ್ಯೂನತೆಗಳನ್ನು ಗುರುತಿಸಬೇಕಾಗಿರತಕ್ಕವರು ನಮ್ಮ ವಿಜ್ಞಾನಿಗಳು. ಆ ವಿಜ್ಞಾನಿಗಳಿಗೂ ರೈತನಿಗೂ ಸಂಬಂಧವೇ ಇಲ್ಲದಿರುವಂತಹ ರೀತಿಯಲ್ಲಿ ಈ ದೇಶದಲ್ಲಿ ಕೃಷಿ ವಿಜ್ಞಾನ ಬೆಳೆಯುತ್ತಾ ಬಂದಿದೆ. ಅಂದಾಕ್ಷಣಕ್ಕೆ ಅವರು ನೀಡಿರತಕ್ಕ ಕೊಡುಗೆ ಏನು ಇದೆ? ವಿಜ್ಞಾನಿಗಳು ಕೃಷಿಗೆ ಅಮೋಘವಾದಂತಹ ಕೊಡುಗೆಯನ್ನು ನೀಡಿದ್ದಾರೆ. ಮೊದಲು ನಮ್ಮದು ಶಿಫ್ಟ್ ಟು ಮೌತ್ ಎಂಬ ಪಾಲಿಸಿ ಇತ್ತು. ಇವತ್ತು ಶಿಫ್ಟ್ ಟು ಮೌತ್ ಎಂಬತಕ್ಕದ್ದು ಹೋಗಿ ಫುಟ್ ಫಾರ್ ವರ್ಕ್ ಎಂದು ನಮ್ಮ ದೇಶದಲ್ಲಿ ತಲುಪಬೇಕಾಗಿದ್ದರೆ ನಮ್ಮ ಕೃಷಿ ವಿಜ್ಞಾನಿಗಳ ಕೊಡುಗೆ ಎಲ್ಲಾ ವಿಜ್ಞಾನಿಗಳ ಕೊಡುಗೆಗಿಂತ ಹೆಚ್ಚಿನದು ಇವತ್ತಿನ ದಿವಸ ಇದೆ. ಆದರೂ ಸಹ ವಾಸ್ತವವಾಗಿ ಇವತ್ತು ಏನಾಗುತ್ತಿದೆ? ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತರಿಗೆ ವಿಜ್ಞಾನಿಗಳ ಪ್ರತಿಫಲ ದೊರಕಬೇಕಾದ್ದು ಅತಿ ಅವಶ್ಯಕ. ಆ ಕೊರತೆಯನ್ನು ಇವತ್ತು ಗುರುತಿಸಿ ವಿಜ್ಞಾನಿಗಳು ಆಗಿರತಕ್ಕವರು, ಪ್ರೊಫೆಸರ್‌ಗಳು ಆಗಿರತಕ್ಕವರು ಸಹ ವಿಧ್ಯಾರ್ಥಿಗಳ ಜೊತೆ ಹಳ್ಳಿಯಲ್ಲಿ ಹೋಗಬೇಕು. ಅವರ ಜೊತೆಯಲ್ಲಿ ಇರಬೇಕು. ರೈತರಿಗೂ, ವಿಜ್ಞಾನಿಗಳಿಗೂ ಮತ್ತು ಪ್ರೊಫೆಸರ್‌ಗಳಿಗೂ ವಿದ್ಯಾರ್ಥಿಗಳಿಗೂ ಸಂಪರ್ಕ ಬೆಳೆಯಬೇಕು. ಇವರಿಗಿರತಕ್ಕ ಜ್ಞಾನ ಏನು ಇದೆ, ಅದು ರೈತರಿಗೆ ಹೋಗಬೇಕು. ಮತ್ತು ರೈತರಿಗೆ ಇರತಕ್ಕ ನ್ಯೂನತೆಗಳನ್ನು ಇವರು ಅರ್ಥ ಮಾಡಿಕೊಂಡು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕೆಂದು ಎನ್ನತಕ್ಕ ಉದ್ದೇಶದಿಂದ ನಾವು ಈ ಕಾರ್ಯಕ್ರಮಗಳನ್ನು ಜಾರಿಗೆ ಈ ವರ್ಷ ತಂದಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಹೇಳಿರತಕ್ಕದ್ದು ಮತ್ತು ತಮ್ಮ ಅನಿಸಿಕೆ ಏನು ಇತ್ತು ಎನ್ನತಕ್ಕದ್ದನ್ನು ಈಗಾಗಲೇ ನಾವು ಆ ಪ್ರಯತ್ನದಲ್ಲಿದ್ದೇವೆ. ಪ್ರಯತ್ನಪಟ್ಟಿದ್ದೇವೆ, ಅದನ್ನು ಕಾರ್ಯಗತ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಅದರ ಬಗ್ಗೆ ಮಾತನಾಡಲಿಲ್ಲ. ಆದರೆ ನಾನು ಸಂಶೋಧನೆ ಲ್ಯಾಬ್‌ನಿಂದ ಲ್ಯಾಂಡ್‌ವರೆಗೆ ತಾವು ತೆಗೆದುಕೊಂಡು ಹೋಗಬೇಕು. ಅದು ಪೂರಕವಾಗಿ ತೆಗೆದುಕೊಂಡು ಹೋಗಬಹುದಿತ್ತು. ಈಗ ಒಂದು ಸಣ್ಣ ಸಂಶೋಧನೆ ಮಾಡಬಹುದಿತ್ತು.

ಅಧ್ಯಕ್ಷರು : ನಾನು ಏಕೆ ಹೇಳಿದೆ ಅಂದರೆ 8-10 ಜನರ ಜೊತೆ ಡಿಸ್ಕಸ್ ಮಾಡಿದ್ದೇನೆ. ಫೆನ್ಸ್ ಹಾಕುತ್ತೇವೆಲ್ಲ, ಏನಾದರೂ ಇದರಲ್ಲಿ ಸ್ವಲ್ಪ ಒಳ್ಳೆಯ ವೆರೈಟೀಸನ್ನು ಕಂಡುಹಿಡಿದಿದ್ದೀರೋ ಸ್ಪೈಸಸ್

ಏನಾದರೂ ಬಂದಿದೆಯಲ್ಲಾ ಎಂದು ಕೇಳಿದೆ. ನಮ್ಮ ಹಳೆಯ ಪದ್ಧತಿ ಪ್ರಕಾರ ಕತ್ತಾಳೆ ಹಾಕುವುದು, ಇದನ್ನು ಬಿಟ್ಟರೆ ಬೇರೆ ಅವರಿಗೆ ಗೊತ್ತಿಲ್ಲ. ಇವರು ಎಂದಾದರೂ ಜಮೀನು ಹತ್ತಿರ ಹೋಗಿದ್ದರೆ ತಾನೇ ಗೊತ್ತಾಗುವುದು? ಫೆನ್ಸ್ ಏಕೆ ಬೇಕು? ಫೆನ್ಸ್ ಹೇಗಿರಬೇಕು ಎಂಬ ಕಲ್ಪನೆ ಇಲ್ಲ. ಒಬ್ಬ ಬಳ್ಳಾರಿ ಜಾಲಿ ಹಾಕಿ ಎಂದು ಸಜೆಸ್ಟ್ ಮಾಡಿದ. ಬಹಳ ಚೆನ್ನಾಗಿ ಹೇಳಿದಂತಹ ಮಾತು ಅದು.

ಶ್ರೀ ಎನ್. ರಾಜಣ್ಣ : ಮಾನ್ಯ ಸಭಾಧ್ಯಕ್ಷರೆ, ತಾವು ಬೆಳಿಗ್ಗೆ ಒಂದು ಮಾತು ಹೇಳಿದ್ದೀರಿ ನೋಡಿ ಕಲಿ, ಮಾಡಿ ಕಲಿ ಎಂದು ಹೇಳಿದ್ದೀರಿ. ಇವತ್ತು ಏನಾಗಿದೆ? ನೋಡಿಯೂ ಕಲಿಯುವುದಿಲ್ಲ, ಮಾಡಿಯೂ ಕಲಿಯುವುದಿಲ್ಲ. ನಾಲ್ಕು ಗೋಡೆಯ ಮಧ್ಯೆ ಬರುತ್ತಾನೆ. ಅವನಿಗೆ ಅನುಭವವೇ ಇರುವುದಿಲ್ಲ. ಆದ್ದರಿಂದ ಕೆಳ ಹಂತದಿಂದ ಬರುವವನಿಗೆ ಆ ಫೀಲ್ಡ್ ಅರ್ಥವಾಗಿರಬೇಕು. ಕೆಲಸ ಮಾಡುತ್ತಿದ್ದರೆ ಕೆಲಸ ಮಾಡಿ, ಮಾಡಿ ಅನುಭವ ಬಂದರೆ ಅವನನ್ನು ಎಲ್ಲಿ ಕರೆದುಕೊಂಡು ಹೋಗಿ ಕೂಡಿಸಿದರೂ ಇನ್ನೂ ಜಾಸ್ತಿ ಕೆಲಸ ಮಾಡುತ್ತಾನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ದೃಷ್ಟಿಯಲ್ಲಿ ಈ ತರಬೇತಿ ಕಾರ್ಯಕ್ರಮ ರೈತನ ಬದುಕಿಗೆ, ಬೆಳೆಗೆ ಹತ್ತಿರ ಮಾಡಬೇಕು. ಅದಕ್ಕೆ ಸಂಶೋಧನೆ ಪೂರಕವಾಗಿರಬೇಕು ಎಂದು ಚುಟುಕಿನಲ್ಲಿ ಹೇಳುತ್ತಾ, ಬೆಳೆಗೆ ಹತ್ತಿರವಾಗಿರಬೇಕು ಎಂದರೆ ಆ ನೀರನ್ನು ಎಷ್ಟು ಬಳಸಬಹುದು. ಆ ಬೆಳೆಗೆ ನೀರು ಜಾಸ್ತಿ ಕೊಟ್ಟರೆ ಏನಾಗುತ್ತದೆ? ಕಡಿಮೆ ಕೊಟ್ಟರೆ ಏನಾಗುತ್ತದೆ? ಎನ್ನುವುದನ್ನು ತಾವು ವಿವರವಾಗಿ ಹೇಳಬೇಕು. ಇವತ್ತು ನಮಗೆ ಒಂದು ದೊಡ್ಡ ಕಲ್ಪನೆ ಬಂದು ಬಿಟ್ಟಿದೆ. ಭಾರಿ ನೀರು ಕೊಟ್ಟು ಬಿಟ್ಟರೆ ಒಳ್ಳೆಯ ಬೆಳೆ ನಾವು ಬೆಳೆಯುತ್ತೇವೆ ಎಂಬ ಭಾವನೆ ಬಂದಿದೆ. ಯಾವುದೇ ಬೆಳೆ ಆಗಲಿ, ಶೇಂಗಾ ಬೆಳೆ ಆಗಲಿ ನೀರು ಕಟ್ಟಬೇಕು ಎನ್ನುವ ಚಟಕ್ಕೆ ಇವತ್ತು ರೈತರು ಹೋಗುತ್ತಿದ್ದಾರೆ. ಅದನ್ನು ಯಾರಾದರೂ ಕುಳಿತುಕೊಂಡು ಮನವರಿಕೆ ಮಾಡಿಕೊಡಬೇಕು. ಯಾವ ಬೆಳೆಗೆ ಎಷ್ಟು ನೀರು ಕೊಟ್ಟರೆ ಇಳುವರಿ ಜಾಸ್ತಿ ಬರುತ್ತದೆ ಕಡಿಮೆ ಬರುತ್ತದೆ ಎಂದು ಮನವರಿಕೆ ಮಾಡಿ ಕೊಡಬೇಕು. ಅಗತ್ಯ ಎಷ್ಟು ಇದೆ, ಎಷ್ಟು ಇಲ್ಲ ಎಂದು ತಿಳಿಸಿ ಕೊಡಬೇಕು. ಎರಡನೆಯದು ಈ ಕ್ರಾಪಿಂಗ್ ಪ್ಯಾಟರ್ನ್ ಅನ್ನು ನಾವು ಇವತ್ತು ತರಬೇತಿಯಲ್ಲಿ ಹೇಳಲೇಬೇಕಾಗಿದೆ. ನೀರು ಸಿಕ್ಕಿದ ತಕ್ಷಣ ಭತ್ತ ಹಾಕಬೇಕು, ಕಬ್ಬು ಹಾಕಬೇಕು ಎಂಬ ಭಾವನೆ ರೈತರಿಗೆ ಇವತ್ತು ಬಂದುಬಿಟ್ಟಿದೆ. ಇದನ್ನು ನಾವು ಎಕ್ಸ್‌ಟೆನ್ಷನ್ ಅಂಡ್ ಟ್ರೈನಿಂಗ್‌ನಲ್ಲಿ ಮಾಡಲಿಲ್ಲ ಎಂದರೆ ಹೇಳುವುದೆಲ್ಲಿ ಎಂಬ ಪ್ರಶ್ನೆ ಬಂದಿದೆ. ನೀವು ಯಾವುದೇ ನಾಲೆಯಿಂದ ನೀರು ಬಿಡಿ. ಸೆಮಿ ಡ್ರೈ ಎಂದು ಬರೆದುಕೊಂಡು ಬರುತ್ತೇವೆ. ಎರಡು ತಿಂಗಳ ಬೆಳೆ, ಮೂರು ತಿಂಗಳ ಬೆಳೆ ಎಂದು ಬರೆಸಿಕೊಂಡು ಬರುತ್ತೇವೆ. ವಾಸ್ತವವಾಗಿ ನಾವು ಬೆಳೆಯುವುದು ಅಲ್ಲಿ ಭತ್ತನೇ ಆದ್ದರಿಂದ ಇವತ್ತು ಏನಾದರೂ ಲಾಭ ಆಗುತ್ತಿದೆಯಾ ಎಂದು ಕೇಳಿದರೆ ಬಹುಶಃ ನಾವು ಅವನಿಗೆ ಎಜುಕೇಟ್ ಮಾಡಿಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಟ್ರೈನಿಂಗ್ ಅಂಡ್ ಎಕ್ಸ್‌ಟೆನ್ಷನ್‌ನಲ್ಲಿ ಇವತ್ತು ಮೇನ್ ಇವತ್ತು ಅವನಿಗೆ ಇಸುವರಿ ಬರುವಂತಹ ಬೆಳೆ, ನೀರಿನ ಉಪಯೋಗ ಆ ಬೆಳೆಗೆ ಬರಬೇಕಾದ ರೋಗ. ಆ ರೋಗ ಯಾವ ಕಾಲಕ್ಕೆ ಬರುತ್ತದೆ. ಆ ಕಾಲದಲ್ಲಿ ನಾನು ಏನು ಮಾಡಬೇಕಾಗಿತ್ತು, ಯಾವ ಔಷಧಿ ಸಿಂಪಡಿಸಬೇಕಾಗಿತ್ತು ಎಂದು ಒಂದು ಮಾಡಬೇಕು. ಸಂಶೋಧನೆಯಲ್ಲಿ ಒಂದು ಮಾತು ಹೇಳುತ್ತೇನೆ. ಕೆಲವು ರೋಗಗಳಿಗೆ ನಾವು ಔಷಧಿ ಕೊಡುವುದಕ್ಕೆ ಆಗುವುದಿಲ್ಲ ಕೊಟ್ಟರೆ ಪ್ರಯೋಜನವೂ ಆಗುವುದಿಲ್ಲ.

4.20 ಪಿ.ಎಂ

ಅಂತಹ ಕಡೆ ಪ್ಯಾರಾಸೈಟ್ಸ್ ನಾವು ಡೆವಲಪ್ ಮಾಡಬಹುದಾಗಿತ್ತು. ನಿಮ್ಮ ಬೀದರ್, ಗುಲ್ಬರ್ಗಾ ಪ್ರಾಬ್ಲಂ ಅನ್ನು ಪ್ಯಾರಾಸೈಟ್ಸ್ ಡೆವಲಪ್ ಮಾಡಿ ನಾವು ಪರಿಹರಿಸಬಹುದಾಗಿತ್ತು. ಇದೇನು ಹೊಸ ವಿಷಯವಲ್ಲ. ಇದು ಎಲ್ಲರಿಗೂ ಗೊತ್ತಿದೆ. ಮೋಡ ಕವಿದ ವಾತಾವರಣ ಇದ್ದು, ಅಕ್ಟೋಬರ್-ನವೆಂಬರ್-ಡಿಸೆಂಬರ್‌ನಲ್ಲಿ ಮಳೆ ಬಂದರೆ ಮಾವಿನಕಾಯಿ ಉಳಿಯುವುದಿಲ್ಲ, ತೊಗರಿ ಕಾಯಿ ಬರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಮಾವಿನ ಬೆಳೆಯೂ ಉಳಿಯುವುದಿಲ್ಲ, ತೊಗರಿ ಬೆಳೆಯೂ ಬರುವುದಿಲ್ಲ. ಮಾನ್ಯ ಸಚಿವರೇ, ಇದೇನು ಹೊಸ ವಿಷಯವಲ್ಲ. ಆದರೆ ನಾವೇನು ಮಾಡಿದ್ದೇವೆ? ಒಂದು ಹಂತಕ್ಕೆ ಸಿಸ್ಟ್ ಫಾರ್ಮೇಷನ್ ಆದರೆ ಅಥವಾ ಹುಳು ಬೆಳೆದು ಬಿಟ್ಟರೆ, ನಿಮ್ಮ ಔಷಧಿ, ನಿಮ್ಮ ಕೆಮಿಕಲ್ ಅದರ ಮೇಲೆ ಎಫೆಕ್ಟ್ ಮಾಡುವುದಿಲ್ಲ. ಅದಕ್ಕೆ ಮೊದಲೇ ಪ್ಯಾರಾಸೈಟ್ ಬಿಡಲಿಕ್ಕೆ ನಿಮಗೆ ಏನಾಗಿತ್ತು? ಅದಕ್ಕೊಂದು ಆ್ಯಂಟಿ ಪ್ಯಾರಾಸೈಟ್ ಡೆವಲಪ್ ಮಾಡಲಿಕ್ಕೆ ನಿಮಗೆ ಏನಾಗಿತ್ತು? ಏಕೆ ಯೂನಿವರ್ಸಿಟಿಯಲ್ಲಿ ಈ ಬಗ್ಗೆ ಯೋಚನೆ ಮಾಡುತ್ತಿಲ್ಲ? ಲಕ್ಷಾಂತರ ಎಕರೆ, ಕೋಟ್ಯಾಂತರ ಎಕರೆ ಇವತ್ತು ತೊಗರಿ ಬೆಳೆ ಹೋಗುತ್ತಿದೆ ಎಂದರೆ ನಮಗೇನೂ ಅನಿಸುವುದಿಲ್ಲವೇ? ನಾವು ಯಾರ ಋಣದಲ್ಲಿ ಬದುಕುತ್ತಿದ್ದೇವೆ ಎಂದು ಯೋಚನೆ ಮಾಡದೇ ಹೋದರೆ ಅವನು ವಿಜ್ಞಾನಿಯೇ? ಸಂಶೋಧಕನೇ? ಎಂದು ಅವರಾಗಿ ಅವರೇ ಮನಸ್ಸಿನಲ್ಲಿ ಕೇಳಿಕೊಳ್ಳಲಿ ಎಂದು ನಾನು ಈ ವಿಷಯವನ್ನು ಅವರಿಗೇ ಬಿಡುತ್ತೇನೆ. ತಾವು ಇದರ ಕಡೆ ಹೆಚ್ಚು ಆಸಕ್ತಿ ವಹಿಸಬೇಕು. ತಾವು ಒಮ್ಮೆ ನನಗೆ ನಾನು ಶಾಸಕನಾಗದೇ ಇದ್ದಾಗ ಒಂದು ಡಿ.ಡಿ. ಚಾನಲ್ ತೆಗೆದುಕೊಳ್ಳೋಣ ಅಂತಿದ್ದೇನೆ, ಅದರಲ್ಲಿ ಫೋರ್‌ಕ್ಯಾಸ್ಟ್ ಮಾಡೋಣ ಅಂತಿದ್ದೇನೆ ಎಂದು ಹೇಳಿದ್ದೀರಿ. ನಾನು ಆ ದಿವಸ ನಿಮ್ಮನ್ನು ಬಹಳ ಮೆಚ್ಚಿಕೊಂಡಿದ್ದೆ. ಕನಿಷ್ಟ ಮಾನ್ಯ ಬೈರೇಗೌಡರು ಆ ದಿಕ್ಕಿನಲ್ಲಿ ಯೋಚನೆ ಮಾಡಿದ್ದಾರೆಂದು ನಾನು ಮೆಚ್ಚಿದ್ದೆ. ಫೋರ್‌ಕ್ಯಾಸ್ಟ್ ಮಾಡುವುದರಿಂದ ಬೇಕಾದಷ್ಟು ಅಡ್ವಾನ್‌ಟೇಜಸ್ ಇವೆ. ಇವತ್ತು ಟಿ.ವಿ.ಯನ್ನು ಒಳ್ಳೆಯ ಮಾಧ್ಯಮವನ್ನಾಗಿ ಜನ ಬಳಸುತ್ತಿರುವುದರಿಂದ, ಇಂತಹ, ಇಂತಹ ಸೀಜನ್‌ನಲ್ಲಿ ಇಂತಹ ಔಷಧಿ ಬಳಸಿ ಎಂದು ರೈತರಿಗೆ ತಿಳುವಳಿಕೆ ಕೊಡಬೇಕು. ಆಕಸ್ಮಾತ್ ಏನಾದರೂ ಎಪಿಡಮೀಸ್ ಆದರೆ, ಆ ಕೆಲಸ ಆಗಲಿಲ್ಲ ಎನ್ನುವುದಾದರೆ, ಸರ್ಕಾರ ತಾನೇ ತಾನಾಗಿ ಸ್ಪ್ರೇಯಿಂಗ್ ಕೆಲಸ ತೆಗೆದುಕೊಳ್ಳಬೇಕು. ಹಿಂದೆ ರಾಗಿಗೇನಾದರೂ ಖಾಯಿಲೆ ಬಂದರೆ, ಇಲಾಖೆಯವರೇ ಖುದ್ದಾಗಿ ಬಂದು ಯಾರನ್ನೂ ಕೇಳದೇ ಔಷಧಿ ಹೊಡೆದುಕೊಂಡು ಹೋಗುತ್ತಿದ್ದರು. ಆದರೆ ಇವತ್ತು ಏನಾಗಿದೆ? ನಾವು ಇವತ್ತು ಆ ಕೆಲಸ ಮಾಡುತ್ತಿಲ್ಲ. ನಾವು ಬೀದರ್ ಜಿಲ್ಲೆಯಲ್ಲಿ ಆ ಕೆಲಸವನ್ನು ಮಾಡಬಹುದಾಗಿತ್ತು. ಇಲಾಖೆಯವರು ಆಸಕ್ತಿ ವಹಿಸಿದ್ದರೆ ತೊಗರಿ ಬೆಳೆಯನ್ನು ಉಳಿಸಬಹುದಾಗಿತ್ತು. ರೈತರಿಗೆ ಇಷ್ಟೊಂದು ಎಂಬ್ರಾಸ್ ಆಗುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾದಂತ ಅಗತ್ಯ ಇರಲಿಲ್ಲ. ಆಗ ಅಲ್ಲಿದ್ದ ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದರು? ನಾನೇನೂ ಜಡ, ಅದಕ್ಕಾಗಿಯೇ ನಾನಿನ್ನೂ ರೈತನಾಗಿಯೇ ಉಳಿದುಕೊಂಡಿರುತ್ತೇನೆ. ಅಧಿಕಾರಿಗಳಾದವರು ಏನು ಮಾಡಿದ್ದಾರೆ? ಅಧಿಕಾರಿಗಳಾದರೂ ಈ ಬಗ್ಗೆ ಆಸಕ್ತಿ ವಹಿಸಿದ್ದರೆ ಇಷ್ಟೊಂದು ಕೆಟ್ಟ ಸ್ಥಿತಿ ನಿರ್ಮಾಣವಾಗುವುದನ್ನು ತಪ್ಪಿಸಬಹುದಾಗಿತ್ತು.

ಮಾನ್ಯ ಬೈರೇಗೌಡರೇ, ತಾವು ನಮ್ಮ ದೃಷ್ಟಿಯಲ್ಲಿ ಸ್ವಲ್ಪ ದೊಡ್ಡ ರೈತರು, ಅರಿಸ್ಟೋಕ್ರಾಟಿಕ್ ಅಟಿಟ್ಯೂಡ್ ಇರುವ ರೈತ್ತರು ನೀವು. ನಮ್ಮಂತಹ ರೈತರಲ್ಲ ತಾವು. ನಾನು ತಮ್ಮನ್ನು ಅನೇಕ ವರ್ಷಗಳಿಂದ ನೋಡಿದ್ದೇನೆ. ನಾವು ಉಳಿದುಕೊಳ್ಳುವಂತಹ ಯೋಜನೆಗಳನ್ನು ನೀವು ಹಾಕಬೇಕು. ನಮ್ಮದೊಂದಿಷ್ಟು ಹಣ ಉಳಿದುಕೊಳ್ಳಬೇಕು, ನಮ್ಮ ಮಾಲು ಮಾರುಕಟ್ಟೆಗೆ ಹೋಗುವ ಮಧ್ಯೆ ಸ್ವಲ್ಪ ಕಾಲ ತಡೆಯುವಂತಹ ಸ್ಥಿತಿ ನಿರ್ಮಾಣ ಆಗಬೇಕು. ಅಂತಹ ಪರಿಸ್ಥಿತಿಗೇನಾದರೂ ತಾವು ನಮ್ಮನ್ನು ತೆಗೆದುಕೊಂಡು ಹೋಗಿ ನಿಲ್ಲಿಸಿದರೆ ಮಾತ್ರ ನೀವು ನಿಜವಾಗಿಯೂ ಕೃಷಿ ಸಚಿವರಾಗುತ್ತೀರಿ. ನೀವು ಆಡಳಿತದಲ್ಲಿ ಆಸಕ್ತಿ ವಹಿಸಿ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಆದರೆ ತಾವು ಅಭಿವೃದ್ಧಿಗೆ ಕಡೆಗೆ ಇನ್ನೂ ಹೆಚ್ಚು ಗಮನ ಕೊಡಬೇಕು. ಹಿರಿಯರಾಗಿರುವುದರಿಂದ ನಿಮಗೆ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಕೃಷಿ ಇಲಾಖೆಯಲ್ಲಿ ಆಡಳಿತ ಕೆಟ್ಟರೆ ಏನೂ ಕೆಡುವುದಿಲ್ಲ. ಆದರೆ ಅಭಿವೃದ್ಧಿ ಕೆಟ್ಟರೆ ನಾವೆಲ್ಲಾ ಹಾಳಾಗಿ ಹೋಗುತ್ತೇವೆ. ಶೇಕಡ80ರಷ್ಟು ಗ್ರಾಮೀಣ ಪ್ರದೇಶದ ಜನರು ಹಾಗೂ ಶೇಕಡ66ರಷ್ಟು ರೈತರು ನಮ್ಮ ರಾಜ್ಯದಲ್ಲಿದ್ದಾರೆ. ನಾವು ಹೊರಟು ಹೋಗುತ್ತೇವೆ, ನೀವು ಆಫೀಸ್ ಅಡ್ಮಿನಿಸ್ಟ್ರೇಷನ್ ನಿರ್ವಹಣೆ ಮಾಡಿದಷ್ಟು ಚೆನ್ನಾಗಿ ಅಭಿವೃದ್ಧಿ ಕಡೆಗೂ ಕೂಡ ಸ್ವಲ್ಪ ಗಮನ ಹರಿಸಿದರೆ, ಬಹುಶಃ ರಾಜ್ಯದ ರೈತರು ನಿಮ್ಮನ್ನು ಜ್ಞಾಪಿಸಿಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಾಧುಸ್ವಾಮಿಯವರೇ, ಆಗಲೇ ಮಾತನಾಡುತ್ತಾ ತಾವು ಮಾನ್ಯ ಕೃಷಿ ಸಚಿವರನ್ನು, ಅವರು ನಮ್ಮಂತಹ ರೈತರಲ್ಲ, ಅದು ಎಂತದೋ ರೈತರು ಎಂದು ಹೇಳಿದಿರಲ್ಲಾ, ಅದೇನು ಹೇಳಿದಿರಿ ಅದನ್ನು ಇನ್ನೊಮ್ಮೆ ಹೇಳಿ.

ಜೆ.ಸಿ. ಮಾಧುಸ್ವಾಮಿ : ಅದನ್ನು ಎರಡನೇ ಸಾರಿ ಹೇಳಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಎರಡನೇ ಸಾರಿ ಹೇಳಬಾರದು ಎಂದರೆ ಹೇಗೆ? ಅದು ಎಲ್ಲರಿಗೂ ಗೊತ್ತಾಗಬೇಕು? ಆಗಲೇ ಆ ಮಾತನ್ನು ಬಹಳ ಜನ ಕೇಳಲೇ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಆಗಲೇ ಮಾತನಾಡುತ್ತಾ ಮಾನ್ಯ ಕೃಷಿ ಸಚಿವರನ್ನು, ಅರಿಸ್ಟೋಕ್ರಾಟಿಕ್ ರೈತರು ಅಂದರೆ ಭಾರೀ ಶ್ರೀಮಂತ ರೈತರು ಎಂದು ಹೇಳಿದ್ದುದು ನಿಜ. ಮಾನ್ಯ ಕೃಷಿ ಸಚಿವರು ರೈತರಿಗೆ ಆಗಬೇಕಾದ ಕಾರ್ಯಕ್ರಮಗಳ ಕಡೆ ಗಮನ ಕೊಡಬೇಕೆಂದು ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ತಾವು 'ವಾಟರ್ ಶೆಡ್' ಕಾರ್ಯಕ್ರಮಗಳಲ್ಲಿ ಬೇಕಾದಷ್ಟು ಯೋಜನೆಗಳ ಬಗ್ಗೆ ಹೇಳಿಕೊಂಡಿದ್ದೀರಿ. 'ವಾಟರ್ ಶೆಡ್' ಅಂದರೆ ಹಿಂದೆ ನಮಗೆ ಅದರ ಬಗ್ಗೆ ಒಂದು ರೀತಿಯ ಕಲ್ಪನೆ ಇತ್ತು. ಹಿಂದೆ ಒಮ್ಮೆ ಇಲ್ಲಿ ಜಾಫರ್ ಸೈಪುಲ್ಲಾರವರು ಇದ್ದಾಗ 'ಕ್ಲಂಪ್' ಅಂದರೆ comprehensive land use management ಎಂಬ ಯೋಜನೆಯೊಂದನ್ನು ರೂಪಿಸಿದ್ದರು. ಆಗಲೇ ನಾವು ಭಾರಿ ಆಸೆ ಇಟ್ಟುಕೊಂಡಿದ್ದೆವು, ಈ 'ಕ್ಲಂಪ್' ಯೋಜನೆ ಜಾರಿಗೆ ಬರುತ್ತದೆ, every inch of the land will be planned,ಎಂದು ನಾವು ಭಾವಿಸಿದ್ದೆವು. ಈಗ 'ವಾಟರ್ ಶೆಡ್' ಬಂದಾಗಲೂ ಕೂಡ ನಾವು ಅದೇ ಆಸೆಯನ್ನು ಇಟ್ಟುಕೊಂಡಿದ್ದೆವು. ನಾವು ಈ ಬಗ್ಗೆ 'ವಾರ್ತಾ' ಎಂಬ ಪುಸ್ತಕದಿಂದಿಡಿದು ಇಲ್ಲಿಯವರೆಗೆ ಎಲ್ಲಾ ಓದಿದೆವು. ನಿಮ್ಮ ಡ್ರೈಲ್ಯಾಂಡ್ ವಾಟರ್ ಶೆಡ್, ನ್ಯಾಷನಲ್ ವಾಟರ್ ಶೆಡ್, ಡಿ.ಪಿ.ಎ.ಪಿ.

ವಾಟರ್ ಶೆಡ್ ಇವೆಲ್ಲಾ ಕಲ್ಪನೆ ಇಟ್ಟುಕೊಂಡು ನಾವು ಓದಿದೆವು. ಪ್ರತಿ ಇಂಚು ನೀರನ್ನು ಪ್ಲಾನ್ ಮಾಡಿಕೊಂಡು ಬಂದು ನೀವು ಎಲ್ಲಿ ಬೇಕೋ ಅಲ್ಲಿ ನಿಲ್ಲಿಸಿ, ಶೇಖರಣೆ ಮಾಡಿ ಭೂಮಿಯಲ್ಲಿರುವಂತಹ ನೀರಿನ ಮಟ್ಟವನ್ನು ಜಾಸ್ತಿ ಮಾಡಿ, ಅದಕ್ಕೆ ಅಗತ್ಯವಾದಂತಹ ಒಂದು ವಾತಾವರಣ ಸೃಷ್ಟಿ ಮಾಡಿ, ತಂಪು ಸೃಷ್ಟಿ ಮಾಡಿ, ಕೊನೆಗೆ ಒಂದು ಕಡೆ ಸ್ಟಾಕ್ ಮಾಡುವಂತಹ ವ್ಯವಸ್ಥೆ ಮಾಡುತ್ತೀರೆಂಬ ಭಾವನೆ ನಮ್ಮ ಮನಸ್ಸಿನಲ್ಲಿತ್ತು. ಆದರೆ ಇವತ್ತೇನಾಗಿದೆ? ಇದೆಲ್ಲಾ ತಿರುಗು-ಮುರುಗು ಆಗಿದೆ. ಮಾನ್ಯ ಕೃಷಿ ಸಚಿವರೇ, ಯಾವುದೇ ವಾಟರ್ ಶೆಡ್‌ನಲ್ಲಿ ನೀವು ತಿಳಿದುಕೊಂಡಂತಹ ಕೆಲಸ ನಡೆದಿಲ್ಲ. ಯಾವುದೇ ವಾಟರ್ ಶೆಡ್‌ನಲ್ಲಿ ಇವತ್ತು ಜನೋಪಯೋಗಿ ಕೆಲಸ ನಡೆಯುತ್ತಿಲ್ಲ. ಯಾರದೋ ಒತ್ತಡಕ್ಕೆ ಆರ್.ಆರ್.ಎಸ್.ಗಳು, ಯಾರದೋ ಒತ್ತಡಕ್ಕೆ ನಾಲಾ ಬಂದ್‌ಗಳು, ಆಗಿವೆ. ನೀರು ಹರಿದು ಬರುವ ದಿಕ್ಕನ್ನು ನೋಡಿಕೊಂಡು ಇವನ್ನು ಮಾಡಿಲ್ಲ. ಅದಕ್ಕಿಂತ ಉತ್ತಮವಾಗಿ ಮಾನ್ಯ ಕೃಷಿ ಸಚಿವರು ಒಂದು ಉತ್ತಮವಾದ ತೀರ್ಮಾನವೊಂದನ್ನು ತೆಗೆದುಕೊಳ್ಳಬಹುದು. ಪ್ರತಿ ಕೆರೆಯನ್ನೂ ಕೂಡ ಇವತ್ತು ನೀವು ವಾಟರ್ ಶೆಡ್ ಕಾರ್ಯಕ್ರಮದಡಿ ತೆಗೆದುಕೊಳ್ಳಬಹುದು. ಪ್ರತಿ ಕೆರೆಯಲ್ಲಿರುವ ಹಳ್ಳಿಗಳನ್ನು ಬಳಸಿಕೊಂಡು, ಕೆರೆಗೆ ಸಿಲ್ಟ್ ಬರುವುದನ್ನು ತಪ್ಪಿಸಿ, ಕೆರೆಯಲ್ಲಿರುವಂತಹ ಸಿಲ್ಟ್ ಅನ್ನು ಡೀಸಿಲ್ಟ್ ಮಾಡಿ ಬಿಟ್ಟರೆ, ಅದು 'ವಂಡರ್‌ಫುಲ್ ವಾಟರ್ ಶೆಡ್' ಆಗುತ್ತದೆ. ಆ ಕಡೆಗೆ ಮಾನ್ಯ ಸಚಿವರು ಸ್ವಲ್ಪ ಹೆಚ್ಚು ಗಮನ ಕೊಡಬೇಕಾಗಿದೆ. ಈ ಹಳೆ ಮೈಸೂರು ಭಾಗದ ಜನ ಏನನ್ನು ನಂಬಿಕೊಂಡು ಬದುಕಿದ್ದೇವೆ? ಆಕಸ್ಮಾತ್ ಏನಾದರೂ ಕೆರೆಯಲ್ಲಿ ನೀರು ನಿಂತರೆ, ಸ್ವಲ್ಪ ಭೂಗರ್ಭದಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತದೆ, ನಮ್ಮ ಬೋರ್‌ವೆಲ್‌ಗಳೂ ಓಡುತ್ತವೆ ಎಂದು ನಾವು ನಂಬಿದ್ದೇವೆ. ಕೆರೆಯಲ್ಲಿ ನೀರಿಲ್ಲದಿದ್ದರೆ ಬಹುಶಃ ಬೋರ್‌ವೆಲ್‌ಗಳೂ ಫೈಲಾಗುತ್ತವೆ. ಅದನ್ನು ಸ್ವಲ್ಪ ಮಾನ್ಯ ಕೃಷಿವರು ಗಮನದಲ್ಲಿಟ್ಟುಕೊಳ್ಳಬೇಕು. ಭೂಸಾರ ಸಂರಕ್ಷಣೆ ಜೊತೆಗೆ ಸರ್‌ಫೇಸ್ ವಾಟರ್ ಮ್ಯಾನೇಜ್‌ಮೆಂಟ್ ಅನ್ನು ಪ್ಲಾನ್ ಮಾಡಿಕೊಳ್ಳಬೇಕು. ಇವತ್ತು ವಾಟರ್ ಮ್ಯಾನೇಜ್‌ಮೆಂಟ್ ಕೆಟ್ಟು, ನಿಮ್ಮ ಸಾಯಿಲ್ ಕನ್‌ಸರ್ವೇಷನ್ ಕೆಲಸಕ್ಕೆ ಯಾವುದೇ ಅರ್ಥವಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ಎಲ್ಲಿ ಸಾಯಿಲ್ ಕನ್‌ಸರ್ವ್ ಮಾಡುತ್ತೀರಿ? ಎಲ್ಲಿ ಹೆಚ್ಚು ನೀರು ಇರುತ್ತಿತ್ತೋ, ಎಲ್ಲಿ ಎರೋಷನ್ ಆಗುತ್ತಿತ್ತೋ, ಎಲ್ಲಿ ನಿಮ್ಮ ಮೇಲ್ಪದರದ ಮಣ್ಣು ಕೊಚ್ಚಿ ಹೋಗುತ್ತಿತ್ತೋ ಅದನ್ನು ನೀವು ಕನಸರ್ವ್ ಮಾಡಬೇಕೆಂದು ಹೇಳಿದಿರಿ. ಮಳೆ ಇಲ್ಲದೇ, ನೀರು ಇಲ್ಲದೆ, ಮಣ್ಣು ಕೊಚ್ಚಿ ಹೋಗುವಂತಹ ಸ್ಥಿತಿಯೇ ಇಲ್ಲದಂತಾಗಿದೆ. ಇವತ್ತು ಭೂಮಿಯಲ್ಲಿ ತೇವಾಂಶವೇ ಇಲ್ಲ. ಕನಿಷ್ಟ ಆ ಕಾರ್ಯಕ್ರಮದ ಜೊತೆಗೆ, ಈ ಸರ್‌ಫೇಸ್‌ವಾಟರ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮವನ್ನು ತಾವು ಸೇರಿಸಿಕೊಂಡರೆ, ಸ್ವಲ್ಪ ರೈತರಿಗೆ ಅನುಕೂಲವಾಗುತ್ತದೆ. ಇದರ ಜೊತೆಗೆ ನಮಗೆ ತಾವು ಆದ್ಯತೆಯನ್ನು ಕೊಡಿಸಬೇಕು. ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬೋರ್‌ವೆಲ್ ಇರಿಗೇಷನ್ ಅನ್ನು ನಾವು ನಂಬಿಕೊಂಡಿದ್ದೇವೆ. ನೀವು ಇಂಟ್ರಪ್‌ಷನ್ ಇಲ್ಲದೇ ಪವರ್ ಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಅದರ ಬಗ್ಗೆ ಮಾನ್ಯ ಕೃಷಿ ಸಚಿವರೇ ಈ ಕಡೆಗೆ ಕುಳಿತುಕೊಂಡಿದ್ದಾಗ ಬಹಳಷ್ಟು ಮಾತನಾಡಿದ್ದೀರಿ. ಅದರ ಬಗ್ಗೆ ನಾನೇನೂ ಸಹ ಹೇಳಬೇಕಾದ ಅಗತ್ಯವಿಲ್ಲ. ಗ್ರಹಚಾರ ಏನೆಂದರೆ, ನಿಮ್ಮ ಜೊತೆಗೆ ಅವತ್ತು ನಾವೂ ಇದ್ದೆವು. ಬೇಕಾದಷ್ಟು ಮಾತುಗಳನ್ನು ಆಗ ಆಡಿದ್ದೀರಿ. ಅದನ್ನೇ ಈಗ ತಾವು ಜಾರಿಗೆ ತನ್ನಿ, ಎಂದು ನಾನು

ತಮ್ಮನ್ನು ಕೋರುತ್ತಿದ್ದೇನೆ. ನಾನು ಇವತ್ತು ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡುವುದಿಲ್ಲ. ಒಂದು ಕಡೆ ರಾಜ್ಯ ಸರ್ಕಾರದಲ್ಲಿ ಬಂಡವಾಳ ಹಾಕಿ, ನೀರು ಕೊಟ್ಟು, ಪ್ರೊಟೆಕ್ಟೀವ್ ಇರಿಗೇಷನ್ ಅಂತೇಳಿ ನಾವು ಮಾಡಿ, ನೀನು ಕ್ರಾಪ್ ಬೆಳೆದುಕೊಂಡು ಸುಖವಾಗಿ ಇರು ಎಂದು ತೀರ್ಮಾನ ತೆಗೆದುಕೊಳ್ಳುವಂತಹ ನಾವು, ಇನ್ನೊಂದು ಕಡೆ ನಾವೇ ಬಂಡವಾಳ ಹಾಕಿ, ನಾವೇ ರಿಸ್ಕ್ ತೆಗೆದುಕೊಂಡು ಬೋರ್ ಕೊರೆಸಿ, ನಾವೇ ರಿಸ್ಕ್ ತೆಗೆದುಕೊಂಡು ಪಂಪ್ ಫಿಕ್ಸ್ ಮಾಡಿ, ನಾವೇ ಇವತ್ತು ಕರೆಂಟ್ ಇಲ್ಲ, ಪವರ್ ಇಲ್ಲ ಎಂದೇಳಿ ಕುಳಿತುಕೊಂಡು, ಬರುತ್ತಿರುವ ಬೆಳೆಯೂ ನಾಶವಾಗುತ್ತಿದ್ದರೆ, ನಮ್ಮ ಸ್ಥಿತಿ ಏನಾಗಬೇಕು? ನಾವು ಈ ಬರುತ್ತಿರುವ ಬೆಳೆಯೂ ನಾಶವಾಗುತ್ತಿದ್ದರೆ, ನಮ್ಮ ಸ್ಥಿತಿ ಏನಾಗಬೇಕು? ನಾವು ಈ ದೇಶದ ಮಕ್ಕಳಲ್ಲವೇ? ನಾವೇನೂ ನಮ್ಮನ್ನು 'ಮಣ್ಣಿನ ಮಕ್ಕಳು' ಎಂದು ಹೇಳಿ ಕೊಳ್ಳುವುದಿಲ್ಲ. ಕನಿಷ್ಟ ಪಕ್ಷ ಮಾನ್ಯ ರಾಜಣ್ಣನವರು ಹೇಳುವಂತೆ 'ಸಗಣಿಯ ಮಕ್ಕಳು' ಆಗಿಯಾದರೂ ನಾವು ಬದುಕಬೇಕಲ್ಲವೇ? ಈ ಕಡೆ ಮಾನ್ಯ ಸಚಿವರು ಸ್ವಲ್ಪ ಗಮನ ಹರಿಸಬೇಕು. ಕೊನೆಯದಾಗಿ, ಬೆಳೆ ವಿಮಾ ಯೋಜನೆ ಬಗ್ಗೆ ಹೇಳುವುದಾದರೆ, ಇದೊಂದು ಕೆಟ್ಟ ತೀರ್ಮಾನವೆಂದು ನಾನು ಭಾವಿಸುತ್ತೇನೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಬೆಳೆಗೆ ವಿಮೆಯನ್ನು ನಿಗದಿ ಮಾಡುವುದು, ತಾಲ್ಲೂಕನ್ನೇ ಒಂದು ಯೂನಿಟ್ ಆಗಿ ಮಾಡುವುದು, ತಾಲ್ಲೂಕಿನ ಯೂನಿಟ್‌ನಲ್ಲಿ ಶೇಕಡ 65ರಷ್ಟು ಬೆಳೆ ಬಾರದೇ ಹೋದರೆ, ನಿನಗೆ ಬೇಕಾದಷ್ಟು ಬೆಳೆ ಆಗಿದೆ, ಪರಿಹಾರ ಅರ್ಹರಲ್ಲ ಎನ್ನುವುದು ನಿಜವಾಗಿಯೂ ಕೂಡ ಒಂದು ಅವೈಜ್ಞಾನಿಕವಾದಂತಹ ತೀರ್ಮಾನವಾಗಿದೆ. ಪ್ರತಿ ಗ್ರಾಮವನ್ನು, ಪ್ರತಿ ಹಳ್ಳಿಯನ್ನೂ ಕೂಡ ತಾವು ಒಂದು ಯೂನಿಟ್ ಅನ್ನಾಗಿ ಮಾಡಬೇಕು. ಆಂಧ್ರಪ್ರದೇಶದಲ್ಲಿ ಅದು ಈಗ ಪಂಚಾಯಿತಿ ಲೆವೆಲ್‌ಗೆ, ಹೋಬಳಿ ಲೆವೆಲ್‌ಗೆ ಬಂದಿದೆ. ಆಂಧ್ರಪ್ರದೇಶದಲ್ಲಿ ಶೇಕಡ 44ರಷ್ಟು ಇರಿಗೇಟೆಡ್‌ಲ್ಯಾಂಡ್ ಇದೆ. ನಾವು 17-19 ಪರ್ಸೆಂಟೇಜಷ್ಟು ಇರಿಗೇಟೆಡ್ ಲ್ಯಾಂಡ್ ಮಾತ್ರ ನಮ್ಮಲ್ಲಿದೆ. ಕನಿಷ್ಟ ಕರ್ನಾಟಕದಲ್ಲಿ ಒಂದೊಂದು ಗ್ರಾಮಕ್ಕಾದರೂ ನೀವು ಆ ಸ್ಕೀಮ್ ಅನ್ನು ಅಡಾಪ್ಟ್ ಮಾಡಬೇಕು. ಆ ಗ್ರಾಮ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂಬರ್‌ನಲ್ಲಿ ಆದರೂ, ನೀವೊಂದು ಕ್ರಾಪ್ ಕಟ್ಟಿಂಗ್ ಎಕ್ಸ್‌ಸೈಜ್ ಮಾಡಿ ಬೆಳೆ ನಷ್ಟವಾಗಿದೆ ಎಂದರೆ ಪರಿಹಾರ ಕೊಡುವಂತಾಗಬೇಕು. ಕ್ರಾಪ್ ಕಟ್ಟಿಂಗ್ ವಿಚಾರವಂತೂ ಒಂದು ರೀತಿಯ ದುರಂತ, ಅದನ್ನು ಯಾರು ಮಾಡುತ್ತಾರೋ, ಹೇಗೆ ಮಾಡುತ್ತಾರೋ ನನಗಂತೂ ಅರ್ಥವೇ ಆಗಿಲ್ಲ. ನಾನು ಒಮ್ಮೆ ಯಾವುದೋ ಒಂದು ಕಮಿಟಿಯ ಮುಂದೆ, ಆರು ಆಣೆ ಬೆಳೆಯೆಂದು ಬೆಳೆಯುತ್ತೀರಿ, ಹದಿನಾರಣೆ ಅಂದರೆ ಒಂದು ಎಕರೆಗೆ ಎಷ್ಟು ಬೀಳಬೇಕು ಎಂಬುದನ್ನು ಮೊದಲೇ ಹೇಳಿ ಎಂದು ನಾನು ಅಧಿಕಾರಿಗಳನ್ನು ಕೇಳಿದೆ. ಒಂದು ಎಕರೆಗೆ ಇಷ್ಟು ಬೀಳಬೇಕು ಎಂದು ನಿಗದಿ ಮಾಡಿ, ಆಮೇಲೆ ಇದರಲ್ಲಿ ಆರಾಣೆ, ಎಂಟಾಣೆ, ನಾಲ್ಕಾಣೆ ಎಂದು ಬೆಳೆದರೆ, ಏನಾದರೂ ಆಣೇವಾರಿ ಬೆಳೆ ಬರುತ್ತದೆ. ನಿಮ್ಮ ವಿಲೇಜ್ ಅಕೌಂಟೆಂಟೋ, ಅಥವಾ ನಿಮ್ಮ ಅಗರಿಕಲ್ಚರ್ ಅಸಿಸ್ಟೆಂಟೋ ಯಾವುದೋ ಬೇಕಾದೆಂತಹ ಒಂದು ತೆನೆಯನ್ನು ಹೊಸಗಿಕೊಂಡು ಬಂದು ಬಿಟ್ಟು, ಇಷ್ಟು ಕೆ.ಜಿ. ಬಿತ್ತು, ಇಷ್ಟು ಕ್ವಿಂಟಾಲ್ ಬಿತ್ತು ಎಂದು ನಮ್ಮ ಹಣೆಬರಹ ಬರೆಯುವಂತಹ ಸ್ಥಿತಿ ಏನಿದೆ, ಅದನ್ನು ಸ್ವಲ್ಪ ಸುಧಾರಿಸಬೇಕು. ವೈಜ್ಞಾನಿಕವಾಗಿ ಇದನ್ನು ನಿಷ್ಕರ್ಷೆ ಮಾಡುವಂತೆ ಮಾಡಬೇಕು. ಇನ್ನು ಪಾಣಿ ಬರೆಯುವುದರ ಬಗ್ಗೆ ಹೇಳುವುದಾದರೆ, ಇವತ್ತೇನು ಕರ್ನಾಟಕದಲ್ಲಿ ಪಾಣಿ ಬರೆಯುತ್ತಿದ್ದಾರೆ,

ಅದನ್ನು ಯಾರು ಬರೆಯುತ್ತಿದ್ದಾರೋ, ಎಲ್ಲಿ ಬರೆಯುತ್ತಿದ್ದರೋ, ನಮಗಂತೂ ಗೊತ್ತಿಲ್ಲ. ನಮ್ಮ ಊರಿನಲ್ಲಿ ಒಂದು ಸಾರಿ ವಿಲೇಜ್ ಅಕೌಟೆಂಟ್‌ನ ಮನೆಗೆ ನಾನು ಹೋದಾಗ, ಅವರ ಮನೆಯಲ್ಲಿ ಮಿಡ್ಲ್ ಸ್ಕೂಲ್ ಓದುವ ಹುಡುಗನ ಕೈಯಲ್ಲಿ ಪಾಣಿ ಬರೆಯಲು ಕೊಟ್ಟು ಕುಳ್ಳರಿಸಿದ್ದರು. ಆ ಹುಡುಗ ಪಾಣಿ ಬರೆಯುತ್ತಿದ್ದ ಯಾರ ಪಾಣಿ ಯಾರಿಗೋ? ಯಾರ ಹಣೆಬರಹ ಎಲ್ಲಿಗೋ? ಇದನ್ನು ಯಾರು ಜಮೀನು ನೋಡಿ ಬರೆಯುತ್ತಿದ್ದಾರೆ? ಮಾನ್ಯ ಸಚಿವರು ಬಯಲು ಪ್ರದೇಶದಲ್ಲಿ ಬಂದು ನೋಡಬೇಕು, ಯಾವುದೇ ಜಮೀನಿನಲ್ಲಿ ಇವತ್ತು ಮರಗಳನ್ನು ಪಾಣಿಯಲ್ಲಿ ತೋರಿಸುತ್ತಿಲ್ಲ. ದಿವಸ ಬೆಳಿಗ್ಗೆ ಎದ್ದರೆ, ಮರ ಕೊಯ್ಯುತ್ತಾರೆ ಅಂದರೆ ಅದು ಯಾರಿಗೆ ಸೇರಿದೆ ಎಂದು ಅಣ್ಣತಮ್ಮಂದಿರ ವ್ಯಾಜ್ಯ ತೀರ್ಮಾನ ಮಡುವುದೇ ಆಗಿದೆ. ನಮ್ಮ ಫಾರಸ್ಟ್ ಆಫೀಸರ್ ಯಾವುದಾದರೂ ಪಾಣಿ ತೆಗೆದುಕೊಂಡು ಬಂದಾಗ, ವಿಲೇಜ್ ಅಕೌಂಟೆಂಟ್‌ಗೆ ದುಡ್ಡೋ, ಕಾಸೋ ಕೊಟ್ಟು, ಆ ಪಾಣಿಯಲ್ಲಿ ಒಂದು ಸಾಲು 'ನನ್ನ ಜಮೀನಿನಲ್ಲಿ ಹುಣಸೆ ಮರ ಇತ್ತು, ಮಾವಿನ ಮರ ಇತ್ತು, ಹಲಸಿನ ಮರ ಇತ್ತು' ಎಂದು ಬರೆಸಿಕೊಂಡು ಬಿಡುತ್ತಾರೆ. ಇವರ್‍ಯಾದರೂ ಸ್ಪಾಟ್ ನೋಡಿ ಪಾಣಿ ಬರೆದಿದ್ದರೆ, ಆ ಮರಗಳನ್ನು ಕೈ ಬಿಟ್ಟು ಬರೆಯುವುದಕ್ಕೆ ಆಗುತ್ತಿತ್ತೇ? ಮಾನ್ಯ ಚಿಕ್ಕೇಗೌಡರು ಇಲ್ಲಿ ಕೃಷಿ ಸಚಿವರಾಗಿದ್ದಾಗ ಒಂದು ಮಾತು ಆಡಿದ್ದರು. ಪಾಣಿ ಬರೆಯುವುದನ್ನು ನಾವು ಅಗ್ರಿಕಲ್ಚರಲ್ ಅಸಿಸ್ಟೆಂಟ್‌ಗಳಿಗೆ ವಹಿಸುವುದು ಉತ್ತಮ ಎಂದು ಅವರು ಇಲ್ಲಿ ಹೇಳಿದ್ದರು. ಈಗಿನ ಮಾನ್ಯ ಸಚಿವರು ಅದನ್ನು ಒಮ್ಮೆ ಪರಿಶೀಲನೆ ಮಾಡಬಹುದು. ಇವರು ನಿಜವಾಗಿ ಭೂಮಿ ಮೇಲೆ ಓಡಾಡುತ್ತಿದ್ದಾರೆ, ನಿಜವಾಗಿ ರೈತರ ಮಧ್ಯೆ ಇದ್ದಾರೆ ಎಂದರೆ, ಕೃಷಿ ಸಹಾಯಕರು ಪಾಣಿಯನ್ನು ಬರೆಯಬಹುದು. ಅದರಲ್ಲಿ ತಪ್ಪೇನೂ ಆಗುವುದಿಲ್ಲ. ಸರ್ಕಾರ ಏನಾದರೂ ಒಂದು ಆದೇಶ ಹೊರಡಿಸಿ, ಅವರ ಕಡೆಯಿಂದಲೇ ಪಾಣಿ ಬರೆಸಿದರೆ ನಿಜವಾಗಿ ಏನು ಬೆಲೆ ಇಟ್ಟಿದ್ದೀವಿ ಎಂದೇಳಿ ಗೊತ್ತಾಗುತ್ತದೆ. ಇನ್ನು ಇದರ ಜೊತೆಗೆ, ಇನ್‌ಫುಟ್ಸ್ ಕಾರ್ಯಕ್ರಮದಲ್ಲಿ ರೈತನಿಗೆ ಸಿಕ್ಕುವ ಸಾಲ ಕೂಡ ಸೇರುತ್ತದೆ. ಸಾಲ, ಸಾಲದ ಮೇಲಿನ ಬಡ್ಡಿ ನಮ್ಮ ಪ್ರೊಡಕ್ಷನ್ ಕಾಸ್ಟ್‌ಗೆ ಸೇರುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಏನಾಗಿದೆ? ನಾನು ಇಲ್ಲಿ ಬಹಳ ಒತ್ತಡ ತಂದೆ, ಶೇಕಡ 16-16 ½ ರಂತೆ ನೀವು ಕೋ-ಅಪರೇಟಿವ್ ಲೋನ್ ಕೊಡುತ್ತಿದ್ದೀರೆಂದು ನಾನಿಲ್ಲಿ ಒತ್ತಡ ತಂದಿದೆ. ನಾನು ಸಾಲ ತೆಗೆದುಕೊಂಡು ಬಂದು ವಾಪಸ್ ಕಟ್ಟುವಾಗ, ಶೇಕಡ 10 ಷೇರ್, ಶೇಕಡ 16 -16 ½ ರಂತೆ ನೀವು ಕೋ-ಅಪರೇಟಿವ್ ಲೋನ್ ಕೊಡುತ್ತಿದ್ದೀರೆಂದು ನಾನಿಲ್ಲಿ ಒತ್ತಡ ತಂದೆ. ನಾನು ಸಾಲ ತೆಗೆದುಕೊಂಡು ಬಂದು ವಾಪಸ್ ಕಟ್ಟುವಾಗ, ಶೇಕಡ 10 ಷೇರ್, ಶೇಕಡ 16 ½ ಬಡ್ಡಿ ಸೇರಿದರೆ, ಶೇಕಡ20ರಷ್ಟು ಬಡ್ಡಿ ರೈತ ತೆರಬೇಕಾಗಿದೆ. ಹೀಗಾದರೆ ರೈತ ಉಳಿಯುತ್ತಾನೆಯೇ? ಯಾವುದಾದರೂ ಸಂಸ್ಥೆ ಉಳಿಯುತ್ತದೆಯೇ? ನಾನು ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಮಾನ್ಯ ಸಹಕಾರಿ ಸಚಿವರು ಅವತ್ತು ಇಲ್ಲಿ ಭರವಸೆ ಕೊಟ್ಟರು. ನನ್ನ ದೃಷ್ಟಿಯಲ್ಲಿ ಇದರ ಬಗ್ಗೆ ಮಾನ್ಯ ಸಹಕಾರಿ ಸಚಿವರಿಗಿಂತಲೂ ಮಾನ್ಯ ಕೃಷಿ ಸಚಿವರು ತೆಗೆದುಕೊಳ್ಳಬೇಕಾದ ತೀರ್ಮಾನವಿದು. ಅಗ್ರಿಕಲ್ಚರ್ ಲೋನ್ ಏನು ಕೊಡುತ್ತಿದ್ದೀರಿ, ಎಷ್ಟು ಧಾರಣೆಗೆ ಬಡ್ಡಿ ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ನೋಡಬೇಕು. ನನಗೆ ಮಾರುಕಟ್ಟೆಯಲ್ಲಿ ಏನು ಗಿಟ್ಟುತ್ತದೆ ಎಂದು ನೋಡಬೇಕು. ಅದನ್ನಾದರೂ ಸ್ವಲ್ಪ ಇಳಿಸಿದರೆ ಎರಡು ಮೂರು ರೂಪಾಯಿ ಬಡ್ಡಿ ಕಡಿಮೆ ಆದರೆ ನಾನು ಅಷ್ಟು ವರಮಾನ ಪಡೆದ

ಹಾಗಾಗುತ್ತದೆ. ಇಲ್ಲೋ ದಂಡ ಹಾಕಿಕೊಂಡು ಇಲ್ಲೇ ದುಬಾರಿ ಮಾಡಿಕೊಂಡು ಹೋಗಿ ರಾಜ್ಯದ ರೈತ ಸುಖವಾಗಿ ಇರಬೇಕೆಂದು ಹೇಳಿದರೆ ಹೇಗೆ ಸಾಧ್ಯ? ನೀವು ಕೂಡ ತಕ್ಕಂತಹ ಇನ್‌ಪುಟ್ಸ್ ನನಗೆ ಸಬ್ಸಿಡೈಸ್ಡ್ ಮಾಡಿ ನೀವು ಕೊಡುವ ಇನ್‌ಪುಟ್ಸ್ ಚೀಪರ್ ವೆರೈಟಿಯಲ್ಲಿ ಕೊಡಿ. ಅಲ್ಲಿ ಏನಾದರೂ ಕಾಸ್ಟ್ ಕಡಿಮೆ ಮಾಡಿ. ಕೋ-ಆಪರೇಟಿವ್ ಲೋನ್‌ನಿಂದ ನಿಮ್ಮ ಸ್ಟ್ರಕ್ಚರ್ ಎಲ್ಲಾ ಹಾಳಾಗಿ ಹೋಗುತ್ತಿದೆ. ಇನ್ನೊಂದು ದುರಂತ ಈ ರಾಜ್ಯದಲ್ಲಿ ಏನು ಮಾಡಿದ್ದೀರಿ, ಯಾರಾದರೂ ಸಾಲ ಮರುಪಾವತಿ ಮಾಡಿದರೆ ಸೊಸೈಟಿ ಡಿಫಾಲ್ಟ್ ಆಗಿದೆ, ಬ್ಯಾಂಕ್ ಡಿಫಾಲ್ಟ್ ಆಗಿದೆ ಎಂದು ರೈತರಿಗೆ ಸಾಲ ಕೊಡುವುದಿಲ್ಲ. ನಾವು ಇಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಾನು ಸಾಲ ತೀರಿಸುತ್ತೇನೆಂದರೆ, ಸಾಲ ಕೊಡುವುದಕ್ಕೆ ಬ್ಯಾಂಕಿಗೆ ಮತ್ತು ಸೊಸೈಟಿಗೆ ಎಲಿಜಿಬಿಲಿಟಿ ಇಲ್ಲ.

ಅಧ್ಯಕ್ಷರು : ಮ್ಯಾನ್ ಪವರ್ ಮತ್ತು ಮೆಷಿನ್ ಪವರ್ ಈ ದೇಶದಲ್ಲಿ ಅಬಂಡೆಂಟ್ ಮ್ಯಾನ್ ಪವರ್ ಇದೆ. ನಾವು ಮ್ಯಾನ್ ಪವರ್‌ಗೆ ಇನ್ನೂ ವ್ಯಾಲ್ಯು ಫಿಕ್ಸ್ ಮಾಡಲೇ ಇಲ್ಲ. ಮೆಷಿನ್ ಪವರ್‌ನಲ್ಲಿ ಒಂದು ಪಿನ್ ಮ್ಯಾನ್ಯುಫ್ಯಾಕ್ಚರ್ ಮಾಡುವುದರಿಂದ ಹಿಡಿದು ಒಂದು ಕೂಂಬ್ ಮ್ಯಾನ್ಯುಫ್ಯಾಕ್ಚರ್ ಮಾಡುವವರೆಗೆ ರೇಟ್ ಫಿಕ್ಸ್ ಮಾಡಿದ್ದಾರೆ. that is the basic source of exploitation.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು ಹೇಳಿದ ಹಾಗೆ ಅದಕ್ಕೆ ಕಾರಣವೇನು?

ಅಧ್ಯಕ್ಷರು : ಬೆವರಿಗೆ ಬೆಲೆ ನಿಗಧಿಯಾಗಿಲ್ಲ, ಸೆಂಟ್‌ಗೆ ಬೆಲೆ ನಿಗಧಿಯಾಗಿದೆ. ಅದಕ್ಕೆ ಕಾರಣ ನೀವೆಲ್ಲಾ ಮಾತನಾಡುತ್ತೀರಲ್ಲಾ ಹೇಳಿ. That is how you should proceed.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದಕ್ಕೆ ಕಾರಣ ನಾವು ಮನುಷ್ಯರಾಗಿ ಬದುಕಿದ್ದು. ಯಾರು ನಮ್ಮನ್ನು ಶೋಷಣೆ ಮಾಡುತ್ತಾರೆ, ಯಾರು ನಮ್ಮಿಂದ ರಕ್ತ ಕುಡಿಯುತ್ತಾರೆ ಎಂದು ಯೋಚನೆ ಮಾಡದೆ ನಾನು ರೈತ, ನೀನು ದೊಡ್ಡವನು, ನೀನು ಭಾರತದ ಬೆನ್ನಲುಬು ಎನ್ನುವ ದೊಡ್ಡಸ್ತಿಕೆಗೆ ಬದುಕಿದ್ದೇವಲ್ಲ ಅದು ಮೊದಲನೇ ಕಾರಣ. ನಾನು ಮಾಡಿದ್ದೇನೆ ನನಗೆ ಇಷ್ಟು ಬರಬೇಕೆಂದು ನಾನು ಕೇಳಿದ್ದರೆ ಇವತ್ತು ವ್ಯವಸ್ಥೆ ಕೆಡುತ್ತಿರಲಿಲ್ಲ. ನಾವು ಯಾರೋ ಮಾಡಿದ ತಪಸ್ಸಿನ ಫಲ ಯಾರೋ ತಿಂದು ಹೋದರು ಪರವಾಗಿಲ್ಲ ಎಂದು ಹೇಳಿ ದಾನ ಮಾಡಿದೆವಲ್ಲಾ ಸಾರ್. ಶ್ರೀಮಾನ್ ಡಿ.ವಿ. ಗುಂಡಪ್ಪನವರು ಹೇಳುತ್ತಾರೆ, ಕರ್ಣ ಕವಚವನ್ನು, ಕರ್ಣ ಕುಂಡಲವನ್ನು ಕೊಡಬೇಕಾದರೆ ಒಂದು ಕ್ಷಣ ಯೋಚನೆ ಮಾಡಬೇಕಾಗಿತ್ತು. ಇದು ತೆಗೆದುಕೊಂಡು ಹೋಗುವವನಿಗೆ ಏನಾದರೂ ಪ್ರಯೋಜನಕ್ಕೆ ಬರುತ್ತಾ ಎಂದು ಯೋಚನೆ ಮಾಡಿದ್ದರೆ ಕುರುಕ್ಷೇತ್ರ ಬೇರೆಯಾಗಿರುತ್ತಿತ್ತು. ಆದರೆ ಯೋಚನೆ ಮಾಡಲಿಲ್ಲ, ನಾವು ದಾನಶೂರರು ನಾವು ಗ್ರಾಮೀಣ ಜನ ನಮ್ಮಲ್ಲಿರುವ ಹುಣಸೆ ಹಣ್ಣು ಹಲಸಿನ ಹಣ್ಣು ಎಲ್ಲಾ ನೌಕರಿ ಮಾಡುವವರಿಗೆ ಊರಿನಿಂದ ಹೊರಿಸಿ ಕಳುಹಿಸಿದ್ದೇವೆ. ಈಗ ತಾವು ಏನು ಸಾಲದ ವ್ಯವಸ್ಥೆ ಮಾಡಿದ್ದೀರಿ, ತಾವೇ ಹೇಳಿಕೊಂಡಿದ್ದೀರಿ. ನಾವು ಇನ್‌ಪುಟ್ಸ್‌ಗೆ ರೈತರಿಗೆ ಸಾಲ ಕೊಡುತ್ತೇವೆ, ಬಡ್ಡಿ ಕಡಿಮೆ ಕೊಡುತ್ತೇವೆ. ರೈತರಿಗೋಸ್ಕರ ಸಹಕಾರಿ ಕ್ಷೇತ್ರದಲ್ಲಿ ಎಷ್ಟು ಕೋಟಿ ಕೊಟ್ಟಿದ್ದೇವೆ, ಎರಡು ಸಾವಿರ ಚಿಲ್ಲರೆ ಎಂದು ಬರೆದುಕೊಂಡಿದ್ದೇವೆ. ಅದರ ಕಡೆ ಸ್ವಲ್ಪ ಗಮನ ಕೊಡಬೇಕು. ಇದು ನಿಜವಾಗಿಯೂ ಪ್ರಯೋಜನಕ್ಕೆ

ಬರುತ್ತಿಲ್ಲ. ಸೀಸನಲ್ ಲೋನ್ ಕೊಡುತ್ತಾರೆ, ಎಸ್‌ಟಿಕೆ, ಎಸ್‌ಟಿಆರ್ ಎಂದು, ಅದರ ಬದಲು ಕೇಳಿದಾಗ ಸಾಲ ಕೊಡುವಸ್ಥಿತಿಗೆ ಸಹಕಾರಿ ಸಂಘಗಳನ್ನು ನೀವು ತರಬೇಕು. ನನ್ನ ಜಮೀನು, ನನಗೆ ಬೇಕಾದಾಗ ಸಾಲ ತೆಗೆದುಕೊಳ್ಳುತ್ತೇನೆ ಕೊಡಿ ಎಂದು ಹೇಳಿದರೆ, ಫೆಬ್ರವರಿ ತಿಂಗಳಲ್ಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ : ಸಾಲ ಕೊಡತಕ್ಕಂಥದ್ದು ಬೆಳೆಗೆ, ಅಥವಾ ಹೇಳಿದಾಗ ಎಂದರೆ ಅವಶ್ಯಕತೆ ಇರುವಾಗ ಸಾಲ ಸಿಗಬೇಕು....

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆರೆಯಲ್ಲಿ ನೀರಿದ್ದರೆ ಏಪ್ರಿಲ್ ತಿಂಗಳಲ್ಲಿ ಕೂಡ ಭತ್ತವನ್ನು ನಾಟಿ ಮಾಡುತ್ತಾರೆ ತಮಗೆ ಗೊತ್ತಾ? ಜನವರಿ ತಿಂಗಳಲ್ಲಿ ಮಾಡಬೇಕಾಗಿತ್ತು, ಸಂಕ್ರಾಂತಿಯಲ್ಲಿ ಒಟ್ಟಲು ಬಿಟ್ಟುಕೊಂಡು ಆ ಮೇಲೆ ನೀವು ಗದ್ದೆ ಮಾಡಿ ಎಂದರೆ ಏಪ್ರಿಲ್‌ನಲ್ಲಿ ನಾವು ಮಾಡುತ್ತೇವೆ. ಇವತ್ತು ಮೇ ತಿಂಗಳಲ್ಲಿ ಮಾಡುವ ರೈತರೂ ಇದ್ದಾರೆ. ಅವರಿಗೆ ಇವತ್ತೇ ಬೇಕು, ನಾಳೆ ಬೇಕು ಎಂದು ಹೇಳುವುದು ಅಷ್ಟು ಸರಿಯಲ್ಲ. ನನ್ನ ಆಸ್ತಿ ಅಡುವು ಇಟ್ಟು ಸಾಲ ಕೇಳುವುದಕ್ಕೆ ನೀವು ಏನು ಕಂಡೀಷನ್ ಹಾಕುವುದು, ದಯಮಾಡಿ ಕೇಳಿದಾಗ ಸಾಲ ಸಿಗುವ ಸ್ಥಿತಿಗೆ ಕೊಡಬೇಕು. ಮತ್ತು ಏನು ನ್ಯಾಷನಲ್ ವಾಟರ್ ಶೆಡ್ ಬಗ್ಗೆ ಮಾತನಾಡುತ್ತಿದ್ದೀರಿ, ಇದರಲ್ಲಿ ತಾವು ಕೊಟ್ಟಿರುವ ಪುಸ್ತಕ ಓದಿದರೆ ಮನಸ್ಸಿಗೆ ನೋವಾಯಿತು. ಹೋದಸಾರಿ ಹಣ ಖರ್ಚಾಗಲಿಲ್ಲ. ತಾವೇ ಒಂದು ಸಾರಿ ಇದು ಪರಾಂಬರಿಸಬೇಕು. ನ್ಯಾಷನಲ್ ವಾಟರ್ ಶೆಡ್ ಸ್ಕೀಮ್‌ನಲ್ಲಿ ಖರ್ಚುಮಾಡುವುದಕ್ಕೆ ಆಗಲಿಲ್ಲವೆಂದು ಹೇಳಿದ್ದೀರಿ. ತಾವು ಏನು ಗುರಿ ಇಟ್ಟುಕೊಂಡಿದ್ದೀರಿ, ಅದರಲ್ಲಿ ಅರ್ಧ ಭಾಗ ಕೂಡ ಆಗಲಿಲ್ಲ. ಇವತ್ತು ಏನಾದರೂ ಬಯಲು ಸೀಮೆಗೆ ಎಂದು ದುಡ್ಡು ಖರ್ಚು ಮಾಡಿದ್ದರೆ ಬಹುಶಃ ಅದು ಬೇಕಾದಷ್ಟು ಪ್ರತಿಯಾಗಿರುವುದು. ರೈತರ ಜಮೀನಿಗೆ ಸಸ್ಯ ಸಂರಕ್ಷಣೆ ಆಗಿರುವುದು. ನೀವು ಮಾಡಲಿಲ್ಲ ಒಂದು ಕಡೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ದುಡ್ಡು ಕೊಡುವುದಿಲ್ಲ, ಇನ್ನೊಂದು ಕಡೆ ವಾಟರ್ ಶೆಡ್ ಬೋರ್ಡ್‌ನವರು ಖರ್ಚು ಮಾಡುವುದಿಲ್ಲ. ಬೇರೆ ಯಾವುದೇ ದುಡ್ಡು ಖರ್ಚು ಮಾಡುವುದಕ್ಕೆ ನಿಮ್ಮ ಹತ್ತಿರ ದುಡ್ಡು ಇಲ್ಲ. ಕೇಂದ್ರ ಸರ್ಕಾರದಿಂದ ತಮ್ಮ ಇಲಾಖೆಗೆ ಒಂದು ಮಾತು ಹೇಳುತ್ತೇನೆ, ನೀವು ಖರ್ಚು ಮಾಡುತ್ತಿರುವುದರಲ್ಲಿ ಸುಮಾರು 80 ಪರ್ಸೆಂಟ್ ಗ್ರ್ಯಾಂಟ್ಸ್ ಕೇಂದ್ರ ಸರ್ಕಾರದಿಂದ ಬಂದಿದ್ದು. ಅಗ್ರಿಕಲ್ಚರ್‌ಗೆ ತಾವು ಏನು ಖರ್ಚು ತೋರಿಸುತ್ತೀರೋ, ಅದರಲ್ಲಿ ಲಯನ್ ಶೇರ್ ಭಾರತ ಸರ್ಕಾರದ್ದು. ತಾವು ಏನು ವಿವಿಧ ಸ್ಕೀಮ್‌ಗಳಿಗೆ ಸಾಲ ಕೊಡುತ್ತೀರಿ, ಅದರಲ್ಲಿ ತಮ್ಮ ಕೃಪೆ ಇಲ್ಲವೇ ಇಲ್ಲ. ನಮಗೆ ಅವರು ಕೊಟ್ಟರು ನೀವು ಪೂಜಾರಿಗಳು. ದೇವರು ಕೊಟ್ಟಿದ್ದು ತೆಗೆದು ಭಕ್ತರಿಗೆ ಕೊಟ್ಟಿದ್ದೀರಿ ಅಷ್ಟೆ. ಅದನ್ನು ಆದರೂ ಸರಿಯಾಗಿ ವಿನಿಯೋಗ ಮಾಡದೆ ಇದ್ದರೆ ಹೇಗೆ? ನಿಮ್ಮಂಥವರು ಮಂತ್ರಿಯಾಗಿದ್ದಾಗ ನೀವೇ ಮನಸ್ಸಿನಲ್ಲಿ ಇಟ್ಟುಕೊಂಡ ಒಂದು ಯೋಜನೆ ವಾಟರ್ ಶಡ್ ಕಾರ್ಯಕ್ರಮ ಬಹಳ ಉತ್ತಮವಾದ ಕಾರ್ಯಕ್ರಮ ಎಂದು ಆ ಇಲಾಖೆಯಲ್ಲಿ ಆ ಹೆಡ್‌ಗಳಿಗೆ ಹಣ ಖರ್ಚಾಗಲಿಲ್ಲ ಎಂದರೆ ಎಷ್ಟರ ಮಟ್ಟಿಗೆ ಪ್ರಗತಿ, ಅಥವಾ ಸಾಧನೆಯಾಗಿರಬಹುದು? ತಾವು ಎಷ್ಟು ಖರ್ಚು ಮಾಡಿದ್ದೀರಿ ಎಂದು ತೆಗೆದು ನೋಡಿ. ನಾನು ಇದನ್ನು ಅಲ್ಲಿಗೆ ಬಿಟ್ಟು, ಇದಕ್ಕೆ ಇನ್ನೂ ಹೆಚ್ಚು ಖರ್ಚು ಮಾಡಬೇಕು ಎಂದು ಹೇಳಿ ಇನ್ನೂ

ಮಾರುಕಟ್ಟೆ ವ್ಯವಸ್ಥೆ ಏನಾಗಿದೆ ಎಂದರೆ ನಾವು ಏನಾದರೂ ಬೆಳೆದರೆ ನನ್ನ ತಾಲ್ಲೂಕಿನಲ್ಲಿ ಹೆಸರು ಕಾಳು, ಉದ್ದಿನ ಕಾಳು ಬಹಳ ವ್ಯಾಪಕವಾಗಿ ಬೆಳೆಯುವ ಜಾಗ, ಏನಾದರೂ ಏಪ್ರಿಲ್, ಮಾರ್ಚ್ ಕೊನೆಯಲ್ಲಿ ಮಳೆ ಬಂದರೆ ಬೇಕಾದಷ್ಟು ಹೆಸರು ಕಾಳು, ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಷ್ಟು ಬೆಳೆಯುತ್ತೇವೆ.10ನೇ ದಿವಸ ಇಟ್ಟುಕೊಳ್ಳುವುದಕ್ಕೆ ನಮಗೆ ಶಕ್ತಿ ಇರುವುದಿಲ್ಲ. ಹುಳು ಬೀಳುತ್ತವೆ. ಉದ್ದಿನ ಬೇಳೆ, ಉದ್ದಿನ ಕಾಳು ಇಟ್ಟುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಇದಕ್ಕೆ ಎಲ್ಲಾದರೂ ಒಂದು ಕಡೆ ಶೇಖರಣೆ ಮಾಡುವ ವ್ಯವಸ್ಥೆ ಮಾಡಿ, ಮುಂಗಡ ಹಣ ಕೊಡುವ ವ್ಯವಸ್ಥೆ ಮಾಡಿದ್ದರೆ 15 ದಿವಸ ಒಂದು ತಿಂಗಳು ಕಳೆದರೆ ಒಂದು ಕೇಜಿಗೆ ಮೂರರಿಂದ ನಾಲ್ಕು ರೂಪಾಯಿ ಧಾರಣೆ ನಮಗೆ ಜಾಸ್ತಿ ಸಿಗುತ್ತಿತ್ತು. ಆ ದಿಕ್ಕಿನಲ್ಲಿ ತಾವು ಆಲೋಚನೆ ಮಾಡಿಲ್ಲ ಕನಿಷ್ಟ ಅದನ್ನು ಸ್ಟಾಕ್ ಮಾಡುವುದಕ್ಕೆ ಏನಾದರೂ ಒಂದು ಸಣ್ಣ ವ್ಯವಸ್ಥೆ ಮಾಡಬೇಕಾಗಿತ್ತು. ಕನಿಷ್ಟ ರೈತನಿಗೆ 50 ರಿಂದ 60 ಪರ್ಸೆಂಟ್ ಮುಂಗಡ ಕೊಟ್ಟು ಸ್ವಲ್ಪ ದಿವಸದಲ್ಲಿ ಇದಕ್ಕೆ ಬೆಲೆ ಸಿಗುತ್ತದೆ ಎಂದು ಹೇಳುವ ಪರಿಸ್ಥಿತಿ ನಿರ್ಮಾಣ ಮಾಡಬೇಕಾಗಿತ್ತು. ನಮ್ಮ ಧಾರಣೆ ನಿಗಧಿ ಮಾಡುತ್ತಿರುವವರು ಯಾರು? ನೀವು ಬೆಳೆದ ರಾಗಿಗೆ 3.60 ಪೈಸೆ ನಾವು ಏನಾದರೂ ಈ ರಾಷ್ಟ್ರದಲ್ಲಿ ಇರಬೇಕಾ? ಇದು ಒಂದು ದುರಂತ. ಹೋದ ವರ್ಷ ರಾಗಿ ಬೆಳೆ ಅತ್ಯಂತ ಕಡಿಮೆ ಬಂದಿದೆ. ಧಾರಣೆಯೂ ಬಿದ್ದು ಹೋಗಿದೆ. ಎರಡನೆಯದು ಜೋಳ ಪ್ರಮುಖವಾದ ಕರ್ನಾಟಕದ ಹಾರ್ಡ್ ಸ್ಟೆಪ್ ಏನಿತ್ತು, ರಾಗಿ ಜೋಳ ಎರಡೂ ನಾಶವಾಗುವ ಸ್ಟೇಜ್‌ಗೆ ಬಂದು ನಿಂತಿದೆ. ಉತ್ತರ ಇಂಡಿಯಾದವರ ಫ್ಯಾಷನ್ ನಮ್ಮ ಮೇಲೆ ಬರಲಿಲ್ಲ, ಉತ್ತರ ಇಂಡಿಯಾದವರು ತಿನ್ನುವ ಆಹಾರ ಕೂಡ ನಮ್ಮ ಮೇಲೆ ಧಾಳಿ ಮಾಡಿದೆ. ಇವತ್ತು ನಾವು ತಿನ್ನುವ ಮೇಜರ್ ಊಟ ತಿಂಡಿ ಎಲ್ಲಾ ನಾರ್ಥ್ ಇಂಡಿಯನ್ ಕನ್‌ಫ್ಯಾಮ್ ಮಾಡುವ ಫುಡ್. ಯೋಚನೆ ಮಾಡಿದ್ದೇವಾ? ಏನಾದರೂ ನಮ್ಮ ಇರುವ ಫುಡ್‌ಗೆ ಟೇಸ್ಟ್ ಡೆವಲಪ್ ಮಾಡಿದ್ದೇವಾ? ಬೈ ಪ್ರಾಡಕ್ಟ್ ಮಾಡಿದ್ದೇವಾ? ರಾಗಿ ಒಳ್ಳೆಯ ಆಹಾರಧಾನ್ಯ ಎಂದು ಹೇಳಿದವರು ಏನು ಅದರ ಬಳಕೆ ಜಾಸ್ತಿ ಮಾಡುವ ಆಲೋಚನೆ ಮಾಡಿದ್ದೀರಾ, ರಾಜ್ಯ ಸರ್ಕಾರದವರು ಸಂಶೋಧನೆ ಮಾಡಿದ್ದೀರಾ? ಸಿಎಫ್‌ಟಿಆರ್‌ಐ ಎಂಬ ದೊಡ್ಡ ಸಂಸ್ಥೆ ಇಟ್ಟುಕೊಂಡಿದ್ದೀರಿ, ಪ್ರಯೋಜನಕ್ಕೆ ತೆಗೆದುಕೊಂಡು ಏನು ಮಾಡಿದಿರಿ? ಮೈಸೂರಿನಲ್ಲಿ ಎಷ್ಟೊಂದು ಜಾಗ ಕೊಟ್ಟು ವ್ಯವಸ್ಥೆ ಮಾಡಿ ಸಿಎಫ್‌ಟಿಆರ್‌ಐ ಎಂದು ಇಟ್ಟುಕೊಂಡಿದ್ದಾರೆ. ರಾಜ್ಯಕ್ಕೆ ಅದರ ಕೊಡುಗೆ ಏನು? ಈ ರಾಜ್ಯದಲ್ಲಿ ಬೆಳೆಯುವ ಬೆಳೆಗೆ ಫುಡ್ ಟೆಕ್ನಾಲಜಿ ರೀಸರ್ಚ್ ಇನ್‌ಸ್ಟಿಟ್ಯೂಟ್ ಇಟ್ಟುಕೊಂಡು ಏನು ಮಾಡಿದರು, ನಾವು ಪ್ರಶ್ನೆ ಕೇಳಬೇಕಾ? ಸಿಎಫ್‌ಟಿಆರ್‌ಐನವರು ಇದ್ದಾರೆ ಜವಾಬ್ದಾರಿ ಇಲ್ಲವಾ? ಈ ಕಡೆ ಸ್ವಲ್ಪ ಹೆಚ್ಚು ಒತ್ತನ್ನು ಕೊಡಬೇಕು. ಇದರ ಜೊತೆಗೆ ಇವತ್ತು ನಮ್ಮ ಎಪಿಎಮ್‌ಸಿ ಇದೆ, ದಂಡ ಹಾಕುತ್ತಾರೆ, ದುಡ್ಡು ಮಾಡುತ್ತೀರಿ. ಇಡುತ್ತೀರಿ, ಕೇಳುತ್ತಾರೆ ಕೊಡುತ್ತೀರಿ. ಇದು ನಿಜವಾದ ಎಪಿಎಂಸಿಯಾ?

ಶ್ರೀ ವಾಟಾಳ್ ನಾಗರಾಜ್ : ರಾಗಿ ಮುದ್ದೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ರಾಗಿ ಮುದ್ದೆ ಎಂದರೆ ಕೇವಲ ಶ್ರೀಮಂತರ ಊಟದ್ದಲ್ಲ, ಹಳ್ಳಿಯಲ್ಲಿ ಯಾರೋ ಬರೀ ಹಳ್ಳಿ ರೈತರು ಬಡವರು ಕೂಲಿಗಾರರಿಗೆ ಇತ್ತು. ಶ್ರೀಮಂತರಿಗೆ ಅದರಲ್ಲಿಯೂ ಪಟ್ಟಣವಾಸಿಗಳಲ್ಲಿ ಅದರಲ್ಲೂ

ಪಂಚತಾರಾ ಹೋಟೆಲ್‌ನಲ್ಲಿರುವ ಜನಕ್ಕೂ ರಾಗಿ ಮುದ್ದೆ ಅನ್ನುವುದು ಪವಿತ್ರವಾಗಿದೆ. ಪರಮ ಪವಿತ್ರವಾದ ಆಹಾರ ರಾಗಿ ಮುದ್ದೆ, ಮತ್ತು ಸೊಪ್ಪು ಇದು ಬಂದಿದೆ. ಅವರ ಬೇರೆ ಬೇರೆ ಊಟಗಳ ವ್ಯವಸ್ಥೆ ಇದೆ. ಎಲೆ ತುಂಬ ಹಾಕಿಕೊಳ್ಳುತ್ತಾರೆ. ಸಂಬಂಧ ಇಲ್ಲದೇ ಇರುವುದು ಹಾಕಿಕೊಂಡು ಜೊತೆಗೆ ದೊಡ್ಡ ವೈಭವ ಇದೆ. ರಾಗಿ ಮುದ್ದೆ ಇವತ್ತು ಅದಕ್ಕೆ ಎಷ್ಟು ರಾಜ ವೈಭವ ಸಿಕ್ಕಿದೆ ಎನ್ನುವುದು ನಮಗೆ ಗೊತ್ತು. ರಾಗಿ ಮುದ್ದೆ ಮೆರೆಯಬೇಕು ಸಂತೋಷ. ಒಂದು ಹಂತದಲ್ಲಿ ನಮ್ಮ ಮಾಜಿ ಪ್ರಧಾನಿ ಆಗಿದ್ದವರು ರಾಗಿ ಮುದ್ದೆ ಊಟ ಮಾಡುವುದು, ನಾವೆಲ್ಲಾ ಡೆಲ್ಲಿಯಲ್ಲಿ ರಾಗಿ ಮುದ್ದೆ ಊಟ ಮಾಡುವ ಸುದ್ದಿ ಬಂತು. ವಿಶ್ವದ ಅನೇಕ ದೊಡ್ಡ ದೊಡ್ಡ ಛಾನಲ್‌ಗಳಲ್ಲಿ ಮಾಜಿ ಪ್ರಧಾನಿ ರಾಗಿ ಮುದ್ದೆ ಊಟ ಮಾಡುತ್ತಾರೆಂದು ರಾಗಿ ಮುದ್ದೆ ಅದು ಬಡವರ ಅದು ನಿಜವಾಗಿಯೂ ಬಹಳ ದೈವಬಲಗಿ ಮುದ್ದೆ ಊಟ ಮಾಡಿದವನು ನಿರೋಗಿ ರೋಗವಿಲ್ಲವೆಂದು. ಯಾರು ರಾಗಿ ಮುದ್ದೆ ಊಟ ಮಾಡುತ್ತಾರೆ ಅವರು ನಿರೋಗಿ,-ಈ ಪರಿಸ್ಥಿತಿ ಇತ್ತು ಇವೊತ್ತು ಮೊದಲು ಇಡಿ, ವಡೆ, ದೋಸೆ ಎಂದು ಇತ್ತು, ಈಗ ಎಲ್ಲಿ ನೋಡಿದರೂ ರಾಗಿ ದೋಸೆ, ರಾಗಿ ಇಡ್ಲಿ ಇದು ಬಂದು ಬಿಟ್ಟಿದೆ. ರಾಗಿ ಮುದ್ದೆಗೆ ಇಂತಹ ಶಕ್ತಿ ಬಂತಲ್ಲ ಎಂದು ನಾವು ನಿಜವಾಗಿ ಒಪ್ಪಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚಾಮರಾಜ ನಗರ, ಗುಂಡ್ಲುಪೇಟೆಯಲ್ಲಿ ಜೋಳ ಬೆಳೆದು ಆ ಕಡೆ ರೊಟ್ಟಿ ನೀವು ತಿನ್ನುತ್ತೀರಿ. ಬರೀ ರಾಗಿ ಅಲ್ಲ. ಆದ ಕೈ ಜೋಳ ತಿನ್ನುವವನು ತೋಳದ ಹಾಗೆ.

ಶ್ರೀ ವಾಟಾಳ್ ನಾಗರಾಜ್ : ರಾಗಿ ತಿಂದವನು ನಿರೋಗಿ, ಜೋಳ ತಿಂದವನು ತೋಳ ಇದ್ದ ಹಾಗೆ ಅನ್ನುವುದು ಒಂದು ಗಾದೆ. ಆದುದರಿಂದ, ನಾನು ಕೃಷಿ ಸಚಿವರಿಗೆ ಹೇಳುವುದೇನೆಂದರೆ ಈ ರಾಗಿ ಮುದ್ದೆ ಬಗ್ಗೆ ಸಂಶೋಧನೆಯನ್ನೇನೂ ಮಾಡಬೇಕಾಗಿಲ್ಲ. ಈ ರಾಗಿಮುದ್ದೆಗೆ ಯಾವ ಸ್ಥಾನ ನಿಗಬೇಕಾಗಿದೆಯೋ ಆ ವ್ಯವಸ್ಥೆ ಬಗ್ಗೆ ಚಿಂತನೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಸ್ನೇಹಿತರಾದ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ರಾಗಿಮುದ್ದೆ ಬಗ್ಗೆ ಬಹಳ ಸ್ವಾರಸ್ಯವಾಗಿ ಹೇಳಿ ಇದು ಪಂಚತಾರಾ ಹೋಟೆಲ್‌ನಲ್ಲೂ ಕೂಡ ಬಳಕೆಯಲ್ಲಿದೆ ಎಂದಿದ್ದಾರೆ, ಅದು ನಿಜ. ಸನ್ಮಾನ್ಯ ದೇವೇಗೌಡರು ಪ್ರಧಾನಮಂತ್ರಿಯಾಗುವುದಕ್ಕಿಂತ ಮುಂದೆ ದೆಹಲಿಯಲ್ಲಿ ಈ ರಾಗಿ ಅಂದರೆ ಏನು, ರಾಗಿಮುದ್ದೆ ಬಗ್ಗೆ ಅಲ್ಲಿಯವರಿಗೆ ಅಷ್ಟಾಗಿ ಗೊತ್ತಿರಲಿಲ್ಲ. ಮಾನ್ಯ ಶ್ರೀ ದೇವೇಗೌಡರು ಪ್ರಧಾನ ಮಂತ್ರಿಯಾದ ಮೇಲೆ ಇವರು ರಾಗಿಮುದ್ದೆ ಊಟ ಮಾಡುತ್ತಾರೆ ಎಂಬುದು ದೆಹಲಿಯಲ್ಲಿ ಪ್ರಚಾರವಾದ ಮೇಲೆ ಅಲ್ಲಿಯ ಪಂಚತಾರಾ ಹೋಟೆಲ್‌ಗಳಲ್ಲಿ ಇದು ಹೆಚ್ಚಾಗಿ ಬಳಕೆಗೆ ಬಂತು. ಅಲ್ಲಿಯ ದೊಡ್ಡ ಮೆನು ಕಾರ್ಡ್‌ನಲ್ಲಿ ರಾಗಿಮುದ್ದೆ ಐಟಂನ್ನು ಸೇರಿಸಿದರು. ಆ ರೀತಿಯಿಂದಾಗಿ ಈ ರಾಗಿಮುದ್ದೆಗೆ ಅಂತರಾಷ್ಟ್ರೀಯ ಪ್ರಚಾರ ಸಿಕ್ಕಿತು.

ಶ್ರೀ ವಾಟಾಳ್ ನಾಗರಾಜ್ : ದೇವೇಗೌಡರು ಪ್ರಧಾನಮಂತ್ರಿಯಾದ ಮೇಲೆಯೇ ಅಲ್ಲಿ ರಾಗಿಮುದ್ದೆಗೆ ಪ್ರಚಾರ ಸಿಕ್ಕಿತು ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳೋಣ. ಅದೇ ರೀತಿ ರಾಗಿಮುದ್ದೆ-ಉಪ್ಪು ಹೆಸರು, ರಾಗಿಮುದ್ದೆ - ಹುರಿದ ಅವರೇಕಾಳು ಸಾರು ಕೂಡ ಬಹಳ ರುಚಿಯಾಗಿರುತ್ತದೆ.

ಶ್ರೀ ಸಿ. ಭೈರೇಗೌಡ : ನಾನು ಅನೇಕ ಸಾರಿ ವಾಟಾಳ್‌ನಾಗರಾಜ್‌ರವರಿಗೆ ಹೇಳಿದ್ದೇನೆ, ರಾಗಿಮುದ್ದೆ-ಕೋಳಿ ಸಾರನ್ನು ತಿನ್ನಿ, ತುಂಬಾ ಚೆನ್ನಾಗಿರುತ್ತದೆ ಎಂದು ಅನೇಕ ಬಾರಿ ಹೇಳಿದರೂ ಕೂಡ

ಅವರು ನನ್ನ ಮಾತನ್ನು ಕೇಳಲಿಲ್ಲ. ಈಗಲಾದರೂ ಅವರು ಒಂದು ಬಾರಿ ಅದರ ರುಚಿ ನೋಡಿದರೇ ಗೊತ್ತಾಗುತ್ತದೆ. ಹೇಗಿರುತ್ತದೆ ರಾಗಿಮುದ್ದೆ-ಕೋಳಿಸಾರು ಎಂದು. ಅದರ ರುಚಿ ನೋಡಿದ ಮೇಲೆ ನೀವೇ ಚೆನ್ನಾಗಿದೆಯೆಂದು ಹೇಳುತ್ತೀರಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ವಾಟಾಳ್‌ನಾಗರಾಜ್‌ರವರು ಏನು ರಾಗಿಮುದ್ದೆ ಮತ್ತು ಹುರಿದ ಅವರೇಕಾಳು ಸಾರಿನ ಬಗ್ಗೆ ಹೇಳಿದರೋ ಅದನ್ನು ಗಡಿಗೆಯಲ್ಲಿ ಮಾಡಿದರೆ, ಕುಕ್ಕರ್‌ನಲ್ಲಿ ಮಾಡಿದ್ದಕ್ಕಿಂತಲೂ ಹೆಚ್ಚಿನ ರುಚಿ ಬರುತ್ತದೆ.

ಶ್ರೀ ಎನ್ ರಾಜಣ್ಣ : ಮಾನ್ಯ ಅಧ್ಯಕ್ಷರೇ, ಬ್ರಿಟಿಷರ ಕಾಲದಲ್ಲಿ ಅವರು ಬೆಳಿಗ್ಗೆ ಎದ್ದಕೂಡಲೇ ಜಾಗ್ರಿಯನ್ನು ರಾಗಿಮಾಲ್ಟ್‌ಗೇ ಹಾಕಿಕೊಂಡು ಕುಡಿಯುತ್ತಿದ್ದರು. ಈಗ ಏನು ಮಕ್ಕಳಿಗಾಗಿ ಬೇರೆ ಫುಡ್‌ನ್ನು ಉಪಯೋಗಿಸುತ್ತಿದ್ದಾರೆ ಅದರ ಬದಲು ಈ ರಾಗಿಮಾಲ್ಟನ್ನು ಮಕ್ಕಳಿಗೆ ಕೊಟ್ಟರೆ ಬೇರೆ ಫುಡ್‌ಗಾಗಿ ಖರ್ಚಾಗುವ ಹಣದಲ್ಲಿ ಅರ್ಧ ಹಣ ಉಳಿಸಬಹುದು. ಪ್ರಾಬ್ಲಮ್ ಇರುವವರೂ ಕೂಡ ಇದನ್ನು ಪ್ರತಿ ನಿತ್ಯ ಉಪಯೋಗಿಸಬಹುದು, ಇದು ಆರೋಗ್ಯಕ್ಕೆ ಒಳ್ಳೆಯದು.

ಅಧ್ಯಕ್ಷರು : ಈ ಚರ್ಚೆ ಇಲ್ಲಿಗೆ ಸಾಕು. ಮಧುಸ್ವಾಮಿಯವರೇ ನೀವು ಬೇಗ ಭಾಷಣವನ್ನು ಮುಗಿಸಿ. ಏಕೆಂದರೆ ಬೇರೆಯವರೂ ಮಾತನಾಡಬೇಕಾಗಿದೆ. ಇವೊತ್ತೇ ಉತ್ತರವನ್ನು ಮಂತ್ರಿಗಳು ಕೊಡಬೇಕು.

ಶ್ರೀ ಜೆ.ಸಿ. ಮಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಎ.ಪಿ.ಎಂ.ಸಿ.ಗಳಿಗೆ ಏನಾದರೂ ಕಾಯಕಲ್ಪವನ್ನು ಮಾಡಬೇಕಾಗಿದೆ. ಏಕೆಂದರೆ ಇವರ ಬಳಿ ಇರುವ ಹಣ ಅವೈಜ್ಞಾನಿಕವಾಗಿ ಖರ್ಚಾಗುತ್ತಿದೆ.

ಶ್ರೀ ಸಿ. ಭೈರೇಗೌಡ : ಈ ಬೇಡಿಕೆ ಮೇಲೆ ಬಹಳ ಜನರು ಮಾತನಾಡಿರುವುದರಿಂದ ಅದಕ್ಕೆಲ್ಲಾ ಉತ್ತರಿಸಬೇಕಾಗಿದೆ. ಸೋಮವಾರ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಮಂತ್ರಿಗಳು ಉತ್ತರವನ್ನು ಸೋಮವಾರ ಕೊಡುತ್ತಾರೆ. ಮಾಧುಸ್ವಾಮಿಯವರೇ ನೀವು ಮುಂದುವರಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಎ.ಪಿ.ಎಂ.ಸಿ. ಕಾಯಿದೆಗೆ ಒಂದು ಅಮೆಂಡ್‌ಮೆಂಟನ್ನು ತರಬೇಕಾಗಿದೆ. ರೈತ ಬೆಳೆದಂಥ ಬೆಳೆಯನ್ನು ಅಡವಿಟ್ಟುಕೊಂಡು ಅಥವಾ ಸಂಗ್ರಹಣೆ ಮಾಡಿಕೊಂಡು ಅದರ ಮೇಲೆ ಮುಂಗಡ ಹಣವನ್ನು ಕೊಟ್ಟು ಮಾರುಕಟ್ಟೆಯಲ್ಲಿ ಒಳ್ಳೆಯ ಧಾರಣೆ ಬಂದಾಗ ಅದನ್ನು ಮಾರುವ ಹಾಗೆ ಅನುಕೂಲವಾಗುವ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿದೆ. ಇನ್ನು ಎರಡನೆಯದಾಗಿ ಬರುವ ಸೆಸ್ ಹಣದಲ್ಲಿ ಕನಿಷ್ಠ ರಿಸ್ಕ್ ಫಂಡ್‌ನ್ನು ಮಾಡುವುದಕ್ಕೆ ಭೈರೇಗೌಡರು ಆಲೋಚನೆಯನ್ನು ಮಾಡಬೇಕಾಗಿದೆ. ರೈತರಿಗೆ ಬಾಧೆ ಬಂದಾಗ ಇದು ಅನುಕೂಲವಾಗುತ್ತದೆ. ಎ.ಪಿ.ಎಂ.ಸಿ. ಸೆಸ್‌ನಲ್ಲಿ ಅಥವಾ ಮುನಿಸಿಪಾಲಿಟಿ ವ್ಯಾಪ್ತಿಗೆ ಬರುವ ವ್ಯಾಪಾರಗಾರರ ವ್ಯಾಪಾರದ ಮೇಲೆ ಒಂದು ಪರ್ಸೆಂಟ್ ಅಥವಾ ಎರಡು ಪರ್ಸೆಂಟ್ ಟರ್ನ್‌ಓವರ್ ಟ್ಯಾಕ್ಸ್‌ನ್ನು ಹಾಕಿ ಅದರಿಂದ ಬರತಕ್ಕಂಥ ಹಣದಲ್ಲಿ ಜಿಲ್ಲಾ

ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ರಿಸ್ಕ್ ಫಂಡನ್ನು ಮಾಡಬಹುದು. ಏಕೆಂದರೆ ಎಲ್ಲದಕ್ಕೂ ರಾಜ್ಯದ ಖಜಾನೆಯಿಂದಲೇ ಹಣವನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕೃಷಿ ಸಚಿವರು ಆಲೋಚನೆ ಮಾಡಬೇಕು. ಎ.ಪಿ.ಎಂ.ಸಿ.ಯಲ್ಲಿಯೇ ರೈತರು ಬೆಳೆದ ಬೆಳೆಗೆ ಒಂದು ಪರ್ಸೆಂಟ್ ಸೆಸ್ ಹಾಕಿ ಆ ಹಣದಲ್ಲಿ ರಿಸ್ಕ್ ಫಂಡ್ ಮಾಡಿದರೆ ಅದೇ ರೈತರ ಕಷ್ಟಕ್ಕೆ ಸಹಾಯವಾಗುತ್ತದೆ. ಈಗೇನೋ ಸಂಜೀವಿನಿ ಎಂಬ ಹೆಸರಿನಲ್ಲಿ 25 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಎಲ್ಲೋ ಆತ್ಮಹತ್ಯೆ ಮಾಡಿಕೊಂಡು ಸತ್ತರೆ ಆತನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬಹುದು ಎಂದು ಮಾಡಿದಿರಿ. ರೈತ ಅಪಘಾತದಲ್ಲಿ ಸತ್ತರೆ 25 ಸಾವಿರ ರೂಪಾಯಿಗಳನ್ನು ಕೊಡಿ ಎಂದರೆ ಅದಕ್ಕೆ ಅಮೆಂಡ್‌ಮೆಂಟ್ ತಂದರು. ನೀವು ಮಾರ್ಕೆಟ್‌ಗೆ ಹೋಗಿ ನಿಮ್ಮ ಮಾಲನ್ನು ಮಾರಿದ್ದೇವೆ ಎಂಬುದಕ್ಕೆ ದಾಖಲೆಯನ್ನು ತಂದರೆ ಮಾತ್ರ ಹಣ ಕೊಡುತ್ತೇವೆಯೇ ಹೊರತು ಆ ದಾಖಲೆ ಕೊಡದಿದ್ದರೆ ಕೊಡುವುದಿಲ್ಲ ಎಂದು ಹೇಳಿದಿರಿ. ಕುಟುಂಬದ ಯಜಮಾನನಾದ ಒಬ್ಬ ರೈತ ಸತ್ತರೆ 25 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಎ.ಪಿ.ಎಂ.ಸಿ.ಯವರು ಇಷ್ಟೊಂದು ಚೌಕಾಶಿ ಮಾಡಿದರೆ ಹೇಗೆ? ಅದು ಹಣವನ್ನು ಇಟ್ಟುಕೊಂಡು ಆ ರೀತಿ ಮಾಡುತ್ತಾರೆ. ಆದುದರಿಂದ, ಮಂತ್ರಿಗಳು ಈ ಕಡೆ ಸ್ವಲ್ಪ ಗಮನಹರಿಸಿ ನೋಡಬೇಕು. ಎ.ಪಿ.ಎಂ.ಸಿ.ಯಲ್ಲಿರುವ ಹಣದಲ್ಲಿ ಒಂದೆರಡು ಪರ್ಸೆಂಟ್‌ನಷ್ಟು ಹಣವನ್ನು ರೈತರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಇನ್ನು ತಾಲ್ಲೂಕು ಮಟ್ಟದಲ್ಲಿ ಟಿ.ಎ.ಪಿ.ಸಿ.ಎಂ.ಎಸ್.ಗಳು ಇವೆ, ಇಲ್ಲಿಗೆ ಒಬ್ಬ ರೈತನೂ ಕೂಡ ತಾನು ಬೆಳೆದ ಮಾಲನ್ನು ಇವೊತ್ತಿನವರೆಗೆ ಮಾರಲಿಲ್ಲ, ರಾಜ್ಯ ಸರ್ಕಾರದವರು ಕೊಡುವ ದಿನಸಿಯನ್ನು ಬೇರೆಯವರಿಗೆ ಕೊಡುವಂಥ ಹೋಲ್‌ಸೇಲ್ ಏಜೆಂಟ್‌ರಾಗಿದ್ದಾರೆ. ಇಂಥ ಸೊಸೈಟಿಗಳ ಬಗ್ಗೆ ಏನಾದರೂ ಕಾಯಕಲ್ಪದಲ್ಲಿ ತರಬೇಕಾಗಿದೆ. ಇನ್ನು ಅಂತರ್ಜಲದ ಬಗ್ಗೆ ಹೇಳುವುದಾದರೆ ನಾವು ಜಿಯಾಲಜಿಸ್ಟನ್ನು ಕರೆಸಿ ಕೇಳಿದಾಗ ಅವರು ಪರಿಶೀಲಿಸಿ ರಾಕ್‌ಫಾರ್ಮೇಶನ್ ಬಗ್ಗೆ ತಿಳಿದು ಅದರ ಬಗ್ಗೆ ತಿಳಿಸಿ ಬೋರ್ ತೆಗೆದರೆ ನೀರು ಬರಬಹುದು ಎಂದು ಹೇಳುತ್ತಾರೆ, ಆದರೆ ಇಂದು 500 ರಿಂದ 550 ಅಡಿಯವರೆವಿಗೆ ಆಳಕ್ಕೆ ಹೋದರೂ ಕೂಡ ನೀರು ಸಿಗುತ್ತಿಲ್ಲ. ಈಗ ಅವರು ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಎಲ್ಲಾ ಜಿಲ್ಲೆಯಲ್ಲೂ ಸರ್ವೆ ಮಾಡಿ ಮ್ಯಾಪನ್ನು ಮಾಡಿದ್ದಾರೆ. ಆದರೆ, ಈ ರೀತಿಯ ಮ್ಯಾಪನ್ನು ನೀವು ಪಂಚಾಯತ್ ಲೆವೆಲ್‌ಗೆ ಹೊಂದಿಕೊಳ್ಳುವಂತೆ ಮಾಡಬೇಕಾಗಿದೆ. ಈ ರೀತಿ ಮಾಡಿ ಯಾವ ಜಮೀನಿನಲ್ಲಿ ನೀರಿದೆ ಮತ್ತು ಯಾವ ಜಮೀನಿನಲ್ಲಿ ನೀರಿಲ್ಲ ಎಂಬುದನ್ನು ನೋಟಿಫೈ ಮಾಡಬೇಕು. ರಿಗ್ ತೆಗೆದುಕೊಂಡಾದರೂ ಬೋರ್ ತೆಗೆಸುತ್ತೇವೆ ಎಂಬುದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಸರ್ಕಾರ ಕೊಡುವುದಕ್ಕೆ ಸಮರ್ಥವಾಗಬೇಕು. ಇವೊತ್ತು ಮೈನ್ಸ್ ಅಂಡ್ ಜಿಯಾಲಜಿಯವರ ಬಳಿ ಇರುವ ಫೋಟೋಗ್ರಾಫ್ ಮುಖಾಂತರ ಎಲ್ಲೆಲ್ಲಿ ನೀರಿದೆ ಮತ್ತು ಎಷ್ಟು ಅಡಿ ಆಳದವರೆಗೂ ಹೋದರೆ ನೀರು ಸಿಗುತ್ತದೆ ಎಂಬುದನ್ನು ಹೇಳಬಹುದು. ಆ ಸಾಮರ್ಥ್ಯ ಆ ಇಲಾಖೆಯವರಿಗೆ ಇದೆ. ಆದರೆ ಇಲಾಖೆಗೆ ಸರ್ಕಾರ ಸ್ವಲ್ಪ ಹಣವನ್ನು ಇದಕ್ಕಾಗಿ ಕೊಡಬೇಕಾಗಿದೆ. ಆ ರೀತಿ ಕೊಟ್ಟು ಪಂಚಾಯತ್ ಲೆವೆಲ್‌ಗೆ ಸರ್ವೇ ಮಾಡಿಸಿ ಇಂಥ ಜಮೀನಿನಲ್ಲಿ ನೀರಿಲ್ಲ, ಇಂಥ ಜಮೀನಿನಲ್ಲಿ ನೀರು ಎಷ್ಟು ಆಳದಲ್ಲಿ ಸಿಗುತ್ತದೆ ಎಂಬ

ಮಾಹಿತಿಯನ್ನು ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಸರ್ಕಾರ ಮಾಡಬೇಕು. ಈ ರೀತಿಯ ವ್ಯವಸ್ಥೆ ಮಾಡದೇ ಕೇವಲ ಬೋರ್ ಕೊರೆಸುತ್ತಾ ಹೋದರೆ ನೀರು ಸಿಗದೇ ಫೆಲ್ಯೂರ್ ಆಗುವುದೇ ಜಾಸ್ತಿಯಾಗುತ್ತದೆ ಎಂದು ನನಗನ್ನಿಸುತ್ತದೆ. ಇನ್ನು ನೀವು ಪಹಣಿ ಬರೆಯುವ ಬಗ್ಗೆ ಒಂದು ಸೀಸನ್‌ನ್ನು ಕಡ್ಡಾಯವಾಗಿ ನಿಗಧಿ ಮಾಡಬೇಕು. ಜನವರಿ ಮತ್ತು ಫೆಬ್ರವರಿ ತಿಂಗಳೊಳಗೇ ಪಹಣಿ ಬರೆದಿಡಬೇಕೆಂದು ಕಡ್ಡಾಯವಾಗಿ ನೀವು ಹೇಳಬೇಕು. ಇಂದು ಏಪ್ರಿಲ್, ಮೇ, ಜೂನ್ ತಿಂಗಳಾದರೂ ರೈತರ ಪಹಣಿಯನ್ನು ಬರೆಯುತ್ತಿಲ್ಲ. ಈ ರೆಮಿಶನ್ ಬರಬೇಕು ಎಂದರೆ ನಿಮಗೆ ಅರ್ಥವಾಗುವುದಿಲ್ಲ. ಈ ರೆಮಿಶನ್ ದುಡ್ಡಿಗೆ ಬಂದಾಗ ನಾನು ನಿಮಗೆ ಹೇಳುವುದೇನೆಂದರೆ ಇಂದು ಅವರವರ ಮರ್ಜಿಗೆ ಬಂದುಬಿಟ್ಟಿದ್ದಾರೆ. ಒಂದು ಸಹಕಾರಿ ಸಂಘದಲ್ಲಿ ಮಾರ್ಚ್ 30ಕ್ಕೆ ವಸೂಲಿ ಅವಧಿ ಮುಗಿಯುತ್ತದೆ, ಈ ದಿನಾಂಕ ಮುಗಿಯುತ್ತಾ ಬಂದರೂ ಒಂದು ತಾಲ್ಲೂಕಿನ ಪಹಣಿ ಡಿ.ಸಿ. ಆಫೀಸಿಗೆ ಹೋಗದಿದ್ದರೆ ಯಾವ ಅನುಕೂಲ ರೈತರಿಗೆ ಸಿಗುತ್ತದೆ ಹೇಳಿ? ಆದುದರಿಂದ ಈ ಪಹಣಿಯನ್ನು ಜನವರಿ ಅಥವಾ ಫೆಬ್ರವರಿಯಲ್ಲಿಯೇ ಬರೆದು ಕ್ಲೋಸ್ ಮಾಡಿದ್ದರೆ ಮಾರ್ಚ್ 30ರೊಳಗೆ ಸಾಲದ ಬಗ್ಗೆ, ಬಡ್ಡಿಯ ಬಗ್ಗೆ ಮತ್ತು ಕಂತಿನ ಬಗ್ಗೆ ರೆಮಿಶನ್ ಮಾಡಿದವರಿಗೆ ವಿವರ ಹೇಳುವುದಕ್ಕೆ ಅನುಕೂಲವಾಗುತ್ತದೆ. ಆ ಕಡೆಗೆ ಮಂತ್ರಿಗಳು ಆಲೋಚನೆಯನ್ನು ಮಾಡಬೇಕು. ಇನ್ನು ಕ್ರಾಪ್ ಕಟ್ಟಿಂಗ್ ಬಗ್ಗೆಯೂ ಕೂಡ ಏನಾದರೂ ವೈಜ್ಞಾನಿಕವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು. ನಾನು ನಿಮಗೆ ಆಗಲೇ ಹೇಳಿದೆ, ರೈತನಿಗೆ ಬೇಕಾದಂಥ ಎಲ್ಲಾ ರೀತಿಯ ಮಾಹಿತಿ ದೊರೆಯಲು ಅನುಕೂಲವಾಗುವಂತೆ ದೂರದರ್ಶನದಲ್ಲಿ ಇದಕ್ಕೇ ಒಂದು ಚಾನಲ್‌ನ್ನು ಪ್ರಾರಂಭ ಮಾಡಬೇಕು. ಈ ರೀತಿ ಮಾಡಿದರೆ ಇದರ ಬಗ್ಗೆ ಆಸಕ್ತಿ ಇರುವವರು ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಏಕೆಂದರೆ ನೀವು ಏನೇ ಒಂದು ಯೋಜನೆ ಮಾಡಿದರೂ ಕೂಡ 100 ಪರ್ಸೆಂಟ್ ಯಶಸ್ವಿ ಆಗುವುದಿಲ್ಲ. ಕೃಷಿಗೆ ಸಂಬಂಧಪಟ್ಟಂತೆ ಅಗತ್ಯವಿರುವ ಮಾಹಿತಿಯನ್ನು ರೈತ ಪಡೆಯಲು ಟಿ.ವಿ. ಚಾನಲ್ ಪ್ರಾರಂಭ ಮಾಡಿದರೆ ಸ್ವಲ್ಪ ಮಟ್ಟಿಗೆ ಬೆಳೆ ನಷ್ಟವಾಗುವುದನ್ನು ತಪ್ಪಿಸಬಹುದು. ಈ ಚಾನಲ್ ಮೂಲಕ ಔಷಧಿ ಸ್ಪ್ರೇ ಮಾಡುವ ಬಗ್ಗೆ, ಬೀಜದ ಬಗ್ಗೆ ಮತ್ತಿನ್ನಿತರ ಅಂಶಗಳ ಬಗ್ಗೆ ಹೇಳುವುದಲ್ಲದೇ ಅದರ ಜೊತೆಗೆ ಯಾವ ಯಾವ ಸೀಸಸ್‌ನಲ್ಲಿ ಬೆಳೆಯನ್ನು ಮಾರಬಹುದು, ಈ ರೀತಿ ಮಾರುವುದಕ್ಕೆ ವ್ಯವಸ್ಥೆ ಹೇಗಿದೆ ಎಂಬ ಬಗ್ಗೆ ಮತ್ತು ಎಷ್ಟು ದಿವಸ ಬೆಳೆಯನ್ನು ಸಂಗ್ರಹಣೆ ಮಾಡುವ ಮೂಲಕ ನಂತರ ಮಾರಾಟ ಮಾಡಿದರೆ ಏನು ಅನುಕೂಲವಾಗುತ್ತದೆ ಎಂಬ ಬಗ್ಗೆ ತಿಳಿಯುವ ಹಾಗೆ ವ್ಯವಸ್ಥೆ ಮಾಡಬಹುದು. ಈ ರೀತಿಯ ವ್ಯವಸ್ಥೆಯನ್ನು ಸ್ಟಾಕ್ ಎಕ್ಸ್‌ಚೇಂಜ್‌ನವರು ಏನು ಮಾಡಿದ್ದಾರೆ ಅದೇ ರೀತಿ ನೀವು ಮಾಡಬಹುದು. ಇದಕ್ಕಾಗಿ ಸ್ವಲ್ಪ ಹೆಚ್ಚು ಹಣ ಖರ್ಚಾದರೂ ಪರವಾಗಿಲ್ಲ, ನೀವು ಆಸಕ್ತಿಯನ್ನು ಈ ಕಡೆಗೆ ಕೊಡಬೇಕು. ಇನ್ನು ರೈತರು ಬೆಳೆದ ಬೆಳೆಯನ್ನು ಸ್ಟೋರೇಜ್ ಮಾಡುವುದಕ್ಕೆ ಅನುಕೂಲವಾಗಲು ಸ್ಟೋರೇಜ್ ಸೌಲಭ್ಯವನ್ನು ತಾವು ಮಾಡಬೇಕು. ಯಾವ ಬೆಳೆ ಕೆಟ್ಟುಹೋಗುತ್ತದೋ ಅಂಥ ಬೆಳೆಯನ್ನು ಒಂದೆರಡು ತಿಂಗಳು ಸ್ಟೋರ್ ಮಾಡಿ ನಂತರ ಮಾರಾಟ ಮಾಡುವುದಕ್ಕೆ ಅನುಕೂಲವಾಗಲು ರೈತರಿಗೆ ನೀವು ಸ್ಟೋರೇಜ್ ಸೌಲಭ್ಯವನ್ನು ಕಲ್ಪಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದನ್ನು ಮಾಡದಿದ್ದರೆ ಮಾರ್ಕೆಟ್‌ನಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಆಗುವುದಿಲ್ಲ. ಬೆಳೆದ ಕಾಳು ಹುಳು ಹತ್ತುತ್ತಾ

ಬರುತ್ತಿರುವಾಗ ಅದನ್ನು ಮೂರು ತಿಂಗಳು ಹಾಗೆಯೇ ಇಟ್ಟುಕೊಂಡು ನಂತರ ಮಾರಾಟ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ, ರೈತರ ಹೋಲ್ಡಿಂಗ್ ಕೆಪಾಸಿಟಿಯನ್ನು ನೀವು ಸ್ವಲ್ಪ ಮಟ್ಟಿಗೆ ಹೆಚ್ಚು ಮಾಡಿದರೆ ರೈತರಿಗೆ ಬೆಳೆಯನ್ನು ಸಂಗ್ರಹಣೆಯಲ್ಲಿ ಇಟ್ಟು ನಂತರ ಮಾರುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ತಾವು ಒಂದು ಕಡೆಯಲ್ಲಿ ಪ್ರೊಡಕ್ಷನ್ ಕಾಸ್ಟನ್ನು ಕಡಿಮೆ ಮಾಡಿಸಬೇಕು ಮತ್ತು ಮತ್ತೊಂದು ಕಡೆಯಲ್ಲಿ ಮಾರುಕಟ್ಟೆಯಲ್ಲಿ ಬೆಳೆಗೆ ರೆಮ್ಯುನರೇಟಿವ್ ಪ್ರೈಸ್ ಸಿಕ್ಕುವ ಹಾಗೆ ವ್ಯವಸ್ಥೆಯನ್ನು ಮಾಡಬೇಕು. ರೈತರನ್ನೇನೂ ನೀವು ಭಾರಿ ಶ್ರೀಮಂತರನ್ನಾಗಿ ಮಾಡಿ ಎಂದು ಹೇಳುತ್ತಿಲ್ಲ. ಅವರು ಮಾಡಿದ ಕೆಲಸಕ್ಕೆ ಸರಿಯಾದ ಕೂಲಿ ಸಿಗುವ ಹಾಗೆ ಮಾಡಿದರೆ ಸಾಕು ರಾಜ್ಯದ ರೈತರು ನಿಮ್ಮನ್ನು ನೆನಪಿಸಿಕೊಳ್ಳುತ್ತಾರೆ. ನಾವೇನೂ ಶಾಪಗ್ರಸ್ಥರಾಗಿದ್ದೇವೆ, ಆದರೆ ಎಲ್ಲಾ ಶಾಪಕ್ಕೂ ಒಂದು ರೀತಿಯ ವಿಮೋಚನೆ ಇದೆ, ಆದರೆ ರೈತರ ಶಾಪಕ್ಕೆ ಯಾವುದೇ ರೀತಿಯ ವಿಮೋಚನೆ ಇಲ್ಲ. ಏನೇ ಪರಿಹಾರವಿದ್ದರೂ ಕೂಡ ಪೂರ್ಣವಾಗಿ ಶಾಪ ವಿಮೋಚನೆ ಆಗುವುದಿಲ್ಲ. ಆದುದರಿಂದ ಈ ಕಡೆಗೆ ನೀವು ಹೆಚ್ಚು ಒತ್ತನ್ನು ಕೊಡಬೇಕು. ಇನ್ನು ಎರಡು ಮಾತನ್ನು ಈ ಇಲಾಖೆ ಬಗ್ಗೆ ನಾನು ಹೇಳಲೇಬೇಕಾಗಿದೆ.

4.50 ಪಿ.ಎಂ

ಇವತ್ತು ಭಾರೀ ಶಿಸ್ತಿನಲ್ಲಿ ಕೆಲಸಮಾಡಿ ಸಾಯಿಲ್ ಕನ್ಸರ್ವೇಷನ್‌ನಲ್ಲಿ ಆಗಿದ್ದಂತಹ ಅವ್ಯವಹಾರಗಳನ್ನು ತಾವು ಬೆಳಕಿಗೆ ತಂದಿರಿ. ಕೆಲವರ ಮೇಲೆ ಶಿಸ್ತಿನ ಕ್ರಮ ಜರುಗಿಸಿದ್ದೀರಿ. ಆದರೆ ನೋವಿನ ಸಂಗತಿ ಎಂದರೆ ಮೇಲೆ ಕುಳಿತುಕೊಂಡಿರುವಂತಹ ರಿಮೋಟ್ ಕಂಟ್ರೋಲರ್ ನಿಮ್ಮ ಕೈಯಲ್ಲಿ ಸಿಗಲೇ ಇಲ್ಲ. ಇವತ್ತಿನವರೆಗೂ ನಿಮ್ಮ ಕ್ಲಬ್ ಒಳಗೆ ಬರಲೇ ಇಲ್ಲ ಅವರು. ಯಾರು ಆ ಫೀಲ್ಡ್‌ನಲ್ಲಿ ಆಟ ಆಡಿಸಿದರು, ನಾಟಕ ಮಾಡಿದರು, ಅವರಿಗೆಲ್ಲಾ ತಾವು ಬುದ್ಧಿ ಕಲಿಸಿದಿರಿ. ಸಾಯಿಲ್ ಕನ್ಸರ್ವೇಷನ್‌ನ್ನು ಮದರ್ ಡಿಪಾರ್ಟ್‌ಮೆಂಟ್‌ನಲ್ಲಿ ಮರ್ಜ್ ಮಾಡಿ ಒಂದು ದೊಡ್ಡ ಸಾಧನೆ ಮಾಡಿದಿರಿ. ನಮಗೆ ಹೇಳಿದ್ದೀರಿ. ಇಲ್ಲ ಅವರಿಗೂ ದೊಡ್ಡ ಬಲೆ ಬೀಸಿದ್ದೇವೆ, ಸಿಗುತ್ತಾರೆ ಸುಮ್ಮನಿರಿ ಎಂದು. ಏಕೋ ಆ ಬಲೆ ಅಷ್ಟು ಎಫ್‌ಕ್ಟೀವ್ ಆಗಲಿಲ್ಲ. ದೊಡ್ಡವರು ಯಾರೂ ಆ ದಿಕ್ಕಿಗೆ ಬರಲೇ ಇಲ್ಲ. ಇದರಲ್ಲಿ ನಮ್ಮದು ಪಾತ್ರ ಇತ್ತು, ನಾವು ಜವಾಬ್ದಾರಿಯಾಗಿ ವರ್ತಿಸಬೇಕು ಎನ್ನುವ ಜವಾಬ್ದಾರಿ ಬಂದು ಅವರಿಗೆ ಮಾಡಲಿಲ್ಲ. ನೀವು ಕ್ರಮ ಜರುಗಿಸುವುದಾದರೆ ಎಷ್ಟು ಬೆಂಬಲ ಕೇಳಿದರೂ ನಾವು ಕೊಡುತ್ತೇವೆ. ಇದರಲ್ಲಿ ಸಣ್ಣಪುಟ್ಟವರಿಗಾದರೆ ಹೊಡೆಯುವುದು, ಆನೆ ಎಂಥವರಿಗೆ ಹೇಗಾದರೂ ಓಡಾಡಿ ಕೊಂಡಿರು ಎಂದು ಹೇಳುವುದು ತಪ್ಪು ನಿರ್ಧಾರವಾಗುತ್ತದೆ. ಅದಕ್ಕೆ ಯಾರೇ ಜವಾಬ್ದಾರಿಯಾಗಿರಲಿ, ಅಂಥವರ ಮೇಲೆ ಸ್ವಲ್ಪ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರು ಹೇಳುವ ವಿಚಾರದಲ್ಲಿ ಅರ್ಥವಿದೆ. ಕೆಳಮಟ್ಟದಲ್ಲಿ ಇರತಕ್ಕಂಥ ಅಧಿಕಾರಿಗಳ ಮೇಲೆ ಸಾಕಷ್ಟು ಕ್ರಮ ಜರುಗಿಸಿದ್ದೇವೆ. ಅದಕ್ಕೆ ಅವರು ಹೇಳಿದಂತಹ ರೀತಿಯಲ್ಲಿ ಅವರೇ ಕಾರ್ಯಕರ್ತರು ಅಲ್ಲ. ಮೇಲ್ಮಟ್ಟದ ಅಧಿಕಾರಿಗಳೂ ಇದ್ದಾರೆ. ನನಗೂ ಸಹ ಗೊತ್ತಿದೆ. ನಮ್ಮ ಹಳ್ಳಿ ಕಡೆ ಗಾದೆ ಇದೆ. ಮುಂದಿನ ನೇಗಿಲು ಸರಿಯಾಗಿ ಹೋದರೆ ಹಿಂದಿನ ನೇಗಿಲು ನೆಟ್ಟಗೆ ಬರುತ್ತದೆ ಎಂದು. ಮುಂದಿನ ನೇಗಿಲು ಯದ್ವಾತದ್ವಾ

ಹೋದರೆ ಹಿಂದಿನ ನೇಗಿಲು ಎಲ್ಲೆಲ್ಲೋ ಹೋಗುತ್ತದೆ. ಇದು ಸ್ವಾಭಾವಿಕವಾಗಿ ಇಲಾಖೆಯಲ್ಲಿ ನಡೆದು ಬಂದಿದೆ. ಆದರೆ, ಅವರನ್ನು ಕೂಡ ಬಿಡುವುದಿಲ್ಲ. ನಾನು ಈಗಾಗಲೇ ಕಾರ್ಯದರ್ಶಿಯವರಿಗೆ ಸೂಚನೆ ಕೊಟ್ಟಿದ್ದೇನೆ. ಅವರಿಗೆ ಮಾಹಿತಿಯನ್ನು ಕೊಡಬೇಕೆಂದು ತಿಳಿಸಿದ್ದೇನೆ. ಯಾರ್‍ಯಾರು ಮೇಲಾಧಿಕಾರಿಗಳು, ಉಸ್ತುವಾರಿ ಮಾಡತಕ್ಕಂಥ ಅಧಿಕಾರಿಗಳು ಯಾರಿದ್ದಾರೆ ಅವರೂ ಕೂಡ ಇದರಲ್ಲಿ ಭಾಗಿಗಳಾಗಿದ್ದಾರೆ. ಅವರ ಮೇಲೆ ಕೂಡ ಇಲಾಖಾ ವಿಚಾರಣೆ ಮಾಡಬೇಕು. ಆದುದರಿಂದ, ಅವರ ಹೆಸರುಗಳನ್ನು ಕೂಡಲೇ ಒದಗಿಸಿಕೊಡಬೇಕೆಂದು ನಾನು ಮಾಹಿತಿಯನ್ನು ಕೇಳಿದ್ದೇನೆ. ಆದರೆ ಅವರು ಹೇಳಿದ ಹಾಗೆ ಅದರಲ್ಲಿ ಸ್ವಲ್ಪ ಅರ್ಥ ಕೂಡ ಇದೆ. ಆ ಮಾಹಿತಿ ನನಗೆ ಎಷ್ಟೇ ಕೇಳಿದರೂ ಬರುತ್ತಾ ಇಲ್ಲ. ಇದೇ ರೀತಿಯಾದಂತಹ ಮಾಹಿತಿ ನಾನು ಹಿಂದೆ ಕೇಳಿದಾಗ ಬರಲಿಲ್ಲ. ಸುಮಾರು 18ರಿಂದ 20 ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟಾಗ ಮಾಹಿತಿ ಬಂತು. ಈಗ ಅದೇ ಒಂದು ಅಳತೆಗೋಲನ್ನು, ಕ್ರಮವನ್ನು ಯಾರು ಸಂಬಂಧಪಟ್ಟಂತಹ ಮೇಲ್ಮಟ್ಟದ ಅಧಿಕಾರಿಗಳು ಇರುತ್ತಾರೆ, ಅವರ ಮೇಲೆ ಕೂಡ ನೀವು ಇಷ್ಟನೇ ತಾರೀಖಿನ ಒಳಗಾಗಿ ಮಾಹಿತಿಯನ್ನು ಕೊಡದೇ ಇದ್ದರೆ ನಿಮ್ಮನ್ನು ಅಮಾನತ್ತಿನಲ್ಲಿ ಇಡಲಾಗುತ್ತದೆಂದು ಒಂದು ಸೂಚನೆಯನ್ನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ ಕೊಡುವುದು ಬೇಡ. ಕೆಳಮಟ್ಟದ ಅಧಿಕಾರಿಗಳು ಕೂಡ ತಪ್ಪು ಮಾಡಿದ್ದಾರೆ. ಆದರೆ, ಅಷ್ಟೇ ಮೇಲ್ಮಟ್ಟದ ಅಧಿಕಾರಿಗಳು ಕೂಡ ಸಹಕಾರಿಯಾಗಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದಂತಹ ಅವಶ್ಯಕತೆ ಇದೆ. ನಾನು ಅವರ ಸಲಹೆಯನ್ನು ಒಪ್ಪಿದ್ದೇನೆ.

ಶ್ರೀ ಶಿವಾನಂದ ಸಿದ್ದರಾಮಪ್ಪ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಈಗ ಕೃಷಿ ಇಲಾಖೆಯಲ್ಲಿ ಚೆಕ್ ಡ್ಯಾಂಗಳು, ನಾಲಾ ಬಂಡ್ಸ್ ಮಾಡುವುದಕ್ಕೆ ಪ್ರಾವಿಜನ್ ಮಾಡಿದ್ದೀರಿ. ಇ.ಎ.ಎಸ್. ಅಮೌಂಟ್ ಅವರು ತೆಗೆದುಕೊಳ್ಳುತ್ತಾರೆ. ನಿಮ್ಮ ಸ್ಟೇಟ್ ಸೆಕ್ಟರ್, ಸೆಂಟ್ರಲ್ ಸೆಕ್ಟರ್ ಆಲೋಕೇಷನ್ ತೆಗೆದು ಕೊಳ್ಳುತ್ತಾರೆ. ಆದರೆ ಅದನ್ನು ಮಾಡತಕ್ಕಂಥ ಸಂದರ್ಭದಲ್ಲಿ they cannot cross beyond 40,000. ಆದರೆ ಚಿಕ್ಕ ಚಿಕ್ಕ ನಾಲಾ ಬಂಡ್ಸ್, ಚೆಕ್ ಡ್ಯಾಂಗಳು ಮಾಡುತ್ತಾರೆ. ಆದರೆ ಮೈನರ್ ಇರಿಗೇಷನ್‌ನಲ್ಲಿ ಕೆಲವು ಕಡೆ ಮೊಟೆನ್ಷಿಯಾಲಿಟಿ ಇದೆ. ಅದನ್ನು 10 ಲಕ್ಷ ರೂಪಾಯಿವರೆಗೂ ಎಸ್ಟಿಮೇಟ್ ಮಾಡಿ ನಾವು ದೊಡ್ಡ ದೊಡ್ಡ ಚೆಕ್ ಡ್ಯಾಂಗಳು, ನಾಲಾ ಬಂಡ್ಸ್‌ಗಳು ಮಾಡತಕ್ಕಂಥ ವ್ಯವಸ್ಥೆ ಮೈನರ್ ಇರಿಗೇಷನ್‌ನಲ್ಲಿ ಇದೆ. ಆದರೆ ಅವರಿಗೆ ದುಡ್ಡು ಇಲ್ಲ. ಆ ದೃಷ್ಟಿಯಿಂದ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಅಮೌಂಟನ್ನು ಅವರ ಜೊತೆ ಕ್ಲಬ್ ಮಾಡಿ ಏನಾದರೂ ಮಾಡಬೇಕು ಎನ್ನುವ ವಿಶ್ವಾಸ ನಿಮಗೆ ಇದೆಯೇ ಹೇಳಿ?

ಉಪಾಧ್ಯಕ್ಷರು : ತಾವು ಉತ್ತರ ಕೊಡುವಾಗ ಒಂದೇಸಲ ಎಲ್ಲಾದಕ್ಕೂ ಹೇಳಿ.

ಶ್ರೀ ಸಿ. ಬೈರೇಗೌಡ : ಈ ಒಂದು ನ್ಯೂನತೆ ಇರುವುದನ್ನು ನಾನು ಈಗಾಗಲೇ ಮನಗಂಡು, ಈ ಅಂದಾಜು ಪಟ್ಟಿಗಳೆಲ್ಲಾ ನಿರ್ದೇಶಕರಿಗೆ ಬರೇಬಾಕಗಿತ್ತು. ಅದನ್ನು ಲೋಕೋಪಯೋಗಿ ಇಲಾಖೆಯಲ್ಲಿ ಯಾವರೀತಿಯಾದಂತಹ ವ್ಯವಸ್ಥೆ ಸೂಪರಿಂಡೆಂಟ್ ಎಂಜಿನಿಯರ್‌ಗೆ ಯಾವ

ಅಧಿಕಾರವಿದೆ, ಎಕ್ಸಿಕ್ಯುಟೀವ್ ಎಂಜಿನಿಯರ್‌ಗೆ ಯಾವ ಅಧಿಕಾರ ಇದೆ, ಕೆಳಮಟ್ಟದಲ್ಲಿ ಇರತಕ್ಕಂಥ ಅಧಿಕಾರಿಗಳು ಯಾವ ಅಧಿಕಾರ ಇದೆ ಎಂದು ಅದೇ ಆಧಾರದ ಮೇಲೆ ಜಂಟಿ ನಿರ್ದೇಶಕರಿಗೆ ಜಿಲ್ಲಾ ಮಟ್ಟದಲ್ಲಿ 10 ಲಕ್ಷ ರೂಪಾಯಿ, ಡೆಪ್ಯೂಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ಗೆ 4 ಲಕ್ಷ ರೂಪಾಯಿ, ಅದೇ ರೀತಿ ಕೆಳಮಟ್ಟದಲ್ಲಿ ಇರತಕ್ಕಂಥ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ಗೆ 5 ಸಾವಿರ ರೂಪಾಯಿವರೆಗೂ ಕೂಡ ಅಂದಾಜು ಪಟ್ಟಿ ಮಂಜೂರು ಮಾಡತಕ್ಕಂಥಾದ್ದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಕಳೆದ ತಿಂಗಳೂ ಆಜ್ಞೆ ಕೂಡ ಹೊರಡಿಸಿದ್ದೇವೆ.

ಉಪಾಧ್ಯಕ್ಷರು : ತಾವು ಇನ್ನು 5 ನಿಮಿಷದಲ್ಲಿ ಮುಗಿಸಬೇಕು. ಈಗಾಗಲೇ ಒಂದು ಗಂಟೆ ಐದು ನಿಮಿಷ ನೀವು ಸಮಯ ತೆಗೆದುಕೊಂಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಅವರುಗಳೆಲ್ಲಾ ಮಾತನಾಡಿದ ಸಮಯವನ್ನು ನನ್ನ ಮೇಲೆ ಹಾಕಬಾರದು. ಇವರ ಇಲಾಖೆಯಲ್ಲಿ ಮಾನ್ಯ ಶಿವಾನಂದರವರು ಹೇಳಿದ ಒಂದು ಅಂಶ ತಮಗೆ ಗೊತ್ತು. ವಾಟರ್ ಶೆಡ್, ನೀವೇನು ಆರ್‌ಆರ್.ಎಸ್ ಮಾಡುತ್ತೀರಿ ಅದು 25 ಸಾವಿರ 40 ಸಾವಿರ 50 ಸಾವಿರಕ್ಕೆ ರಿಸ್ಟ್ರಿಕ್ಟ್ ಆಗಬೇಕೆಂದು ಕೇಂದ್ರಸರ್ಕಾರದ ಸೂಚನೆ ಇತ್ತು. ಅದು 40, 50 ಸಾವಿರದಲ್ಲಿ ಆಗುವುದಿಲ್ಲ. ಸನ್ಮಾನ್ಯ ಹುಚ್ಚಮಾಸ್ತಿ ಗೌಡರು ಮಂತ್ರಿಗಳಾಗಿದ್ದಾಗ ನಾವು ಹೇಳುತ್ತಿದ್ದೆವು. ಇದರ ಬಗ್ಗೆ ಏನಾದರೂ ಕೇಂದ್ರ ಸರ್ಕಾರಕ್ಕೆ ಬರೆಯಿರಿ. ಉತ್ತರ ಭಾರತದ ಹರಿಯಾಣ, ಪಂಜಾಬ್ ರೀತಿಯಲ್ಲಿ ಆರ್..ಆರ್.ಎಸ್ ಮಾಡುವುದಕ್ಕೆ ಆಗುವುದಿಲ್ಲ. ಅದು ಒಂದ ಲಕ್ಷಕ್ಕಾದರೂ ಸ್ಟ್ರೆಚ್ ಆಗಿ ಯಾರು ಜಿಲ್ಲಾಪರಿಷತ್ತು ಸಿ.ಇ.ಓ.ಗಳು ನಮ್ಮ ವಾಟರ್ ಶೆಡ್ ಅಧ್ಯಕ್ಷರು ಇರುತ್ತಾರೆ ಆತನ ಡಿಸ್ಕ್ರಿಷನ್‌ಗೆ ಅದನ್ನು ಬಿಡಬೇಕು. 25 ಸಾವಿರಕ್ಕೆ ಆರ್.ಆರ್.ಎಸ್. ಮಾಡೆಂದರೆ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಬರೆಯಬೇಕೆಂದು ಹೇಳುತ್ತಾ, ಇವರ ಇಲಾಖೆ ಬಗ್ಗೆ ಎರಡು ಮಾತನಾಡುವುದು ಪ್ರಸ್ತುತ ಎಂದು ತಿಳಿದುಕೊಂಡು, ಇಲಾಖೆಯಲ್ಲಿ ಇವತ್ತು 4-5 ಟೈರ್ ಸಿಸ್ಟಂ ಇದೆ. ಕೆಳಗಡೆ ಅಗ್ರಿಕಲ್ಚರ್ ಅಸಿಸ್ಟೆಂಟ್‌ನಿಂದ ಪ್ರಾರಂಭವಾಗಿ ಮೇಲ್ಗಡೆ ಡೈರೆಕ್ಟರ್‌ರವರೆಗೆ ಇದೆ. ಕಾಗೋಡು ತಿಮ್ಮಪ್ಪನವರು ಅಗ್ರಿಕಲ್ಚರ್ ಅಸಿಸ್ಟೆಂಟ್ ಬೇಡವೇ ಬೇಡ ಎಂದು ಹೇಳಿದರು. ಅವರನ್ನು ವಾಪಸ್ಸು ತೆಗೆದುಕೊಂಡರೆ ಸಂತೋಷಪಡುತ್ತೇವೆ. ಏಕೆಂದರೆ ಯಾರೂ ಹಳ್ಳಿಗಳಲ್ಲಿ ಇರುವುದಿಲ್ಲ. ಯಾರೂ ನೀಡ್ ಬೇಸ್ಡ್ ಆಗಿ ರೈತರಿಗೆ ಸಹಾಯಕ್ಕೆ ಬರುವುದಿಲ್ಲ. ಅವರನ್ನು ಇಟ್ಟುಕೊಂಡು ಅದರ ಮೇಲೆ 4-5 ಸಾವಿರ ಜನರಿಗೆ ಸಂಬಳ ಕೊಡುವುದರಲ್ಲಿ ಅಂತಹ ಅಗತ್ಯವಿಲ್ಲ. ನಾನೂ ಕೂಡ ಅದನ್ನು ಅನುಮೋದಿಸುತ್ತೇನೆ. ಏಕೆಂದರೆ ತಾವು ಕೃಷಿ ಸಹಾಯಕರು ಎಂದು ಏನು ಮಾಡಿದ್ದೀರಿ, ಅವರ ಯಾವುದೋ ಒಂದು ಜನ್ಮದ ಋಣ ಇಟ್ಟುಕೊಂಡು ನಾವು ಅವರಿಗೆ ಅದನ್ನು ತೀರಿಸುತ್ತಿದ್ದೇವೆ ಎನ್ನುವ ಭಾವನೆ ಬಂದಿದೆ. ನಮಗೋಸ್ಕರರ, ರಾಜ್ಯಕ್ಕೋಸ್ಕರ, ರೈತರಿಗೋಸ್ಕರ ಅವರು ಇಲ್ಲ. ನಮಗೆ ಯಾವಾಗಲೋ ಕಡೆ ಕೊಟ್ಟಿದ್ದಾರೇನೋ, ಅದನ್ನು ವಾಪಸ್ಸು ಕೊಡುತ್ತಿದ್ದೇವೇನೋ ಅದನ್ನು ತೀರಿಸಿಕೊಂಡುಹೋಗುತ್ತಿದ್ದೇವೆನೋ ತಿಂಗಳು ತಿಂಗಳು ಇಷ್ಟು ಕೊಟ್ಟು ಎಂದು ಅನ್ನಿಸುತ್ತದೆ. ಇಲ್ಲದಿದ್ದರೆ ಅವರ ಹತ್ತಿರ ಕೆಲಸ ತೆಗೆದುಕೊಳ್ಳಬೇಕು. ಇಲ್ಲ ಆ ಹುದ್ದೆ ರದ್ದು ಮಾಡಬೇಕು. ಎ.ಎ.ಓ.ಗಳು ಎಲ್ಲರೂ ಈಗ ನಿಮಗೆ ಪ್ರಮೋಟರ್ಸ್ ಆಗಿದ್ದಾರೆ. ಸುಮಾರು ಎ.ಎ.ಓ.ಗಳು ಎಸ್.ಎಸ್.ಎಲ್.ಸಿ ರ್‍ಯಾಂಕ್‌ನವರು ಇದ್ದಾರೆ.

ಈಗ ತಾವು ಎ.ಎ.ಓಗಳನ್ನು ಅಗ್ರಿಕಲ್ಚರ್ ಗ್ರಾಜ್ಯುಯೇಟ್ಸ್‌ಗಳನ್ನು ರಿಕ್ರೂಟ್ ಮಾಡುವುದಕ್ಕೆ ಹೊರಟಿದ್ದೀರಿ. ನಾಳೆ ಯಾವ ಸ್ಥಿತಿ ನಿರ್ಮಾಣವಾಗುತ್ತದೆ. ಒಂದು ಕಡೆ ಅಗ್ರಿಕಲ್ಚರ್ ಗ್ರಾಜ್ಯುಯೇಟ್ಸ್ ಎ.ಎ.ಗಳಾಗಿ ಜಾಯಿನ್ ಆಗುತ್ತಾರೆ. ಅದರ ಮೇಲೆ ಎಸ್.ಎನ್.ಎಲ್.ಸಿಯವರನ್ನು ಎ.ಎ.ಓಗಳಾಗಿ ಮಾಡಿ ತಾವು ಕೂರಿಸುತ್ತೀರಿ. ಎ.ಎ.ಗಳನ್ನು ತಾವು ಗ್ರಾಜ್ಯುಯೇಟ್ ಮಾಡುವುದಕ್ಕೆ ಹೊರಟಿರುವುದು. ಮೊದಲೇ ಅವನು S.S.L.C. ಇದ್ದ. ಎ.ಎ.ಓಗಳು ಮೊದಲಿನಿಂದಲೂ ಅಗ್ರಿಕಲ್ಚರ್ ಗ್ರಾಜ್ಯುಯೇಟ್ ಇದ್ದದ್ದು . ಎ.ಎ.ಗೆ ಫಸ್ಟ್ ರಿಕ್ರೂಟ್‌ಮೆಂಟ್ ಫಸ್ಟ್ ಪಾಯಿಂಟ್ ತಾವು ಗ್ರಾಜ್ಯುಯೇಟ್ ತರಬೇಕೆಂದು ನಿರ್ಧಾರಕ್ಕೆ ಬಂದಿದ್ದೀರಿ. ಆದರೆ ಅವನ ಮೇಲೆ ಎಸ್.ಎಸ್.ಎಲ್.ಸಿಯವನು ಇದ್ದಾನೆ. ಈಗ ಪ್ರಮೋಟ್ ಆಗಿರುವವನು ಏನು ಆತನಿಗೆ ಟೆಕ್ನಿಕಲ್ ಎಕ್ಸ್‌ಪರ್‌ಟೈಜ್ ಪ್ರಶ್ನೆಯೇ ಇಲ್ಲ, ಎಂದೂ ಕೃಷಿ ಬಗ್ಗೆ ಓದಲಿಲ್ಲ, ಬರೆಯಲಿಲ್ಲ. ನಮ್ಮ ಮೇಲೆ ಕುಳಿತುಕೊಂಡು ಸವಾರಿ ಮಾಡಬೇಕಾಗಿದೆ. ಇದರ ಮೇಲೆ ಅಸಿಸ್ಟೆಂಟ್ ಡೈರೆಕ್ಟರ್ ಇಟ್ಟಿದ್ದೀರಿ. ಅದರ ಮೇಲೆ ಡೆಪ್ಯೂಟಿ ಡೈರೆಕ್ಟರ್, ಅದರ ಮೇಲೆ ಜಾಯಿಂಟ್ ಡೈರೆಕ್ಟರ್ ಇರುತ್ತಾರೆ. ಇಷ್ಟು ಜನ ಜಿಲ್ಲಾಮಟ್ಟದಲ್ಲಿ ಬರುತ್ತಾರೆ. ಇಷ್ಟು ಜನರಿಗೆ ಆ ಜಿಲ್ಲೆಯಲ್ಲಿ ಕೆಲಸ ಇರುತ್ತದೆಯೇ? ಡೆಪ್ಯೂಟಿ ಡೈರೆಕ್ಟರ್‌ಗೆ, ಜಾಯಿಂಟ್ ಡೈರೆಕ್ಟರ್‌ಗೆ ಏನು ಕೆಲಸ ಎಂದು ತುಲನೆ ಮಾಡಿದರೆ ಇಲ್ಲಿ ಜನರಿಗೆ ಕೆಲಸ ಇಲ್ಲ, ಇವರಿಗೆ ಕೆಲಸ ಇಲ್ಲ. ಜಾಯಿಂಟ್ ಡೈರೆಕ್ಟರ್‌ಗೆ ಒಂದೇ ಕೆಲಸ ಎಂದರೆ ಮೀಟಿಂಗ್ ಅಟೆಂಡ್ ಮಾಡುವುದು. ಇಲ್ಲಿ ಡೆಪ್ಯೂಟಿ ಡೈರೆಕ್ಟರ್ ಮಾಡುವ ಕೆಲಸಕ್ಕೆ ಬಾಯಿ ಹಾಕಿಬಿಟ್ಟು ಪರ್ಸೆಂಟೇಜ್ ತೆಗೆದುಕೊಳ್ಳುವುದು. ಇವರೆಲ್ಲಾ ಡೆಪ್ಯೂಟಿ ಡೈರೆಕ್ಟರ್ ಆದಮೇಲೆ ಡೆಪ್ಯೂಟಿ ಡೈರೆಕ್ಟರ್ ಇದ್ದರೆ ಸಾಕು ಎಂದರು. ಇವರಿಗೆ ಪ್ರಮೋಷನ್ ಬೇಕು. ಜಿಲ್ಲೆಗೆ ಒಬ್ಬೊಬ್ಬರು ಜಾಯಿಂಟ್ ಡೈರೆಕ್ಟರ್ ಆಗಬೇಕು. ಜಿಲ್ಲೆಗೆ 2-4 ಡೆಪ್ಯೂಟಿ ಡೈರೆಕ್ಟರ್ ಆಗಬೇಕು ಎಂದರು. ಅವರಿಗೋಸ್ಕರ ಸರ್ಕಾರ ನಡೆಯಬೇಕಾ? ಅವರಿಗೆ ಪ್ರಮೋಷನ್ ಕೊಡುವುದೇ ನಿಮ್ಮ ಉದ್ದೇಶವೇ? ಯಾರಿಗೋ ಪ್ರಮೋಷನ್ ಅಪರ್ಚುನಿಟಿ ಸೀಜ್ ಆಗುತ್ತದೆಂದು ನೀವು ಹುದ್ದೆಗಳನ್ನು ಸೃಷ್ಟಿ ಮಾಡಿಕೊಂಡು ಹೋದರೆ ಗತಿ ಏನು? ಬರುವ ಅನುದಾನದ ಗತಿ ಏನು? ತಾವು ಯೋಚನೆ ಮಾಡಿ ಇವತ್ತು ಸಬ್ ಡಿವಿಜನ್ ಲೆವೆಲ್‌ಗೆ ಡೆಪ್ಯೂಟಿ ಡೈರೆಕ್ಟರ್ ಮಾಡುವವರೆ ಜಿಲ್ಲಾಮಟ್ಟದ ಡೆಪ್ಯೂಟಿ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ ಸಾಕಾಗಿತ್ತು ನಮಗೆ. ಡಿವಿಜನ್ ಲೆವೆಲ್‌ಗೆ ನಿಮ್ಮ ಹೆಡ್ ಆಫೀಸ್‌ನಲ್ಲೋ ಇಟ್ಟುಕೊಳ್ಳಬಹುದಾಗಿತ್ತು. ಇದು ಎಲ್ಲದರ ಜೊತೆ ಏನು ಜಾಬ್ ಬೈಫರ್‌ಕೇಷನ್ ಬಗ್ಗೆ ತಾವು ಕ್ಲಿಯರ್ ಮಾಡಲಿಲ್ಲ, ಗೊಂದಲ ಸೃಷ್ಟಿ ಮಾಡಿಬಿಟ್ಟಿದ್ದೀರಿ. ನಿಮ್ಮ ಇನ್‌ಪುಟ್ಸ್ ಕಾರ್ಯಕ್ರಮದಲ್ಲಿ ಜೆ.ಡಿನ್ನೂ ಬಾಯಿ ಹಾಕುತ್ತಾರೆ ಡಿ.ಡಿ.ನೂ ಬಾಯಿ ಹಾಕುತ್ತಾರೆ. ಏನಾದರೂ ಪೆಸ್ಟಿಸೈಡ್ಸ್ ಸಪ್ಲೈ ಮಾಡಬೇಕೆಂದರೆ ಟ್ರಾಕ್ಟರ್ ಸಬ್ಸಿಡಿ ಕೊಡಬೇಕು, ಪವರ್ ಟಿಲ್ಲರ್ ಸಬ್ಸಿಡಿ ಕೊಡಬೇಕು ಎಂದರೆ ಜೆ.ಡಿಗೆ, ಎ.ಡಿಗೆ ಮತ್ತು ಡಿ.ಡಿಗೆ ಮಾತನಾಡಬೇಕು. ತಾವು ಇಲಾಖೆಯಲ್ಲಿ ಎಷ್ಟು Consistency ಸೃಷ್ಟಿ ಮಾಡಿದ್ದೀರಿ. ಈ ಕಡೆಗೆ ತಾವು ಹೆಚ್ಚು ಆಸ್ಥೆ ವಹಿಸಬೇಕು. ಇದರಲ್ಲಿ ನಾನು ಹೆಚ್ಚು ಕಾಮೆಂಟ್ ಮಾಡುವುದಕ್ಕೆ ತಯಾರಿಲ್ಲ. ಇದಕ್ಕೆ ಡೆಪ್ಯಾಟಿ ಡೈರೆಕ್ಟರ್ ಬೇಕಾ? ಜಾಯಿಂಟ್ ಡೈರೆಕ್ಟರ್ ಬೇಕಾ? ಈ ಎರಡರಲ್ಲಿ ಒಂದು ಪೋಸ್ಟ್ ಜಿಲ್ಲಾ ಮಟ್ಟಕ್ಕೆ ಸಾಕಾಗುತ್ತದೆ. ಇದರಲ್ಲಿ ಎರಡು ಮಾತಿಲ್ಲ, ಇದರ ಇನ್‌ಸ್ಪೆಕ್ಷನ್‌ಗೆಂದು ಸ್ಕ್ವಾಡ್ ಅನ್ನು ತಯಾರು ಮಾಡಬೇಕು. ಅದರಲ್ಲೂ

ಮುಖ್ಯವಾಗಿ ಮಂಡ್ಯ, ಹಾಸನ, ಶಿವಮೊಗ್ಗ, ಇಂತಹ ಕಡೆಗಳಲ್ಲಿ ಎಲ್ಲಿ ಪೆಸ್ಟಿಸೈಡ್ಸ್, ಫರ್ಟಿಲೈಜರ್ಸ್‌ನ್ನು ಬೆಳೆಯುತ್ತಿದ್ದಾರೆ. ಅದರ ನಿಯಂತ್ರಣವನ್ನು ಮಾಡಲು ಮತ್ತು ಅದರ ಮೇಲೆ ಹೆಚ್ಚಿನ ಗಮನ ಇಡಲು, ಅವರಿಗೆ ಒಂದು ವಾಹನವನ್ನು ಕೊಟ್ಟು ಸ್ಕ್ವಾಡ್‌ಗಳನ್ನು ಇಡುವುದರಲ್ಲಿ ತಪ್ಪೇನು ಇಲ್ಲ. ನಮ್ಮ ಮೇಲೆ ಚೆಕ್ಕಿಂಗ್ ಇದೆ ಎಂದರೆ ಯಾವ ವರ್ತಕರು ಅಡ್ಡಾದಿಡ್ಡಿಯಾಗಿ ಪೆಸ್ಟಿಸೈಡ್ ಮತ್ತು ಫರ್ಟಿಲೈಜರ್ಸ್ ಅನ್ನು ಮಾರುವುದಕ್ಕೆ ತಯಾರು ಇರುವುದಿಲ್ಲ. ನೀವು ಆ ರೀತಿ ಮಾಡಿದಂಥವರ ಮೇಲೆ ಕೇಸ್ ಹಾಕುವುದಕ್ಕೂ ಅಧಿಕಾರವನ್ನು ಅವರಿಗೆ ಕೊಡಬೇಕು. ಆಗ ಮಾತ್ರ ಇವರು ಸ್ವಲ್ಪಮಟ್ಟಿಗೆ ಕಂಟ್ರೋಲಿಗೆ ಬರುತ್ತಾರೆ. ಇನ್ನು ತಾವು ರಿಕ್ರೂಟ್‌ಮೆಂಟ್ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಒಬ್ಬ ಬಿ.ಎಸ್.ಸಿ. ಪದವೀಧರನು ಎ.ಎ.ಗೂ ಅರ್ಜಿ ಹಾಕುವುದು, ಎ.ಎ.ಓಗೂ ಅರ್ಜಿಯನ್ನು ಹಾಕುವುದು, ಮತ್ತೆ ಅಸಿಸ್ಟೆಂಟ್ ಡೈರೆಕ್ಟರ್‌ಗೂ ಅರ್ಜಿಯನ್ನು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿ ಬಿಡುತ್ತದೆ. Because basic elibility will be Agricultural Graduate Degree. ಈ ರೀತಿಯಾಗಿ ಎಲ್ಲದಕ್ಕೂ ಅವರೇ ಬರುವಂಥಾದ್ದು ಆದರೆ ಅಥವಾ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಮಾಡಿದ ಹಾಗೆ ಸೀನಿಯರ್ ಅಸಿಸ್ಟೆಂಟ್‌ಗಳು ಅವರೇ ಬಂದರೆ ಈ ಇಲಾಖೆಯಲ್ಲಿ ಅನಾಮಲಿ ಸೃಷ್ಟಿಯಾಗುತ್ತದೆ. ಇದನ್ನು ಸಹಿಸುವುದಕ್ಕೆ ಅಸಾಧ್ಯವಾಗುತ್ತದೆ. ಒಬ್ಬ ಅಸಿಸ್ಟೆಂಟ್ ಡೈರಕ್ಟರ್ ಆಗಿ ರಿಕ್ರೂಟ್‌ಮೆಂಟ್ ಆಗಿರುವವರು ಡೈರಕ್ಟರ್ ಆಗಿ ಹೋಗಿರಬೇಕಾಗುತ್ತದೆ. ಇಲ್ಲದಿದ್ದರೆ ಅವನಿಗೆ ಕ್ಷೋಭೆ ಶುರುವಾಗುತ್ತದೆ, ಪ್ರೊಮೋಟ್ ಆಗಲಿಲ್ಲ, ಕೆಲಸ ಸಿಗಲಿಲ್ಲವೆಂದಾಗುತ್ತದೆ. ಆದುದರಿಂದ ಯಾವುದಾದರೂ ಸಂಬಂಧಿಸಿದ ಒಂದು ರಿಕ್ರೂಟ್‌ಮೆಂಟ್ ಸಾಕಾಗುತ್ತದೆ. ಆದುದರಿಂದ ಎ.ಎ.ಓ. ರಿಕ್ರೂಟ್‌ಮೆಂಟ್ ನಿಲ್ಲಿಸಿ, ಇಲ್ಲದಿದ್ದರೆ ಅಸಿಸ್ಟೆಂಟ್ ಡೈರಕ್ಟರ್ ರಿಕ್ರೂಟ್‌ಮೆಂಟ್ ನಿಲ್ಲಿಸಿ, ಇಲ್ಲ ಎ.ಎ. ರಿಕ್ರೂಟ್‌ಮೆಂಟ್ ಅನ್ನು ನಿಲ್ಲಿಸಿಬಿಡಿ. ಈ ಬಿ.ಎಸ್.ಸಿ. ಎ.ಜಿ ಒಂದು ಕ್ವಾಲಿಫಿಕೇಶನ್ ಮಾಡಿ, ಇದರ ಮೇಲ್ದರ್ಜೆಗೆ ಏನಾದರೂ ರಿಕ್ರೂಟ್‌ಮೆಂಟ್ ಮಾಡಬೇಕೆಂದರೆ ಎಂ.ಎಸ್.ಸಿ,ಎ.ಜಿ. ಪ್ರಿಸ್ಕ್ರೈಬ್ ಮಾಡಿ. ಈಗ ಬೇಕಾದಷ್ಟು ಯುವಕರು ಇದ್ದಾರೆ, ಇಲ್ಲದಿದ್ದರೆ ತಾವು ಅನಾಮಲಿಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ತಾವು ಭಾಷಣವನ್ನು ಮುಕ್ತಾಯಗೊಳಿಸಬೇಕು, ಇನ್ನೂ ಇಬ್ಬರು ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಬೇಕು, ಪಶುಸಂಗೋಪನಾ ಇಲಾಖೆಯ ಬಗ್ಗೆ ಮಾತನಾಡಬೇಕು, ನೀವು ಭಾಷಣವನ್ನು ಮುಗಿಸಿ ಎಂದು ಹೇಳಿದರೆ ನಾನು ಇಲ್ಲಿಗೆ ಬಿಡಬೇಕಾಗುತ್ತದೆ. ನೀವು ಬಂದ ತಕ್ಷಣವೇ ನಾನು ಮಾತನಾಡಬಾರದೆಂದು ಅಂದುಕೊಂಡೆನು.

ಉಪಾಧ್ಯಕ್ಷರು : ಆಯಿತು, ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನು ಮೂರು ಇಲಾಖೆಗಳ ಬಗ್ಗೆ ಮಾತನಾಡಬೇಕು. ನಾನು ಅಧ್ಯಕ್ಷರನ್ನು ಸ್ಪೆಷಿಫಿಕ್ ಆಗಿ ಕೇಳಿದ್ದೇನೆ. ನೀವು ಈಗಲೇ ಮುಗಿಸಿ ಎಂದರೆ

ನಾನು ಭಾಷಣ ಮಾಡುವುದಿಲ್ಲ, ನೀವು ನಿಧಾನವಾಗಿ ಭಾಷಣ ಮಾಡಿ ಎಂದದ್ದಕ್ಕೆ ನಿಂತಿದ್ದೇನೆ. ನೀವು ಮುಗಿಸಿ ಎಂದರೆ ನಾನು ನಿಲ್ಲಿಸಿ ಬಿಡುತ್ತೇನೆ. ಸನ್ಮಾನ್ಯ ಬೈರೇಗೌಡರೆ, ತಾವು ರಿಕ್ರೂಟ್‌ಮೆಂಟ್ ಕಡೆಗೆ ಗಮನ ಕೊಡಬೇಕು. ಮಾನ್ಯ ಉಪಾಧ್ಯಕ್ಷರು ತರಾತುರಿಯಲ್ಲಿ ಇರುವುದರಿಂದ ನಾನು ನಿಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕಾಗುತ್ತದೆ. ಇದರಲ್ಲಿ ನಿಮ್ಮ ತೀರ್ಮಾನಕ್ಕೆ ನಮ್ಮ ಸಹಮತವಿಲ್ಲ. ನೀವು ಆ ಇಂಡಸ್ಟ್ರಿಯನ್ನು ಮೊನಾಪಲಿ ಸೆಕ್ಟಾರ್ ಮಾಡಿ ಇಟ್ಟಿದ್ದೀರಿ. ನಾವು ಯಾರು ಅದಕ್ಕೆ ರಾಜಿಯಾಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ತಾವು ಇನ್ನೂ ಹೆಚ್ಚಿನ ಆಲೋಚನೆಯನ್ನು ಮಾಡಬೇಕಾಗುವುದು. ಯಾವುದೇ ವ್ಯವಸ್ಥೆಯನ್ನು ಮೊನಾಪಲೈಜ್ ಮಾಡಬಾರದು. ನೀವು ಏನು ಮಾಡುತ್ತಿದ್ದೀರೆಂದರೆ ನಮ್ಮ ರೈತರಿಗೆ ಬರುವಂತಹ ಸಬ್ಸಿಡಿಯ ಹಣವನ್ನು ಇವತ್ತು ಅಡ್ವಾನ್ಸ್ ಆಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಿಗೆ ಕೊಟ್ಟುಬಿಟ್ಟು ಅನಂತರ ಅಲ್ಲಿ ಹೋಗಿ ಗೊಬ್ಬರ ತೆಗೆದುಕೊಳ್ಳಿ ಪೆಸ್ಟಿಸೈಡ್ಸ್ ತೆಗೆದುಕೊಳ್ಳಿ, ಟ್ರಾಕ್ಟರ್ ತೆಗೆದುಕೊಳ್ಳಿ, ಕೌಂಟರ್‌ನಲ್ಲಿ ಬಿಲ್ ತೆಗೆದುಕೊಳ್ಳಿ ಎಂದರೆ ಈ ಇಲಾಖೆಗೆ ಅಕೌಂಟೆಬಿಲಿಟಿ ಇದೆಯಾ? ಯಾವುದೇ ಮಾಲು ಸಪ್ಲೈ ಆಗದೇ ನೀವು ಇವತ್ತು ಬಿಲ್ ಪಾಸ್ ಮಾಡುವಂಥಾದ್ದು ನ್ಯಾಯವೇ? ಅಡ್ವಾನ್ಸ್ ಆಗಿ ಡಿ.ಡಿ.ಯನ್ನು ಕೊಟ್ಟು ಶೇ. 10ರಷ್ಟು ಕಮೀಷನ್ ಅವರಿಗೆ ಕೊಡಿಸಿ ನಾವೇನು ಆ ನೌಕರರ ಋಣವನ್ನು ತಿಂದಿದ್ದೇವಾ? ನಾನು ಶಾಸನ ಸಭೆಯಲ್ಲಿ ಮಾತನಾಡುತ್ತೇನೆ. 10% more they are charging. They are charging 10% commission on all the dealers. ಅವರು ಏನೇನು ಡೀಲಿಂಗ್ ಮಾಡುತ್ತಿದ್ದಾರೆ. ಅದಕ್ಕೆ ಅವರು ಶೇ. 10ರಷ್ಟು ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ತಿಂಗಳಿಗೆ ಸಂಬಳವಿಲ್ಲದಾಗ ಅಸಿಸ್ಟೆಂಟ್ ಡೈರೆಕ್ಟರ್, ಡೆಪ್ಯೂಟಿ ಡೈರೆಕ್ಟರ್ ದುಡ್ಡು ಕಟ್ಟಿ ಎಂದು ಹೇಳುತ್ತಿದ್ದಾರೆ. ಅವರು ನಿಮಗೆ ಪರಿಕರಗಳನ್ನು ಸಪ್ಲೈ ಮಾಡುವುದಕ್ಕೆ ಅಲ್ಲ, ಪೆಸ್ಟಿಸೈಡ್ಸ್ ಸಪ್ಲೈ ಮಾಡುವುದಕ್ಕಲ್ಲ. ಅವರ ಸಂಬಳವನ್ನು ಮೊದಲು ಅಡ್ಜೆಸ್ಟ್ ಮಾಡಿಕೊಳ್ಳುವುದಕ್ಕೆ ಈ ರೀತಿಯಾಗಿ ಮಾಡುತ್ತಿದ್ದಾರೆ. ಈ ಸ್ಥಿತಿಯನ್ನು ನೀವು ತಪ್ಪಿಸಬೇಕು. ಇನ್ನು ಪೆಸ್ಟಿಸೈಡ್ಸ್ ಬಗ್ಗೆ ಹೇಳಬೇಕಾದರೆ ಅದಕ್ಕೆ ಕೊಟೇಷನ್‌ಗಳನ್ನು ಕರೆಯಿರಿ. ಅದನ್ನು ಜಿಲ್ಲಾಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಕರೆಯಿರಿ, ಯಾರು ಬೇಕೊ ಅವರು ಸಪ್ಲೈ ಮಾಡಲಿ. ಇದನ್ನು ಅಗ್ರೋ ಇಂಡಸ್ಟ್ರಿಯವರು ಸಪ್ಲೈ ಮಾಡಬೇಕೆಂದು ಏನಾದರೂ ಇದೆಯಾ? ಅವರ ಹತ್ತಿರ ಹೋಗಿ ಬಿಲ್ ತರಬೇಕಾ? ಜಿಲ್ಲೆಗೆ ಅಥವಾ ತಾಲ್ಲೂಕಿಗೆ ಒಂದೊಂದು ಟ್ರಾಕ್ಟರ್ ಎಂದು ಕೊಡುತ್ತೀರಿ, ಅದಕ್ಕೆ ಅಗ್ರೋ ಇಂಡಸ್ಟ್ರಿ ಕಾರ್ಪೊರೇಷನ್‌ರವರ ಬಿಲ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತೀರಿ. ಅವರು ಹಾಕುವಂತಹ ಬಿಲ್‌ಗೂ ನೀವು ಕೊಡುವ ಸಬ್ಸಿಡಿಗೂ, ಮಾರ್ಕೆಟಿಗೂ ಹೋಲಿಸಿ ನೋಡಿದರೆ ಅದನ್ನು ಸಬ್ಸಿಡಿಯಿಂದಲೇ ಡೈರೆಕ್ಟ್ ಆಗಿ ತೆಗೆದುಕೊಂಡರೆ ಸಿಗುತ್ತದೆ. ಅದು ಡೀಸಲ್ ಜನರೇಟರ್ ಆಗಲಿ, ಇತರೆ ವಸ್ತುಗಳಾಗಲಿ ಅದೇ ಧಾರಣೆಯಲ್ಲಿ ಸಿಗುತ್ತವೆ. ಇನ್ನು ಯಾರಾದರೂ ಬಾರ್ಗೈನ್ ಮಾಡಿದರೆ ನಿಮ್ಮ ಸಬ್ಸಿಡಿಗಿಂತ ಕಡಿಮೆ ದುಡ್ಡಿಗೆ ಸಿಗುತ್ತದೆ. ಇವತ್ತಿನ ಸ್ಥಿತಿಯೂ ಹಾಗೆ ಆಗಿದೆ. ಈ ರೀತಿಯಾಗಿರುವಾಗ ನೀವು ಅವರ ಮೇಲೆ ಅಷ್ಟು ಅಭಿಮಾನವನ್ನು ಏಕೆ ಇಟ್ಟಿದ್ದೀರಾ, ಎಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ತಾವು ಹಾಗೆ ಅಭಿಮಾನವನ್ನು ಇಟ್ಟುಕೊಳ್ಳುವವರಲ್ಲ. ನೀವು ಎನ್.ಜಿ.ಇ.ಎಫ್. ಅನ್ನು ಮುಚ್ಚಿ ಎಂದು ಹೇಳಿದಂತವರು

ಅಗ್ರೋ ಇಂಡಸ್ಟ್ರಿಯನ್ನು ಏಕೆ ತೆಗೆಯಿರಿ ಎಂದು ಹಠ ಮಾಡುತ್ತಿದ್ದೀರಿ. ಇವತ್ತು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕವೇ ಎಲ್ಲಾ ವ್ಯವಸ್ಥೆಗಳನ್ನು ಮಾಡಿಸಿ ಎಂದು ಏಕೆ ಒತ್ತಾಯ ತರುತ್ತಿದ್ದೀರಿ? ಇವರು ಇವತ್ತು ಮಾಡುತ್ತಿರುವಂಥಾದ್ದು ಡಿ-ಫಾಲ್ಟ್ ಮಾಡುತ್ತಿದ್ದಾರೆ. ಸಪ್ಲೈಯರ್‌ಗೆ ಬಿಲ್ ಕೊಡದೇ ಹೋಗುವಂತಹ ಪರಿಸ್ಥಿತಿಗೆ ಹೋಗಿದ್ದಾರೆ, ಅಡ್ವಾನ್ಸ್ ತೆಗೆದುಕೊಂಡು ಈ ರೀತಿಯಾಗಿ ಮಾಡುತ್ತಿದ್ದಾರೆ. ನೀವು ರಾಜ್ಯದಲ್ಲಿ ಏನು ಸಬ್ಸಿಡಿ ಹಣವನ್ನು ರೈತರಿಗೆ ವಿತರಣೆ ಮಾಡಬೇಕು, ಅಷ್ಟು ಅವರಿಗೆ ಚಾನಲೈಜ್ ಮಾಡಿದರೂ ಅವರು ಸಪ್ಲೈಯರ್‌ಗೆ ಡಿ-ಫಾಲ್ಟ್ ಆಗಿದ್ದಾರೆ. ಈ ಅಗ್ರೋ ಇಂಡಸ್ಟ್ರಿ ಕಾರ್ಪೊರೇಷನ್ ಏನು ಇದೆ, ಇದು ಏಜೆನ್ಸಿನಾ? ಅವರಿಗೆ ಟೆಕ್ನಿಕಲ್ ಗೈಡೆನ್ಸ್ ಕೊಡುವ ಕೆಲಸ ಇರಲಿಲ್ಲವಾ? ಅವರ ಹತ್ತಿರವಿರುವಂತಹ ಪಾರ್ಟನರ್‌ಶಿಪ್ ಏನು ಆಯಿತು? ಅವರು ಹೆಚ್.ಎಂ.ಟಿ.ಯವರ ಡೀಲರ್ ಶಿಪ್ ಏಕೆ ಬಿಟ್ಟರು? ಅವರು ಏಕೆ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಲೆಕ್ಕಾಚಾರವನ್ನು ಏಕೆ ಮಾಡಿಸಿಕೊಂಡು ಕುಳಿತ್ತಿದ್ದರು? ನೀವು ಏನು ಅದನ್ನು ಉಳಿಸಿಯೇ ರಾಜ್ಯವನ್ನು ಉಳಿಸುತ್ತೇವೆಂದು ಹೇಗೆ ತಿಳಿದುಕೊಂಡಿದ್ದೀರಿ? ರಾಜ್ಯ ಉಳಿಯಬೇಕೆಂದರೆ ಈ ರಾಜ್ಯದ ರೈತರು ಉಳಿಯಬೇಕು. ನೀವು ಏನಾದರೂ ಕೊಡಬೇಕೆಂದು ಇದ್ದರೆ ಅದನ್ನು ರೈತರಿಗೆ ನೇರವಾಗಿ ಸಂದಾಯವಾಗಬೇಕು. ಆ ಸ್ಥಿತಿಯನ್ನು ನೀವು ತಂದಾಗ ಮಾತ್ರ ನೀವು ನಿಜವಾದ ಕೃಷಿ ಮಂತ್ರಿಗಳಾಗುತ್ತೀರಿ. ಇವತ್ತು ನಮಗೆ ಸಂಸ್ಥೆಗಳು ತೀರಾ ಅನಿವಾರ್ಯವಲ್ಲ. ಅದು ಹಳೆಯ ಕಲ್ಪನೆ, ಇವತ್ತು ನಾನು ಅನಿವಾರ್ಯ, ಇವತ್ತು ದೇಶದ ರೈತರು ಬದುಕಬೇಕು. ಈ ದೇಶದ ರೈತರ ಮಧ್ಯೆ ಇರುವಂತಹ ಸಂಸ್ಥೆ ಬದುಕಿದರೆ ಎಷ್ಟು, ಬಿಟ್ಟರೆ ಎಷ್ಟು? ಆ ಸಂಸ್ಥೆಯನ್ನು ಅವರು ನಡೆಸುವುದಕ್ಕಾಗುವುದಿಲ್ಲ ವೆಂದರೆ ಬಿಡಿ, ಇನ್ನೊಬ್ಬರ ಕೈಯಲ್ಲಿ ಮಾಡಿಸಿ, ಈಗ ನೂರಾರು ಕಂಪನಿಗಳು ಹುಟ್ಟಿಕೊಂಡಿವೆ. ಯಾವುದೋ ನಾಲ್ಕು ಕಂಪನಿಗಳಲ್ಲಿ ಪೆಸ್ಟಿಸೈಡ್ಸ್ ಕಲೆಕ್ಟ್ ಮಾಡಿ ಎಲ್ಲರಿಗೂ ವಿತರಣೆ ಮಾಡುವಂತಹ ಸ್ಥಿತಿಯನ್ನು ಏಕೆ ತಂದಿದ್ದೀರಿ? ಆ ಕಂಪನಿಗೆ ನೀವು ನಾಲ್ಕೈದು ಜನರನ್ನು ಎಕ್ಸ್‌ಪರ್ಟ್ಸ್‌ಗಳನ್ನು ಹಾಕಿದ್ದೀರಿ. ಅವರೆಲ್ಲಾ ಬಂದು ನಿಮ್ಮ ತಲೆಯನ್ನು ಕೆಡಿಸುತ್ತಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅವರಿಗೆ ಸುಮ್ಮನೆ 15-16 ಸಾವಿರ ರೂಪಾಯಿಗಳ ಸಂಬಳ ಬೇರೆ ಕೊಡುವಂಥಾದ್ದು, ಅವರಿಗೆ ಮಾಡುವುದಕ್ಕೆ ಕೆಲಸವಿಲ್ಲ. ಅದರ ಮೇಲೆ ನಿಮಗೆ ತಜ್ಞರು ಬೇರೆ ಕೆಲವರು ಇದ್ದಾರೆ. ನೀವು ವಿರಾಮದಲ್ಲಿರುವಾಗ ಅವರು ಏನೋ ಹೇಳಿದರು, ನೀವು ಅದನ್ನೂ ತೆಗೆದುಕೊಂಡಿದ್ದೀರಿ. ತಾವು ದಯಮಾಡಿ ಅವರೆಲ್ಲರನ್ನೂ ಹಿಂದಕ್ಕೆ ತೆಗೆದುಕೊಳ್ಳಿ. ದಯಮಾಡಿ ರೈತನ ಮೇಲೆ ಇಮ್‌ಪೋಜಿಷನ್ ಮಾಡಬೇಡಿ. ನೀವು ಅಗ್ರೋ ಇಂಡಸ್ಟ್ರಿ ಕಾರ್ಪೊರೇಷನ್‌ನಲ್ಲಿ ತೆಗೆದುಕೊಳ್ಳಬೇಕು, ಅಲ್ಲೇ ಪರ್ಚೇಸ್ ಮಾಡಬೇಕೆಂದು ಏನು ಹೇಳುತ್ತಿದ್ದೀರಿ, ಇದು ತಪ್ಪಬೇಕು. ಇದಕ್ಕೆ ನೀವು ಸ್ಪರ್ಧೆಯನ್ನು ಸೃಷ್ಟಿ ಮಾಡಿದರೆ ಕಡಿಮೆ ಧಾರಣೆಗೆ ಪೆಸ್ಟಿಸೈಡ್ ಸಿಗುತ್ತದೆ ಉಪಕರಣಗಳು ಸಿಗುತ್ತದೆ. ಅವರು ಹಾಕುವಂತಹ ಧಾರಣೆಯನ್ನು ನೀವು ಮೊನಾಪಲಿ ಮಾಡಿದರೆ ಆ ಸಂಸ್ಥೆಗೋಸ್ಕರವೇ ನಮ್ಮ ಹೆಸರು ಹೇಳುತ್ತಾ ಇದ್ದೀರಿ ಎಂಬ ಭಾವನೆ ಬರುತ್ತದೆ. ನಮ್ಮ ರೈತರಿಗೆ ನೀವು ಸಬ್ಸಿಡೈಜ್ ಮಾಡುತ್ತಿಲ್ಲ, ಅಗ್ರೋ ಇಂಡಸ್ಟ್ರಿ ಕಾರ್ಪೊರೇಷನ್‌ರವರಿಗೆ ಸಬ್ಸಿಡೈಜ್ ಮಾಡುತ್ತಿದ್ದೀರೆಂಬ ಭಾವನೆ ನಮಗೆ ಬರುತ್ತದೆ. ಆ ಭಾವನೆಯನ್ನು ತಾವು ಉಳಿಸಿಕೊಳ್ಳಬಾರದು. ಇವತ್ತು ಏನು ಮಾಡುತ್ತಿದ್ದಾರೆಂದರೆ ಅವರು ನಿಜವಾಗಿಯೂ ರೈತರ ಕೆಲಸವನ್ನು ಮಾಡುತ್ತಿಲ್ಲ. ಸುಮ್ಮನೆ ಅಲ್ಲಿ ರೈತರ ಸಂಬಳವನ್ನು

ಕೊಡುವುದಕ್ಕಾಗಿ ಏನೋ ಒಂದಿಷ್ಟು ವ್ಯವಸ್ಥೆಯನ್ನು ಮಾಡಿಕೊಂಡು ಕುಳಿತಿದ್ದಾರೆ. ನಾವು ಈ ಬಗ್ಗೆ ಏನು ತೀರ್ಮಾನವನ್ನು ಮಾಡಿದ್ದೀರಿ, ಆದರಿಂದ ತಾವು ಹಿಂದಕ್ಕೆ ಹೋಗಬೇಕೆಂದು ಹೇಳುತ್ತೇನೆ. ಇವತ್ತು ನಾನು ಒಂದು ಮಾತನ್ನು ಹೇಳಲೇಬೇಕಾಗಿದೆ. ಮಾನ್ಯ ಬೈರೇಗೌಡರಿಗಿಂತ ಭಾರೀ ಮಂತ್ರಿಗಳನ್ನು ಇವತ್ತಿನ ಸ್ಥಿತಿಯಲ್ಲಿ ನಿರೀಕ್ಷೆ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಅವರು ಇನ್ನು ಹೆಚ್ಚಿನ ಕೆಲಸಗಳನ್ನು ಮಾಡಲಿ ಎಂದು ಆಶಿಸುತ್ತಾ ಅವರು ನಿಜವಾದ ರೈತರಾಗಲಿ ಎಂದು ಹೇಳುತ್ತೇನೆ. ಇನ್ನು ತೋಟಗಾರಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ತೋಟಗಾರಿಕೆಯು ನಮ್ಮದೇ ಕ್ಷೇತ್ರವಾಗಿದೆ. ಮಾನ್ಯ ಜಯಕುಮಾರ್‌ರವರೇ ತಾವು ತಮ್ಮ ಇಲಾಖೆಯನ್ನು ನೋಡಿಲ್ಲ, ಇಲ್ಲಿ ನಮ್ಮನ್ನಾದರೂ ನೋಡಿ, ನಾವು ಕಷ್ಟಪಟ್ಟು ಓದಿಕೊಂಡು ಬಂದಿದ್ದೇವೆ. ಇದು ನಮ್ಮ ಕ್ಷೇತ್ರ, ನಾವು ತೆಂಗು, ಅಡಿಕೆ, ಬೆಳೆಯುವಂತಹ ಜನರಾಗಿದ್ದೇವೆ. ರಾಜ್ಯದ ಶೇ.12 ರಿಂದ 13ರಷ್ಟು ತೋಟಗಾರಿಕೆಯ ಬೆಳೆಯನ್ನು ನಾವು ನಮ್ಮ ರಾಜ್ಯದಲ್ಲಿ ಬೆಳೆಯುತ್ತಾ ಇದ್ದೆವು. ಇವತ್ತು ನಮ್ಮ ದುರ್ದೈವವೆಂದರೆ ನಾವು ತೋಟಗಾರಿಕೆಯ ಬಗ್ಗೆ ಮಾತನಾಡಬಾರದೆನ್ನುವಂತಹ ಸ್ಥಿತಿಗೆ ಬಂದಿದ್ದೇವೆ. ಅದಕ್ಕೆ ಮೊದಲನೆಯ ಕಾರಣವೆಂದರೆ ಮಳೆ ಕಾಲಕಾಲಕ್ಕೆ ಸರಿಯಾಗಿ ಬರಲಿಲ್ಲ. ಇದು ನೀರನ್ನು ಅವಲಂಬಿಸುವಂತಹ ಬೆಳೆಯಾಗಿದೆ. ಇನ್ನು ತೋಟಗಾರಿಕೆಯ ಇಲಾಖೆಯವರು ಅಲ್ಲಲ್ಲಿ ಫಾರಂಗಳನ್ನು ಮಾಡಿ ನಮಗೆ ಮಾರ್ಗದರ್ಶನ ಮಾಡಬೇಕಾಗಿತ್ತು. ಈಗಿರುವಂತಹ ಫಾರಂಗಳನ್ನು ನೋಡಿದರೆ ಅಲ್ಲಿಯೇ ಕುಳಿತು ಅಳೋಣವೆನಿಸುತ್ತದೆ. ಈ ಸ್ಥಿತಿಗೆ ನಾವು ಹಳ್ಳಿಗಳಲ್ಲಿ ಜಮೀನುಗಳನ್ನು ಕೊಟ್ಟು ತೋಟಗಾರಿಕೆಯ ಫಾರಂಗಳನ್ನು ಮಾಡಿದೆವಾ ಎಂದು ಅನ್ನಿಸುತ್ತದೆ. ಮಾನ್ಯ ಜಯಕುಮಾರ್‌ರವರು 300 ಚಿಲ್ಲರೆ ಫಾರಂಗಳನ್ನು ಇಟ್ಟುಕೊಂಡಿದ್ದಾರೆ. ಅವರು ಅದರಲ್ಲಿ 20-30ಫಾರಂಗಳನ್ನು ನೋಡಿಲ್ಲವೆಂದು ನನ್ನ ಭಾವನೆಯಾಗಿದೆ. ಅದನ್ನು ಅವರು ನೋಡಿದ್ದರೆ ಅಷ್ಟು ಕಠಿಣ ಮನಸ್ಸಿನಲ್ಲಿ ಇರುವುದಕ್ಕೆ ಆಗುತ್ತಾ ಇರಲಿಲ್ಲ. ಅದರಲ್ಲಿ ಒಂದು ಫಾರಂ ಸಹ ಸರಿಯಾದಂತಹ ಸ್ಥಿತಿಯಲ್ಲಿ ನಡೆಯುತ್ತಾ ಇಲ್ಲ. ನನ್ನ ತಾಲ್ಲೂಕಿನಲ್ಲಿ "ಧರ್ಮವೀರ ಫಾರಂ" ಎಂದು ಇದೆ. ಆ ಫಾರಂ ಅನ್ನು ಭಾರೀ ಆಸೆ ಇಟ್ಟುಕೊಂಡು ಉತ್ತಮ ತೆಂಗನ್ನು ತಯಾರು ಮಾಡಬೇಕೆಂದು ಅಂದಿನ ಗವರ್ನರ್ ಆಗಿದ್ದಂತಹ ಶ್ರೀಮಾನ್ ಧರ್ಮವೀರರವರ ಕಾಲದಲ್ಲಿ ಒಂದು ಸಾವಿರ ಎಕರೆಯ ಫಾರಂ ಮಾಡಿದ್ದರು. ಅಲ್ಲಿ ಬೆಳೆದಿರತಕ್ಕ ಕಳೆ ನೋಡಿದರೆ ಅದರ ಒಳಗಡೆ ಹೋಗುವುದಕ್ಕೆ ಭಯವಾಗುತ್ತದೆ. ಮಾನ್ಯ ಬೈರೇಗೌಡರೇ ತಾವು ಒಂದು ಸಾರಿ ಅಲ್ಲಿಗೆ ಹೋಗಿ ಬನ್ನಿ. ಇದನ್ನು ನಾನು ಏನು ವೈಭವೀಕರಿಸುತ್ತಿಲ್ಲ. ಮಾನ್ಯ ಮಂತ್ರಿಯವರು ನಿನ್ನೆ ದಿವಸ ಪ್ರಶ್ನೆಯೊಂದಕ್ಕೆ ಉತ್ತರವನ್ನು ಕೊಡುತ್ತಾ ಹೇಳಿದ್ದಾರೆ. ಅವರು ಇಲ್ಲಿ ತೆಂಗು ಬಿಟ್ಟು ಬಾಳೆ, ಮಾವು ಏನಾದರೂ ಬೆಳೆಯುತ್ತೇವೆಂದು ಹೇಳಿದ್ದಾರೆ. ಅಲ್ಲಿ ಬೇರೆ ಏನು ಬೆಳೆಯುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಈ ಫಾರಂಗಳನ್ನು ಮೈಂಟೈನ್ ಮಾಡುವುದಕ್ಕೆ ನಿಮಗೆ ಏಕೆ ಶಕ್ತಿ ಇಲ್ಲದ ಹಾಗೆ ಆಯಿತೆಂದು ನನಗೆ ಗೊತ್ತಿಲ್ಲ. ನೀವು ಜಿಲ್ಲಾ ಪಂಚಾಯತ್‌ಗೆ 160-162 ಫಾರಂಗಳನ್ನು ಕೊಟ್ಟಿದ್ದೀರಿ. ಅವರು ಕೂಡ ಇದೇ ಮಟ್ಟದಲ್ಲಿ ವಿಫಲರಾಗಿದ್ದಾರೆ. ನಿಮ್ಮ ಈ ತೋಟಗಾರಿಕೆ ಫಾರಂಗಳು ಅವು ಸ್ಟೇಟ್ ಸೆಕ್ಟಾರ್ ಆಗಲಿ, ಡಿಸ್ಟ್ರಿಕ್ ಸೆಕ್ಟಾರ್ ಆಗಲಿ ಅದನ್ನು ಜನರು ನೋಡುವ ಸ್ಥಿತಿಯಲ್ಲಿ ಇಲ್ಲ. ಈ ನಿಮ್ಮ ತೋಟಗಾರಿಕೆ ಫಾರಂಗಳು ಏನಿವೆ ಅದನ್ನು ನೋಡಿಬಿಟ್ಟರೆ ಮತ್ತೆ ಹಾರ್ಟಿಕಲ್ಚರ್ ಕ್ರಾಪ್ ಅನ್ನು ಬೆಳೆಯಬೇಕೆಂದು ಅನಿಸುವುದಿಲ್ಲ. ನೀವು ಇವತ್ತು ಮಾಡಿರುವಂತಹ ಮೈಂಟೆನೆನ್ಸ್ ಅನ್ನು ನೋಡಿದರೆ, ಸರ್ಕಾರ

ಮಾಡಿರುವಂತಹ ಕೆಲಸ ಇದೆನಾ? ಎಂದು ಅನಿಸುತ್ತದೆ. ಯಾವುದೇ ಫಾರಂಗಳಲ್ಲಿ ಗಾರ್ಡ್‌ಗಳು, ಕೂಲಿಗಳು, ಇಲ್ಲ. ಇವತ್ತು ಎ.ಹೆಚ್.ಒ, ಹೆಚ್.ಪಿ ಗಳ ಕೊರತೆ ಭಾರೀ ಇದೆ, ಇರುವ ಒಬ್ಬಿಬ್ಬರನ್ನು ನಿಮಗೆ ಬೇಕಾದಂತಹ ಕಡೆಗಳಲ್ಲಿ ಹಾಕಿಕೊಂಡಿದ್ದೀರಿ. ಹೀಗಾಗಿ ಈ ಫಾರಂಗಳನ್ನು ನೋಡಿಕೊಳ್ಳುವವರು ಇಲ್ಲ. ನಮ್ಮ ಜಯಚಾಮರಾಜಪುರದ ಒಂದು ಗ್ರಾಮದಲ್ಲಿ ಒಂದು ಫಾರಂನಲ್ಲಿ ಒಂದು ವರ್ಷಕ್ಕೆ ಹದಿನೈದು ಸಾವಿರ ತೆಂಗಿನ ನರ್ಸರಿಯನ್ನು ಮಾಡುತ್ತಿದ್ದಂತಹ ಫಾರಂನಲ್ಲಿ ಇವತ್ತು ಕುಡಿಯುವುದಕ್ಕೆ ನೀರಿಲ್ಲ. ಎಲ್ಲಿ ಪ್ರಕ್ಯೂರ್‌ಮೆಂಟ್ ಮಾಡುತ್ತಿದ್ದೀರಿ?? ಕಡೂರು ಸಂತೆಯಲ್ಲಿ, ಅರಸೀಕೆರೆ ಸಂತೆಯಲ್ಲಿ, ಹುಳಿಯಾರ್‌ನಲ್ಲಿ ಇವತ್ತು ತೆಂಗಿನಕಾಯಿಯ ಬೀಜವನ್ನು ಇವತ್ತು ತೆಗೆದುಕೊಂಡು ಬಂದು ಎಲ್ಲೋ ಕೊಡುತ್ತಿದ್ದೀರಿ. ಇನ್ನು ಮಾವಿನ ಉತ್ಪತ್ತಿ ರಾಜ್ಯದಲ್ಲಿ ಈ ವರ್ಷ ಏನಿದೆ? ಮಾವಿನ ಬೆಳೆ ಸರ್ವನಾಶವಾಗಿದ್ದರೆ ತೋಟಗಾರಿಕ ಮಂತ್ರಿಗಳಿಗೆ ಏನಾದರೂ ಕಳಕಳಿ ಇದೆಯೇ? ಇಷ್ಟು ಮಾವನ್ನು ಬೆಳೆಯುತ್ತಿದ್ದ ಬೆಳೆಗಾರ ಏನಾದ ಎಂದು ಯೋಚನೆ ಮಾಡುವುದಕ್ಕೆ ತೋಟಗಾರಿಕೆ ಮಂತ್ರಿಗಳಿಗೆ ವಿರಾಮವಿದೆಯೇ? ತೆಂಗು ನಾಶವಾಗುತ್ತಿದೆ, ಮಾವು ನಾಶವಾಗುತ್ತಿದೆ, ಇನ್ನು ದಾಳಿಂಬೆ ಬೆಳೆಯುವವನು ರಾಜ್ಯದಲ್ಲಿ ಹಾಳಾಗುತ್ತಿದ್ದಾನೆ. ಈ ವರ್ಷ ಮಾವಿನ ಹಣ್ಣು ನೋಡುವುದಕ್ಕೆ ಸಿಗುತ್ತಿಲ್ಲ. ಇವರು ಸ್ವಲ್ಪ ಆಸಕ್ತಿ ವಹಿಸಿ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಸ್ವಲ್ಪ ಸ್ಪ್ರೇ ಮಾಡಿಸಿದ್ದರೆ ಜನಕ್ಕೆ ಆ ಚಿಗುರು ಬಂದರೆ ಕಿತ್ತು ಹಾಕಿ ಎಂದು ಹೇಳಿದ್ದರೆ ರೈತರು ಆ ಕೆಲಸವನ್ನು ಮಾಡಿರುವವರು. ಮಾವನ್ನು ಹಾಕಲೇಬಾರದೆನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ಬನ್ನಿ, ನಮ್ಮ ಅಧ್ಯಕ್ಷರ ಕ್ಷೇತ್ರವಾದ ಶ್ರೀನಿವಾಸಪುರ ತಾಲ್ಲೂಕು ಮಾವಿಗೆ ಪ್ರಸಿದ್ಧವಾದದ್ದು ನಂತರ ನಮ್ಮ ಗುಬ್ಬಿ ತಾಲ್ಲೂಕು. ಇವತ್ತು ಅಲ್ಲಿ ಮಾವನ್ನು ಬೆಳೆದ ಜನ ಸರ್ವನಾಶವಾಗಿದ್ದಾರೆ; ನಮ್ಮಿಂದ ಯಾವುದೇ ನೆರವಿಲ್ಲ. ಅಥವಾ ಖುಷ್ಕಿ ಬೆಳೆ ಹಾಳಾದರೆ ಸಿಆರ್‌ಎಫ್ ನಲ್ಲಿ ಹೆಕ್ಟೇರ್‌ಗೆ 500, 750 ರೂಪಾಯಿಗಳನ್ನಾದರೂ ಕೊಡುತ್ತೀರಿ, ತೋಟಗಾರಿಕೆ ಬೆಳೆ ಹಾಳಾದರೆ ಯಾವ ಪರಿಹಾರವಿಲ್ಲವಲ್ಲ ನಾವು ಎಲ್ಲಿಗೆ ಹೋಗಬೇಕು? ತಾವು ಇಲ್ಲಿ ನಿಂತು ಕೊಂಡು ಚಿಕ್ಕನಾಯಕನಹಳ್ಳಿಯಲ್ಲಿ ಬೆಳೆ ಹಾಳಾಗಿದೆ ನಾನು ಪರಿಹಾರ ಕೊಡುತ್ತೇವೆಂದು ಹೇಳಿದಿರಿ ಅದನ್ನು ಯಾವ ಯೋಜನೆಯಲ್ಲಿ ಕೊಡುತ್ತೀರಿ, ಎಲ್ಲಾದರೂ ಯೋಜನೆ ಇದೆಯಾ, ಎಲ್ಲಾದರು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಾ? ಸಾಧ್ಯವಿಲ್ಲದೆ ನಮಗೆ ಈ ಸ್ಥಿತಿಯನ್ನು ತಂದು ಇಟ್ಟಿದ್ದೀರಿ. ಅಧ್ಯಕ್ಷರೆ, ಇವತ್ತು ತೋಟಗಾರಿಕೆ ಮಂತ್ರಿಗಳು ಎಷ್ಟು ಫಾರಂಗಳಿಗೆ ತಾವು ಭೇಟಿ ಕೊಟ್ಟಿದ್ದೀರೆಂದು ಕೇಳುತ್ತೇನೆ. ಎಷ್ಟು ಫಾರಂಗಳಲ್ಲಿ ವೇಕೆನ್ಸೀಸ್ ಇದೆ ಎನ್ನುವ ಮಾಹಿತಿ ಇದ್ದರೆ ನನಗೆ ಹೇಳುತ್ತೀರಾ? ನಿರ್ಧಿಷ್ಟವಾಗಿ ನಿಮ್ಮ ಗಾರ್ಡನರ್ಸ್ ಆಗಿದ್ದವರು ಕೆಲಸ ಖಾಯಂ ಆಯಿತು ಎಂದು ಬೇರೆ ಬೇರೆ ಇಲಾಖೆಗೆ ಹೋದರಲ್ಲ ಅವರನ್ನು ತಾವು ಏನು ಮಾಡಿದಿರಿ? ತಾವು ಅವರನ್ನು ತುಂಬಿದ್ದೀರಾ? ಯಾರಾದರೂ ನೀರನ್ನು ಹಾಯಿಸುವುದಕ್ಕೆ ಇದ್ದಾರೆಯೇ? ಯಾರಾದರು ಪಾತಿ ಮಾಡುವುದಕ್ಕೆ ಇದ್ದಾರೆಯೇ? ಸ್ವಾಮಿ ಇವತ್ತು ತೋಟಗಾರಿಕೆ ಫಾರಂಗಳಲ್ಲಿ ಒಬ್ಬರು ಇಲ್ಲ. ಈ ಸ್ಥಿತಿಯಲ್ಲಿ ಫಾರಂಗಳನ್ನು ನಡೆಸುವುದಕ್ಕೆ ಸಾವಿರಾರು ಎಕರೆ ಜಮೀನನ್ನು ಏತಕ್ಕೆ ಇಟ್ಟುಕೊಂಡು ಕುಳಿತುಕೊಂಡಿದ್ದೀರಿ, ಅದರ ಮೇಲೆ ಬಂಡವಾಳ ಬೇರೆ. ಅಧ್ಯಕ್ಷರೆ, ನಮ್ಮ ಮಾತನ್ನು ನಿಲ್ಲಿಸಿ ಎಂದು ಹೇಳುತ್ತೀರಿ, ನಮಗೆ ಅರ್ಥವಾಗುತ್ತಿಲ್ಲ, ನಮ್ಮ ನೋವನ್ನು ಯಾರಿಗೆ ಹೇಳಬೇಕು? ನಮ್ಮ ಭಾಗವಾದ ತಿಪಟೂರಿಗೆ ಇವತ್ತು ಬನ್ನಿ ತೆಂಗಿನ ಬೆಳೆ ನಾಶವಾಗುತ್ತಿದೆ.

ಒಂದು ಕಡೆ ಕಪ್ಪು ತಲೆಹುಳು ರೋಗ, ಒಂದು ಕಡೆ ಅಣಬೆ ರೋಗ, ಒಂದು ಕಡೆ ಮಳೆಯಿಲ್ಲ, ಒಂದು ಕಡೆ ವಿದ್ಯುತ್‌ಚ್ಛಕ್ತಿ ಸರಬರಾಜು ಸರಿಯಾಗಿಲ್ಲ, ಇನ್ನೊಂದು ಕಡೆ ನಮಗೆ ಮಾಹಿತಿ ಕೊಡುವ ಜನರ ಲಭ್ಯವಿಲ್ಲ. ಇವತ್ತು ಒಂದು ತೆಂಗಿನ ಮರ ಹೋದರೆ ಮತ್ತೆ ತೆಂಗಿನ ಮರ ಕಾಣುವುದಕ್ಕೆ ಇಪ್ಪತ್ತು ವರ್ಷಗಳು ಬೇಕು. ಏನು ಖುಷ್ಕಿ ಬೆಳೆನಾ ಮುಂದಿನ ವರ್ಷ ಮಳೆ ಬಂದರೆ ನಾನು ಬೆಳೆದುಕೊಳ್ಳುತ್ತೇನೆ ಎನ್ನುವುದಕ್ಕೆ. ಆ ಕಡೆ ತಾವು ಸ್ವಲ್ಪ ಗಮನ ಕೊಡಬೇಕು. ಮಂತ್ರಿಗಳಿಗೆ ತೋಟಗಾರಿಕೆಯಲ್ಲಿ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂದು ಗೊತ್ತಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ಈ ಫಾರಂಗಳ ನಿರ್ವಹಣೆಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಮಾನ್ಯ ಮಾಧುಸ್ವಾಮಿಯವರು ಎಷ್ಟರಮಟ್ಟಿಗೆ ನಾವು ನಿರ್ವಹಣೆ ಮಾಡುತ್ತಾ ಬರುತ್ತಿದ್ದೇವೆ ಎನ್ನುವುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಇದರ ಬಗ್ಗೆ ನಾನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಇಚ್ಛೆಪಡುವುದೇನೆಂದರೆ ತೋಟಗಾರಿಕೆ ಇಲಾಖೆಯವರ ತಮ್ಮದೇ ಆದ ಒಂದು ಫಾರಂ ತಮಿಳುನಾಡಿನ ಊಟಿನಲ್ಲಿದೆ. ಎಂಥ ಫಲವತ್ತಾದ ಪ್ರದೇಶದಲ್ಲೂ ಜಮೀನಿದ್ದರೆ ನಿರ್ವಹಣೆ ಮಾಡದಿದ್ದರೆ ಯಾವರೀತಿ ಅದನ್ನು ಹಾಳು ಮಾಡಬಹುದು ಎನ್ನುವುದಕ್ಕೆ ಅದೊಂದು ನಿದರ್ಶನವಾಗಿದೆ. ತಾವೇನಾದರೂ ಆ ಒಂದು ಫಾರಂಗೆ ಭೇಟಿ ನೀಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಏಕೆಂದರೆ ಅಷ್ಟು ಫಲವತ್ತಾದ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ನಾವು ನಿರ್ವಹಣೆ ಮಾಡಬೇಕಾಗಿತ್ತೋ, ಅಲ್ಲಿಂದ ಬೆಳೆಯನ್ನು ತೆಗೆದು ಮಾದರಿಯನ್ನಾಗಿ ಮಾಡಬಹುದಾಗಿತ್ತೋ ಅದನ್ನು ಮಾಡದೆ ಹಾಳುಮಾಡುವ ಒಂದು ವ್ಯವಸ್ಥೆಯಾಗಿದೆ ಇದರ ಬಗ್ಗೆ ಸರ್ಕಾರ ತೀವ್ರಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಆಲೂಗಡ್ಡೆಯನ್ನು ಬೆಳೆಯುವುದಕ್ಕೆ ಇದ್ದಂಥ ಒಂದು ವ್ಯವಸ್ಥೆ, ಆ ಆಲೂಗಡ್ಡೆ ತಳಿಗೆ ಕಾಯಿಲೆ ಬಂದುದರಿಂದ ಅದನ್ನು ಬೆಳೆಯುವುದಕ್ಕೆ ಆಗುವುದಿಲ್ಲವೆಂದು ಒಂದು ತೀರ್ಮಾನ ತೆಗೆದುಕೊಂಡಿದ್ದರಿಂದ ಅಲ್ಲಿ ಕೇವಲ ಆರ್ನಮೆಂಟಲ್ ಗಾರ್ಡನ್ ಮಾತ್ರ ಮೈಂಟೇನ್ ಮಾಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇವತ್ತು ಸರ್ಕಾರಿ ಫಾರಂಗಳ ಕತೆ ಈ ರೀತಿಯಾದರೆ ರೈತರಿಗೆ ಏನು ಟೆಕ್ನಿಕಲ್ ಎಕ್ಸ್‌ಪರ್ಟೈಸ್ ಕೊಡಬೇಕಾಗಿತ್ತು ಅದು ಪುಸ್ತಕದಲ್ಲೇ ಉಳಿದು ಬಿಡ್ತು. ಇವತ್ತು ನಮ್ಮ ಅಣಬೆ ರೋಗಕ್ಕೇನಾದರೂ ಔಷಧಿಯನ್ನು ಕಂಡುಹಿಡಿದಿದ್ದಾರೆನೋ ಅಥವಾ ಅಡಿಕೆ ಬೆಳೆಗೆ ಬರುವ ಹಳದಿ ರೋಗಕ್ಕೆ ಏನಾದರೂ ಔಷಧಿ ಕಂಡು ಹಿಡಿದಿದ್ದಾರೇನೊ ಕೇಳಿ. ಆ ಗಿಡವನ್ನು ಕಿತ್ತು ನೆಡವುದಕ್ಕೆ ನೂರು, ಇನ್ನೂರು ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಾರೆ. ಇಷ್ಟು ವರ್ಷವಾದರು ಆ ರೋಗವನ್ನು ನಿಯಂತ್ರಣಕ್ಕೆ ತರುವುದಕ್ಕೆ ಹೇಳಲೇ ಇಲ್ಲ. ಚಿಕ್ಕನಾಯಕನಹಳ್ಳಿ, ತಿಪಟೂರು ಭಾಗಗಳಲ್ಲಿ ಕಪ್ಪುತಲೆಹುಳು ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಹತ್ತು ವರ್ಷದಿಂದ ಆಗುತ್ತಿಲ್ಲ. ಪ್ಯಾರಸೈಟ್ ಬಿಟ್ಟಿದ್ದಾಯಿತು, ಎಲ್ಲಿಗೆ ಬಿಟ್ಟಿದ್ದೀರಿ.? ಇದರ ಜೊತೆಗೆ ಇವತ್ತು ಸಂಶೋಧನೆ ಏನಾಗಿದೆ ಗೊತ್ತೇ ಇಲ್ಲ. ತೋಟಗಾರಿಕೆ ಇವತ್ತು ಭಾರಿ ಪ್ರಮುಖವಾದ ಬೆಳೆಯಾಗಬೇಕಾಗಿತ್ತು. ಎಲ್ಲಾ ರಾಜ್ಯಕ್ಕೂ ಈ ಪ್ರಕೃತಿ ಸಿರಿ ಸಿಗುವುದಿಲ್ಲ,

ಎಲ್ಲರೂ ತೆಂಗು, ವಿಳ್ಳೆದೆಲೆ, ಅಡಿಕೆ ಬೆಳೆಯುವುದಕ್ಕಾಗುವುದಿಲ್ಲ, ಕರ್ನಾಟಕಕ್ಕೆ ಇದು ವರದಾನವಾಗಿತ್ತು ಸರ್ವನಾಶಮಾಡಿಬಿಟ್ಟರು. ತಮಿಳುನಾಡು, ಕರ್ನಾಟಕದಲ್ಲಿರುವವರು ತೆಂಗು ಬೆಳೆಯುವ ಕಷ್ಟ ನಿಮಗೆ ಅರ್ಥವಾಗಬೇಕು. ಅಲ್ಲಿ ಮಳೆ ಬೀಳುತ್ತದೆ, ಅಲ್ಲಿ ನೀರಾವರಿ ಇದೆ ಇಲ್ಲಿ ನಾವೆಲ್ಲ ಸ್ವಂತವಾಗಿ ಮಾಡಬೇಕು, ಕೇರಳದಲ್ಲಿ ಡಿವಾಟರಿಂಗ್ ಮಾಡಬೇಕು. ತೋಟದಲ್ಲಿರುವ ನೀರನ್ನು ಹೊರಗೆ ಹಾಕುವುದಕ್ಕೆ ಪಂಪ್‌ಸೆಂಟನ್ನು ಬಳಸಬೇಕು. ಒಂದು ಮರಕ್ಕೆ ಸರಾಸರಿ ಇನ್ನೂರು, ಇನ್ನೂರ ಐವತ್ತು ಕಾಯಿ ಬಿಡುತ್ತದೆ, ಕರ್ನಾಟಕದಲ್ಲಿ ಅರವತ್ತು ಕಾಯಿಗಳು ಬಿಟ್ಟರೆ ಅಂಥವರ ಮಹಾಪುಣ್ಯ. ಇದಕ್ಕೆ ನಾವು ಡ್ರಿಪ್ ಮಾಡಬೇಕು, ಇದಕ್ಕೆ ನಾವು ಬೋರ್ ಮಾಡಬೇಕು. ವರ್ಮಿಕಲ್ಚರ್, ನ್ಯಾಚುರಲ್ ಕಲ್ಟಿವೇಷನ್ ಇಂಥ ಕಥೆಗಳನ್ನು ಹೇಳಿಕೊಂಡು ನಾವು ಬದುಕ್ಕಿದ್ದೇವೆಯೇ ಹೊರತು, ವಾಸ್ತವವಾಗಿ ತೆಂಗು ಉತ್ಪಾದನೆ ಹೋದ ವರ್ಷಕ್ಕೂ ಈ ವರ್ಷಕ್ಕೂ ಎಷ್ಟಿದೆ ಎನ್ನುವುದನ್ನು ಹೇಳಿ ಸ್ವಾಮಿ? ಮಾವು ಉತ್ಪಾದನೆ ಎಷ್ಟಿದೆ ಹೇಳಿ? ಇವತ್ತು ಅಡಿಕೆ ಬೆಳೆಯುವವರು ನೆಲಕಚ್ಚುತ್ತಿದ್ದಾರೆ. ಸಾಂಬಾರು ಪದಾರ್ಥಗಳಿಗೆ ಹೆಸರಾದ ರಾಜ್ಯ ಇವತ್ತು ಭೂಪಟದಲ್ಲಿ ತನ್ನ ಹೆಸರನ್ನೇ ಕಳೆದುಕೊಳ್ಳುವ ಸ್ಥಿತಿ ಬಂದಿದೆ. ಸಕಲೇಶಪುರದಲ್ಲಿ ನಿಮ್ಮ ಒಂದು ಬೋರ್ಡಿನ ಕಛೇರಿ ಇದೆ ಅದು ಏನಾಗಿದೆ? ಏಲಕ್ಕಿ ಎಲ್ಲಿದೆ, ಸಾಂಬಾರು ಪದಾರ್ಥಗಳಿಗೆ ಇವತ್ತು ರಾಜ್ಯದಲ್ಲಿ ಏನಾದರೂ ಅರ್ಥ ಉಳಿದಿದೆಯೇ? ಎಲ್ಲಾ ಆಮದು ಮಾಡಿಕೊಳ್ಳಬೇಕು. ಏಲಕ್ಕಿ ಜಾಕಾಯಿಯವರೆಗೆ ಇವತ್ತು ನಾವು ಕರ್ನಾಟಕದಲ್ಲಿ ಹೊರಗಡೆಯಿಂದ ತರಬೇಕು. ಯಾರು ಬೆಳೆದು ಕೊಡುತ್ತಿದ್ದೆವು, ಕರ್ನಾಟಕ ಸಿರಿಯನ್ನು ಹೊಗಳುತ್ತಿದ್ದದು ಸಾಂಬಾರು ಪದಾರ್ಥಗಳಿಂದ ಸಾಂಬಾರು ಪದಾರ್ಥಗಳಲ್ಲೇ ಈ ರಾಜ್ಯದ ಔಚಿತ್ಯವಿದ್ದುದು. ಏನಾದರೂ ಈ ರಾಜ್ಯಕ್ಕೆ ಭಾರಿ ಕಿಮ್ಮತ್ತು ಇದ್ದಿದ್ದರೆ, ನಮ್ಮ ಕರ್ನಾಟಕದ ಕರಾವಳಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೂ ಸಕಲೇಶಪುರದ ಭಾಗದಲ್ಲಿ ಏನು ಸಾಂಬಾರು ಪದಾರ್ಥಗಳಿತ್ತು ಅದು ನಮಗೆ ಹಿರಿಮೆಯಾಗಿತ್ತು.ಇವತ್ತು ಅದು ಇಲ್ಲ. ಸಮಯ ಮುಖ್ಯವಲ್ಲ, ಇವತ್ತು ರಾಜ್ಯ ಎಲ್ಲಿಗೆ ಹೋಗುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕು. ವಿಳ್ಳೆದೆಲೆ ಇವತ್ತು ಹಳೆಯ ಮೈಸೂರು ಪ್ರಾಂತ್ಯದಲ್ಲಿ ಸಂಪೂರ್ಣವಾಗಿ ನಾಶವಾಗಿದೆ, ಎಲ್ಲೂ ಬೆಳೆಯುತ್ತಿಲ್ಲ, ವಿಳ್ಳೆದೆಲೆಯನ್ನು ಇವತ್ತು ನಾವು ಹೊರಗಡೆಯಿಂದ ತರಿಸಿಕೊಳ್ಳಬೇಕಾಗಿದೆ. ಇವರು ಏನಾದರೂ ಹೀಗೆ ಮಾಡುತ್ತಾ ಹೋದರೆ ಅಡಿಕೆ ನಾಶವಾಗುತ್ತದೆ, ಇವರು ಏನಾದರೂ ಹಿಗೆ ಮಾಡಿದರೆ ಮಾವು ಹೋಗುತ್ತದೆ, ಇವತ್ತು ನೀವು ರಾಜ್ಯದಲ್ಲಿ ಏನು ಉಳಿಸುತ್ತೀರಿ? ಏತಕ್ಕೆ ಈ ಸರ್ಕಾರ ನಡೆಯಬೇಕು? ಏತಕ್ಕೆ ಇದನ್ನು ರೈತರ ಸರ್ಕಾರವೆಂದು ಕರೆಯಬೇಕು? ಡಿ.ಟಿ.ಜಯಕುಮಾರ್‌ರವರು, ನಮ್ಮ ಕೆಲಸವಾಗದ ಮೇಲೆ ಇಷ್ಟು ಕಷ್ಟಪಟ್ಟು ಕೆಲಸವೇತಕ್ಕೆ ಮಾಡಬೇಕು? ನೀವು ಮಾಡುವ ಕೆಲಸವೆಲ್ಲ ನೀರಿನಲ್ಲಿ ಹೋಮ ಮಾಡಿದಂತೆ ಸುಮ್ಮನೆ ವ್ಯರ್ಥ; ಆ ಕೆಲಸವಾದರೂ ಬಿಟ್ಟುಬಿಡಬೇಕು, ನಿಮಗಾದರೂ ಸುಖ ಸಿಗುತ್ತದೆ. ನೀವು ಮಾಡುವ ಕೆಲಸ ನಮಗೆ ಪ್ರಯೋಜನ ಕೊಡಲಿಲ್ಲವೆಂದರೆ ಕೆಲಸ ಎತಕ್ಕೆ ಮಾಡುತ್ತೀರಿ? ತಾವು ಸ್ವಲ್ಪ ಪೊಲೀಸ್ ಮನೋಭಾವನೆಯನ್ನು ಬದಲಾವಣೆ ಮಾಡಿಕೊಳ್ಳಿ ನಮ್ಮ ಕಡೆ ಬನ್ನಿ, ಈಗ ತಾವು ಸಬ್ ಇನ್‌ಸ್ಪೆಕ್ಟರ್ ಅಲ್ಲ ರೈತರ ಮಂತ್ರಿ. ಈ ಕಡೆ ಯೋಜನೆ ಮಾಡಬೇಕು, ಸ್ವಲ್ಪ ನಮ್ಮ ಕಡೆ ಗಮನಕೊಡಬೇಕು, ತೋಟಗಾರಿಕೆಯಂಥ ಒಂದು ಖಾತೆಯನ್ನು ಇಟ್ಟುಕೊಂಡು ಹುಡುಗಾಟವಾಡಬಾರದು. ನಾನು ಏತಕ್ಕೆ

ಈ ಮಾತನ್ನು ಹೇಳುತ್ತಿದ್ದೇನೆ ಎನ್ನುವುದಕ್ಕೆ ಹೇಳುತ್ತೇನೆ, ತಾವು ಇಲ್ಲೊಂದು ಹೇಳಿಕೆ ಮಾಡಿದಿರಿ ಅದೇನೆಂದರೆ ಡ್ರಿಪ್ ಇರಿಗೇಷನ್ ಹಣ ರಾಜ್ಯಕ್ಕೆ ಬಾಕಿ ಇಲ್ಲ. ನನ್ನ ಹತ್ತಿರ ಏನಾಮರ್ಸ್ ಫಂಡ್ ಇದೆ, ನಾನು ಯಾವ ಬಿಲ್ ಪೆಂಡಿಂಗ್ ಇಟ್ಟುಕೊಳ್ಳುವುದಿಲ್ಲವೆಂದು ಹೇಳಿದಿರಿ. ಇವತ್ತು 25 ಕೋಟಿ ರೂಪಾಯಿ ಮಾರ್ಚಿ ಕೊನೆಗೆ ಬಾಕಿ ಇದೆ ಪ್ರಿವಿಲೇಜ್ ಮೂವ್ ಮಾಡಲೇ? ನಾನು ಅವತ್ತು ಕೇಳುವುದಕ್ಕೆ ಅವಕಾಶ ಕೊಡಲಿಲ್ಲ. ಕರ್ನಾಟಕ ರಾಜ್ಯದಲ್ಲಿ 40 ಕೋಟಿ ರೂಪಾಯಿಗಳ ಬೇಡಿಕೆ ಇದೆ, ಈ ತಿಂಗಳವರೆಗೆ ಏನು ಡ್ರಿಪ್ ಮಾಡಿಸಿದ್ದಾರೆ ಅದಕ್ಕೆ ಸಿಗಬೇಕಾದ ಸಬ್ಸಿಡಿ 40 ಕೋಟಿ ರೂಪಾಯಿ ಬಾಕಿ ಇದೆ, ಹಣಕ್ಕೆ ಕೊರತೆ ಇಲ್ಲವೆಂದು ಹೇಳಿದರು. ಹೋದ ವರ್ಷ ಫೆಬ್ರವರಿ ಡಿಲೇಮಾಡಿದ್ದರಿಂದ ಎಂಟನೇ ಪ್ಲಾನ್‌ನಲ್ಲಿದ್ದ ಸಂಪೂರ್ಣವಾದ ಹಣವನ್ನು ಬಳಸಿಕೊಳ್ಳಲಿಲ್ಲ, ತಲೆಕೆಡಿಸಿಕೊಳ್ಳಲೇ ಇಲ್ಲ. ಡ್ರಿಪ್‌ಗೆ ಹಣ ಬಂದಿಲ್ಲ ತೆಗೆದು ನೋಡಿ ಎಂದು ಈ ವರ್ಷ ಹೇಳಿದೆವು, ಇಲ್ಲ ಸಾಕಷ್ಟು ಹಣವಿದೆ ಹಣಕ್ಕೆ ಕೊರತೆಯೇ ಇಲ್ಲವೆಂದು ಹೇಳಿದಿರಿ ಏಕೆ ಕೊಡಲಿಲ್ಲ ಸ್ವಾಮಿ, ನಾನು ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಬಾಕಿ ಇದೆ ಎಂದು ಪಟ್ಟಿಯನ್ನು ಕೊಡಲೇ? ತುಮಕೂರು ಒಂದಕ್ಕೆ ಇವತ್ತು 2 ಕೋಟಿ 80 ಲಕ್ಷ ರೂಪಾಯಿ ಬಾಕಿ ನಿಲ್ಲಿಸಿದ್ದೀರಿ. ಹಣಕ್ಕೆ ಕೊರತೆ ಇಲ್ಲವೆಂದು ಏತಕ್ಕೆ ಇಲ್ಲಿ ನಿಂತು ಸುಳ್ಳು ಹೇಳಿದಿರಿ ಸ್ವಾಮಿ? ಹಾಗಾದರೆ ತಾವು ಮಂತ್ರಿ ಅಲ್ಲವೇ? ನನಗೆ ಸಿಗುವ ಮಾಹಿತಿ ನಿಮಗೆ ಸಿಗುತ್ತಿರಲಿಲ್ಲವೇ? ನಾನು ಈ ಪಟ್ಟಿಯನ್ನು ಓದಲೆ? ರಾಜ್ಯದಲ್ಲಿ ಡ್ರಿಪ್ ಹಣ ಯಾವುದು ಬಾಕಿ ಇಲ್ಲವೆಂದು ಮಾರ್ಚ್ ತಿಂಗಳಾದ ಮೇಲೆ ತಾವು ಹೇಳಿರುವುದು. ಮಾರ್ಚ್ ಅಂತ್ಯಕ್ಕೆ 25 ಕೋಟಿ 26 ಲಕ್ಷ ರೂಪಾಯಿಗಳನ್ನು ಬಾಕಿ ಇಟ್ಟುಕೊಂಡಿದ್ದೀರಲ್ಲ, ಇವತ್ತು ರೈತ ಏನಾಗಬೇಕು ಯಾರು ದುಡ್ಡು ಕೊಡುವವರು? ನೀವೇನು ಕಳೆದುಕೊಳ್ಳುತ್ತಿದ್ದೀರಿ, ನೀವು ಹಾಕುತ್ತಿದ್ದ ಬಂಡವಾಳ ಒಟ್ಟು ಮೊತ್ತದ ಶೇಕಡ 10ರಷ್ಟು ಅವರು ಕೊಡುತ್ತಿದ್ದದ್ದನ್ನು ಕೊಡಿಸುವುದು ಬಿಟ್ಟು ಮಂತ್ರಿ ಕೆಲಸ ಮಾಡುತ್ತೀರಾ? ಕೇಂದ್ರ ಸರ್ಕಾರದಲ್ಲಿ ಕೊಡುವ ಹಣವನ್ನು ತಂದು ಇಲ್ಲಿ ಕೊಡಿಸುವುದಕ್ಕಾಗದಿದ್ದರೆ ಹೇಗೆ ದಾಸಯ್ಯ, ಜಂಗಮಯ್ಯದಿರಾಗಿದ್ದರೆ ಚೆನ್ನಾಗಿ ಮಾಡುತ್ತಿದ್ದರು. ನೀರಿಲ್ಲದೆ ಇವತ್ತು ಸಾಯುತ್ತಿದ್ದಾರೆ ಡ್ರಿಪ್ ಮಾಡಿರುವವರಿಗೆ ಇವತ್ತು ಶೇಕಡ 90ರಷ್ಟು 100ರಷ್ಟು ಕೊಡುತ್ತೇವೆಂದು ಹೇಳಿಬಿಟ್ಟಿರಿ, ಈ ಶಾಸನಸಭೆಯಲ್ಲಿ ನಿಂತುಕೊಂಡು ಸುಳ್ಳು ಹೇಳುತ್ತೀರಾ?

5.20 ಪಿ.ಎಂ

40 ಕೋಟಿ ರೂಪಾಯಿ ಬಾಕಿ ಇದೆ. ನಾವು ಮಾತನಾಡಬಾರದೇ? ಇನ್ನು ಕೋಕನೆಟ್ ಡೆವಲಪ್‌ಮೆಂಟ್ ಬೋರ್ಡಿನದು ಹೇಳಬೇಕಾದರೆ ನಮಗೆ ಏನೂ ಕೊರತೆ ಇಲ್ಲ ಎಂದು ಇವರು ಹೇಳಿದರು. ತಮಗೆ ಒಂದು ಮಾತನ್ನು ಹೇಳುತ್ತೇನೆ, ರಾಜ್ಯದ ಆಯವ್ಯಯ 25 ಕೋಟಿ ರೂಪಾಯಿ ಎಕ್ಸ್‌ಟರ್ನಲ್ ಫಂಡ್ಸ್ ಏನಾರ್ಮಸ್ ಆಗಿದೆ. ಬರೀ ಡ್ರಿಪ್ ಇರಿಗೇಷನ್‌ನಲ್ಲಿ 40 ಕೋಟಿ ರೂಪಾಯಿ ತರಬಹುದಾಗಿತ್ತು. ಹೋದವರ್ಷ ಕೋಕನೆಟ್ ಡೆವಲಪ್‌ಮೆಂಟ್ ಬೋರ್ಡ್ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. ನಾವು ಕೇಳಿದರೆ ಅದಕ್ಕೆ ರಿಸ್ಟ್ರಿಕ್ಷನ್. ಅದನ್ನು ಕೊಡುತ್ತಿದ್ದುದು ಕೊಚ್ಚಿನ್‌ನಲ್ಲಿರುವ ಬೋರ್ಡ್‌ನವರು. ಕೊಡಿಸಿದ್ದರೆ ನೀವು ಏನು ಕಳೆದುಕೊಳ್ಳುತ್ತಿದ್ದೀರಿ. ಅದನ್ನು ತಂದು ಏಕೆ ಹಂಚಿಸಲಿಲ್ಲ? ತಿಪಟೂರಿನಲ್ಲಿ ಅಣಬೆ ರೋಗ ಬಂದು ಗಿಡ ಹೋಗಿರುವವರಿಗೆ

5 ವರ್ಷವಾದರೂ ನೀವು ಏಕೆ ದುಡ್ಡನ್ನು ಕೊಟ್ಟಿಲ್ಲ? ನಿಮಗೆ ಏನು ತೊಂದರೆ ಇತ್ತು? ಏನೆಂದು ಹೇಳಿ, ನಾವೂ ಕೇಳಿಬಿಡುತ್ತೇವೆ. ನಾನು ಲಿಸ್ಟ್ ಕೊಡುತ್ತೇನೆ, ಚಿಕ್ಕನಾಯಕನ ಹಳ್ಳಿಯಲ್ಲಿ ಕಳೆದ ವರ್ಷ ಒಟ್ಟು ಫೈನಾನ್ಸ್ ಇದ್ದದ್ದು 16.78 ಲಕ್ಷ ರೂಪಾಯಿ ಅದನ್ನು ಖರ್ಚು ಮಾಡಿಲ್ಲ. ಅದು ಯಾವ ದುಡ್ಡು ಎಂದು ತಾವು ಕೇಳಬಹುದು. ಆಕಸ್ಮಾತ್ ತೆಂಗಿನ ಮರ ಹೋದರೆ, ಒಬ್ಬ ರೈತನಿಗೆ ಮತ್ತೆ ಗಿಡ ಹಾಕಲು 200 ರೂಪಾಯಿ ಅನುದಾನವನ್ನು ಸರ್ಕಾರ ಕೊಡುತ್ತದೆ. ಅದನ್ನು ಕೊಚ್ಚಿನ್ ಡೆವಲಪ್‌ಮೆಂಟ್ ಬೋರ್ಡ್‌ನವರು ಕೊಡುತ್ತಾರೆ. ಅನಂತರ ಗೊಬ್ಬರಕ್ಕೆ ಮತ್ತು ಗುಂಡಿ ತೆರೆಯಲು 30 ರೂಪಾಯಿ ಕೊಡುತ್ತಾರೆ. ಏಕೆ ತಾವು ಈ ದುಡ್ಡನ್ನು ಕೊಡಿಸುತ್ತಿಲ್ಲ? ಇವತ್ತು ನಾನು ಒಂದು ಎಕರೆ ತೆಂಗನ್ನು ಬೆಳೆಯುತ್ತೇನೆ ಎಂದರೆ ನನಗೆ 5 ಸಾವಿರ ರೂಪಾಯಿ ಸಬ್ಸಿಡಿ ಕೋಕನಟ್ ಬೋರ್ಡಿನಿಂದ ಎಕ್ಸ್‌ಪ್ಯಾನ್ಷನ್ ಪ್ರೋಗ್ರಾಂನಲ್ಲಿ ಸಿಗುತ್ತದೆ. ಇದನ್ನು ತಾವು ರಾಜ್ಯಕ್ಕೆ ಎಷ್ಟು ಕೊಡಿಸಿದ್ದೀರಿ? ಮೂರು ವರ್ಷಗಳಲ್ಲಿ ತಮ್ಮ ಸಾಧನೆ ಏನು? ಎಷ್ಟು ಅನುದಾನವನ್ನು ತಾವು ರಾಜ್ಯಕ್ಕೆ ತಂದಿದ್ದೀರಿ ಎನ್ನುವುದನ್ನು ಹೇಳುತ್ತೀರಾ? ತರುವುದಕ್ಕೆ ತಮಗೆ ಏನಾಗಿತ್ತು? ಇನ್ನು ಹಾಪ್‌ಕಾಮ್ಸ್ ಬಗ್ಗೆ ಮತ್ತು ಹಾರ್ಟಿಕಲ್ಚರ್ ಫೆಡರೇಷನ್ ಬಗ್ಗೆ ಭಾರೀ ಮಾತನಾಡುತ್ತಿದ್ದಾರೆ. ಇವತ್ತು ಹಾಪ್‌ಕಾಮ್ಸ್ ಏನಾಗಿದೆ ಎನ್ನುವುದನ್ನು ಸ್ವಲ್ಪ ಹೇಳಿ. ಒಂದು ಕಡೆ, ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ತಂದು ಹಾಪ್‌ಕಾಮ್ಸ್‌ನಲ್ಲಿ ಮಾರುತ್ತೇವೆ ಎಂದು ಹೇಳಿದ ನೀವು ಅದಕ್ಕೆ ಬೇಕಾದಂಥ ಕೋಲ್ಡ್ ಸ್ಟೋರೇಜನ್ನು ಮಾಡಿದಿರಾ? ಅವರಿಗೆ ಸರಿಯಾದ ಧಾರಣೆ ಕೊಟ್ಟಿರೇನು? ಇವತ್ತು ರೈತರು ಮಾರುವುದಕ್ಕೂ ಇವರು ಮಾರುವುದಕ್ಕೂ 7-8 ರೂಪಾಯಿ ವ್ಯತ್ಯಾಸ ಇರುತ್ತದೆ. ಇವತ್ತು ಯಾರಾದರೂ ನಂಬಿಕಸ್ಥ ಹಾಪ್‌ಕಾಮ್ಸ್‌ನಲ್ಲಿ ಕೊಳ್ಳುವುದಿಲ್ಲ. ಹೊರಗಡೆ ಕೊಳ್ಳುತ್ತಾನೆ. ಏಕೆಂದರೆ ಇವರ ಎದುರಿಗೆ ಹಾಪ್‌ಕಾಮ್ಸ್‌ನವರು ಹೊರಗಡೆಯಿಂದ ತಂದು ಮಾರುತ್ತಾನೆ. ಅವನಿಗೆ ಶೇಕಡ ಮೂರುಮುಕ್ಕಾಲರಷ್ಟು ಡೆಮರೇಜ್ ಕೊಡಬಹುದು ಎಂದು ಅಲೋ ಮಾಡಿದ್ದಾರೆ. ಶೇಕಡ 30ರಷ್ಟು ಲಾಸ್‌ವರೆಗೆ ಅವನನ್ನು ಎಕ್ಸೆಂಪ್ಟ್ ಮಾಡಿದ್ದಾರೆ. ಕೊಳಕೋ, ಹುಳಕೋ ಏನೇ ಇದ್ದರೂ ಲಾಸ್ ಎಂದು ಸೇರಿಸಿಕೊಂಡು ಹೋಗಲು ಅವಕಾಶ ಮಾಡಿದ್ದಾರೆ. ಸಹಕಾರ ಇಲಾಖೆಯವರು ಇದರ ಮೇಲೆ ಒಂದು ಇನ್ಸ್‌ಪೆಕ್ಷನ್ ನೋಟ್ ಕೊಟ್ಟಿದ್ದಾರೆ.1990ರಿಂದ1994ರವರೆಗೆ ಹಾಪ್‌ಕಾಮ್ಸ್‌ನಲ್ಲಿ ಆಡಿಟ್ ಆಗಿಲ್ಲ. ಅಂದರೆ 4 ವರ್ಷಗಳ ಕಾಲ ಆಡಿಟ್ ಆಗಿಲ್ಲ. ಇಂಥ ಒಂದು ಸಣ್ಣ ಸಂಸ್ಥೆಯಲ್ಲಿ 880 ಜನ ದಿನಗೂಲಿ ನೌಕರರಿದ್ದಾರೆ. ಶಾಸನಬದ್ಧವಾಗಿ ಕನ್‌ಫರ್ಮ್ ಆಗಿರುವಂಥವರು 60-62 ಜನ ಮಾತ್ರ ಯಾರ ತೆವಲಿಗೆ ಇವರನ್ನೆಲ್ಲಾ ಸೇರಿಸಿಕೊಂಡಿರಿ? ಯಾರಪ್ಪನ ಮನೆ ಆಸ್ತಿ ಎಂದು ನೀವು ಇವರನ್ನೆಲ್ಲಾ ಸೇರಿಸಿಕೊಳ್ಳುತ್ತೀರಿ? ಈ ರಾಜ್ಯ ನಿಮ್ಮದೇ? ರೈತರು ಅಂದರೆ ಸಪ್ಲೈ ಮಾಡುವವರಿಗೆ ಇದರಲ್ಲಿ ಅಧಿಕಾರ ಇಲ್ಲವೇ? ಇವರಿಗೆ ಇಷ್ಟ ಬಂದವರಿಗೆ ಕೆಲಸ ಕೊಡುತ್ತಾರೆ. ಉಪಾಧ್ಯಕ್ಷರೇ, ತಮಗೆ ನೋಟ್ಸ್‌ಅನ್ನು ಕಳುಹಿಸುತ್ತೇನೆ, ಎಸ್.ಎಸ್.ಎಲ್.ಸಿ ಪಾಸ್ ಮಾಡದೇ ಇರುವವನು ಇವತ್ತು ಹಾಪ್‌ಕಾಮ್ಸ್‌ನಲ್ಲಿ ಅಕೌಂಟ್ಸ್ ಸೂಪರಿಂಟೆಂಡೆಂಡ್ ಆಗಿದ್ದಾನೆ. ಈ ಮಾಹಿತಿ ನಾನು ಹೇಳುತ್ತಿರುವುದಲ್ಲ, ರಿಜಿಸ್ಟ್ರಾರ್ ಆಫ್ ಕರ್ನಾಟಕ ಇವರು ಕೊಟ್ಟಿರುವುದು. ಈ ರೀತಿ 8 - 9 ಜನ ಎಸ್.ಎಸ್.ಎಲ್.ಸಿ.ಯನ್ನು ಪಾಸ್ ಮಾಡದೇ ಇದ್ದರೂ ಅಲ್ಲಿ ನೌಕರರಾಗಿದ್ದಾರೆ. ಶ್ರೀಮಾನ್ ನಂದಗೋಪಾಲ್, ಮಳಿಗೆವಾರು ಲೆಕ್ಕಪತ್ರ ಸಹಾಯಕರು, ಎಸ್.ಎಸ್.ಎಲ್.ಸಿ. ಆಗಿಲ್ಲ, ಇವರಿಗೆ 1900 ರಿಂದ 3700 ರವರೆಗೆ ಮೂಲವೇತನ (ಬೇಸಿಕ್). ಅದೇ ರೀತಿ ಶ್ರೀಮಾನ್ ಸುಕುಮಾರನ್, ಶ್ರೀಮಾನ್ ಕೃಷ್ಣಪ್ಪ, ಶ್ರೀಮಾನ್

ನಾರಾಯಣಪ್ಪ, ನಂಜಪ್ಪ, ನಂಜುಂಡ ರೆಡ್ಡಿ, ನಾರಾಯಣ, ಹನುಮಂತಪ್ಪ, ರಾಮೇಗೌಡ, ಲಿಂಗಯ್ಯ ಇವರಲ್ಲಿ ಒಬ್ಬರೂ ಎಸ್.ಎಸ್.ಎಲ್.ಸಿ.ಪಾಸ್ ಮಾಡಿಲ್ಲ. ಇವರೆಲ್ಲರೂ 1,040 ರೂಪಾಯಿಗಳಿಗಿಂತ ಮೇಲ್ಪಟ್ಟು ಇರುವ ವೇತನ ಶ್ರೇಣಿಯಲ್ಲಿ ಹಾಪ್‌ಕಾಮ್ಸ್‌ನಲ್ಲಿ ಕೆಲಸ ಮಾಡುತ್ತಿರುವಂಥ ನೌಕರರು. ಇವರಿಗೆಲ್ಲಾ ಯಾರು ದುಡ್ಡು ಕೊಡುತ್ತಾರೆ? ಹಾಪ್‌ಕಾಮ್ಸ್‌ಗೆ ಏನೂ ನಿಯಮಗಳಿಲ್ಲವೇ? ಅದನ್ನು ಈಗ ಮುಚ್ಚಿದ್ದು ಆಯಿತು. ನಿನ್ನೆ ಒಂದು ಫೆಡರೇಷನ್‌ಅನ್ನು ಉದ್ಘಾಟನೆ ಮಾಡಿದರು. ಇನ್ನು ಈ ಹಾಪ್‌ಕಾಮ್ಸ್‌ನ ಕತೆ ಮುಗಿಯಿತು. ಒಂದೊಂದಾಗಿ ಶೀಘ್ರವಾಗಿ ಹೋಗುತ್ತಿರುತ್ತದೆ. ಅದು ಉದ್ಧಾರವಾಗಲಿಲ್ಲವೆಂದರೆ ಮುಂದಕ್ಕೆ ಹೋಗುವುದು ಅಷ್ಟೇ. ನಾವೇ ಬೆಂಗಳೂರು ಬಿಟ್ಟು ಹೋಗಿ ಇನ್ನೊಂದು ಕಡೆ ನೆಲೆಸಿ ಒಳ್ಳೆಯವನು ಎನ್ನಿಸಿಕೊಳ್ಳುವುದು. ನೀವು ಇವತ್ತು ಹಾಪ್‌ಕಾಮ್ಸ್‌ಗೆ ಒಂದು ಸಂಸ್ಥೆಯನ್ನು ಮಾಡುತ್ತಿದ್ದೀರಲ್ಲ. ನಾಳೆ ಹಾಪ್‌ಕಾಮ್ಸ್‌ನ ಸ್ಥಿತಿ ಏನು? ಹಾಪ್‌ಕಾಮ್ಸ್‌ಅನ್ನು ಏನು ಮಾಡಬೇಕೆಂದು ಮಾಡಿದ್ದೀರಿ? ನಿಮ್ಮನ್ನು ನಂಬಿಕೊಂಡು ಹಣ್ಣು, ತರಕಾರಿಗಳನ್ನು ಬೆಳೆದು ಸಪ್ಲೈ ಮಾಡುತ್ತೇನೆ ಎನ್ನುತ್ತಿದ್ದ ರೈತ ಇವತ್ತು ಎಲ್ಲಿಗೆ ಹೋಗಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಒಬ್ಬ ಜವಾಬ್ದಾರಿ ಶಾಸಕರಾಗಿ ಈ ರೀತಿ ಮಾತನಾಡಬಾರದು. HOPCOM is also one of the members of the federation. How can it be a parallel body? ಅಷ್ಟೂ ಗೊತ್ತಿಲ್ಲದೇ, ಬಾಯಿಗೆ ಬಂದ ಹಾಗೆ ಏನೇನೋ ಮಾತನಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಹಾಪ್‌ಕಾಮ್ಸ್ ಫಂಕ್ಷನ್ ಬಗ್ಗೆ ಹೇಳಿ. ಹಾಪ್‌ಕಾಮ್ಸ್ ಈ ರಾಜ್ಯದಲ್ಲಿ 8 ಜಿಲ್ಲೆಗಳಲ್ಲಿ ವ್ಯವಹಾರ ಇಟ್ಟುಕೊಂಡಿದ್ದು, ಮುಂದೆ ಅದನ್ನು ಎಲ್ಲಾ ಕಡೆಗೆ ಎಕ್ಸ್‌ಟೆಂಡ್ ಮಾಡುತ್ತೇವೆ ಎಂದು ಹೇಳಿದಿರಿ. 8 ಜಿಲ್ಲೆಗಳಲ್ಲಿ ರೈತರು ಬೆಳೆಯುತ್ತಿದ್ದಂಥ ಹಣ್ಣು, ತರಕಾರಿಗಳನ್ನು ಮಾರುತ್ತೇವೆ ಎಂದು ಇದನ್ನು ಮಾಡಿದ್ದು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರು ತಿಳಿದುಕೊಳ್ಳಬೇಕು. ಮುಚ್ಚಿ ಹೋಗುತ್ತಿದ್ದ ಆ ಸಂಸ್ಥೆಯನ್ನು ಎರಡೂವರೆ ಕೋಟಿ ರೂಪಾಯಿ ಲಾಭಕ್ಕೆ ತಂದಿದ್ದೇವೆ. ಅದನ್ನು ದಯವಿಟ್ಟು ಹೇಳಿ. ಅದನ್ನು ಏಕೆ ಹೇಳುವುದಿಲ್ಲ. ನಿಮಗೆ ಅದೆಲ್ಲಾ ಗೊತ್ತಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎರಡೂವರೆ ಕೋಟಿ ರೂಪಾಯಿ ಲಾಭ ಮಾಡಿದ್ದೇವೆ ಎಂದು ಇವರು ಹೇಳುತ್ತಿದ್ದಾರೆ. ಆದರೆ ರಿಜಿಸ್ಟ್ರಾರ್‌ರವರು, ಈ ಸಂಸ್ಥೆಯಲ್ಲಿ ಲಾಭ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಗೇಣಿದಾರರಿಂದ ಬರಬೇಕಾದ ಒಂದು ಕೋಟಿ ರೂಪಾಯಿಯನ್ನು ನೀವು ಇನ್ನೂ ವಸೂಲು ಮಾಡಿಲ್ಲ. ಇದನ್ನು ತಾವು ಓದಿ. ದಾಖಲೆಗಳನ್ನು ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ.

ಉಪಾಧ್ಯಕ್ಷರು : ನೀವು ನೀವೇ ಚರ್ಚೆ ಮಾಡುವುದು ಬೇಡ. ತಾವು ಹೇಳುವುದನ್ನು ಹೇಳಿ. ಆಮೇಲೆ ಅವರು ಉತ್ತರ ಕೊಡುವಾಗ ಹೇಳುತ್ತಾರೆ? ನೀವು ಈ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಕೆ.ಎಂ.ಎಫ್‌ನಲ್ಲಿ ಅಧ್ಯಕ್ಷನಾಗಿದ್ದೆ. ಕೆ.ಎಂ.ಎಫ್‌ನಲ್ಲಿ ಬಲ್ಕ್ ವೆಂಡಿಂಗ್ ಬೂತ್ ಇದೆ. ಅದರ ಅಕ್ಕಪಕ್ಕದಲ್ಲಿ ಹಾಪ್‌ಕಾಮ್ಸ್ ಸ್ಟಾಲ್ ಇರಬೇಕು ಎಂದು ಯೋಜನೆ

ಮಾಡುವಾಗ ಓಡಾಡಿರುವವರು ನಾವು. ನಮಗೂ ಕಷ್ಟಸುಖ ಗೊತ್ತಿದೆ. ಆವತ್ತು ಎನ್.ಡಿ.ಡಿ.ಬಿ. ಯವರು ಗ್ರ್ಯಾಂಟ್ ಕೊಡುತ್ತೇವೆ ಎಂದರೆ ಆ ಗ್ರ್ಯಾಂಟನ್ನು ತೆಗೆದುಕೊಂಡು ಇವರು ಕೋಡ್ ಚೇಂಜ್ ಮಾಡಲಿಲ್ಲ. ಎನ್.ಸಿ.ಡಿ.ಸಿ. ಯವರು ಕೊಡುತ್ತೇವೆ ಎಂದರೂ ಆ ದುಡ್ಡನ್ನು ಉಪಯೋಗಿಸಿಕೊಂಡು ಕೋಡ್ ಚೇಂಜ್ ಮಾಡಲಿಲ್ಲ. ಈ ರಾಜ್ಯದ ರೈತರು ಹಾಪ್‌ಕಾಮ್ಸ್ ಅನ್ನು ಕನಸಿನ ಸಾಮ್ರಾಜ್ಯವನ್ನಾಗಿ ಮಾಡಿಕೊಂಡಿದ್ದರು. ಯಾವ ರೀತಿ ರೈತರು 'ಹಾಲನ್ನು ತಂದು ಮಾರುತ್ತಿದ್ದಾರೆ, ಅದೇ ರೀತಿಯಲ್ಲಿ ಇದೂ ಬರುತ್ತದೆ ಎಂದು. ಹಾಪ್‌ಕಾಮ್ಸ್ ಗೆ ಮಾಲು ಕೊಟ್ಟರೆ ಅವತ್ತೇ ನಗದು ಕೊಡುತ್ತೇವೆ ಎಂದರು. ಆದರೆ ಇವತ್ತು 15-20 ದಿವಸಗಳಾದರೂ ಚೆಕ್‌ಗಳನ್ನು ಕೊಡುತ್ತಿಲ್ಲ. ಅವರಲ್ಲಿ ಹಣ ಇಲ್ಲ. ಇವತ್ತು ಹಾಪ್‌ಕಾಮ್ಸ್‌ನಲ್ಲಿ ಕೆಲಸ ಮಾಡುತ್ತಿರುವವರು ಪಕ್ಕದ ಅಂಗಡಿಗಳಿಂದ ಹಣ್ಣು, ತರಕಾರಿಗಳನ್ನು ತಂದು ಅಲ್ಲಿ ಮಾರುತ್ತಿದ್ದಾರೆ. ಮಾತಾಡಬಹುದು, ಆದರೆ ಸತ್ಯವನ್ನು ಮುಚ್ಚಿಡುವುದಕ್ಕೆ ಆಗುವುದಿಲ್ಲವಲ್ಲ. ಗೇಣಿದಾರರಿಂದ ಒಂದು ಕೋಟಿ ರೂಪಾಯಿ ಇನ್ನೂ ವಸೂಲಾಗಿಲ್ಲ. ಹಾಪ್‌ಕಾಮ್ಸ್ ಅಂಗಡಿಗಳನ್ನು ನೋಡಿಕೊಳ್ಳಿ ಎಂದು ಕೊಟ್ಟಿರುವವರನ್ನು ನೀವು ಖಾಯಂ ಮಾಡುವುದಕ್ಕೆ ಹೊರಟಿದ್ದೀರಿ. ನಿಮ್ಮ ಹತ್ತಿರ ಇರುವ ಬೋರ್ಡ್ ಎಂಥಾದ್ದು, ನೀವು ಏನು ಕೆಲಸ ಮಾಡಿದ್ದೀರಿ ಎನ್ನುವುದನ್ನು ರಿಪೋರ್ಟ್ ತೆಗೆದುಕೊಂಡು ಓದಿ. ನಾವು ಸುಮ್ಮನೆ ನಿಂತುಕೊಂಡು ಮಾತನಾಡಲು ಇಲ್ಲಿಗೆ ಬಂದಿಲ್ಲ. ಅದನ್ನು ಬಿಟ್ಟು ಹಾಪ್‌ಕಾಮ್ಸ್ ಅನ್ನು ಲಾಭಕ್ಕೆ ತಂದಿದ್ದೇವೆ ಎಂದು ಹೇಳುತ್ತೀರಿ. ಏನು ಲಾಭಕ್ಕೆ ತಂದಿದ್ದೀರಿ? ನೀವು ಹಾಪ್‌ಕಾಮ್ಸ್ ಮೂಲಕ ಸಿಂಗಾಪೂರ್‌ಗೆ ಬೇರೆ ಯಾರಿಗೋ ಮಾರಿಸಿದಂಥ ಹಣ್ಣಿನ 30 ರಿಂದ 40 ಲಕ್ಷ ರೂಪಾಯಿ ಅಕೌಂಟ್ ಇವತ್ತು ಇಲ್ಲ. ಇದಕ್ಕೆ ಏನು ಹೇಳುತ್ತೀರಿ ಯಾರ ಮೂಲಕ ಮಾರಿಸಿದಿರಿ, ಅವರ ಅಡ್ರಸ್‌ಅನ್ನು ಕೊಡುತ್ತೀರಾ? ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಕುಳಿತುಕೊಂಡು ಊಟ ಮಾಡಿಬಿಟ್ಟು, ಅವನಿಗೆ ಏಜೆನ್ಸಿ ಕೊಟ್ಟು ಭಾರತದ ಹೊರಗಡೆಗೆ 30 ಲಕ್ಷ ರೂಪಾಯಿ ಹಣ್ಣು, ತರಕಾರಿಗಳನ್ನು ಮಾರಿಸಿದ್ದು, ಇವತ್ತು ಹಾಪ್‌ಕಾಮ್ಸ್ ಗೆ ಅದು ರಿಕವರಿಯಾಗಿಲ್ಲ. ಇದಕ್ಕೆ ಯಾರು ಜವಾಬ್ದಾರರು? ನಾನು ಜವಾಬ್ದಾರನೇ? ಅಂದರೆ ಹಾಪ್‌ಕಾಮ್ಸ್ ನಲ್ಲಿ ಜವಾಬ್ದಾರಿಯಿಲ್ಲವೇ? ನೋವಿನ ಸಂಗತಿ ಎಂದರೆ, ಕನಿಷ್ಟವೆಂದರೆ ಕೃಷಿ ಕಸುಬಿನಲ್ಲಿ ಉಪ ಕಸುಬುಗಳಿಂದ ನಾವು ಬದುಕಬಹುದಾಗಿತ್ತು. ಉಪಕಸುಬುಗಳು ನೆರವಿಗೆ ಬಂದಿದ್ದರೆ ರೈತರು ಉಸಿರಾಡುವುದಕ್ಕಾದರೂ ಆಗುತ್ತಿತ್ತು. ತೋಟಗಾರಿಕೆ ಮತ್ತು ಪಶುಸಂಗೋಪನೆಯಲ್ಲಿ ಕೋಳಿ, ಕುರಿ ಸಾಕಣೆಯಾದರೂ ನಮ್ಮ ಜೀವನಕ್ಕೆ ಒಂದು ದಿಕ್ಕನ್ನು ತೋರಿಸಬಹುದು ಎಂದು ತಿಳಿದುಕೊಂಡಿದ್ದೆವು. ಆದರೆ ಎಲ್ಲಾ ಕ್ಷೇತ್ರಗಳೂ ಹೀಗೆ ಆಗುತ್ತಾ ಹೋದರೆ, ನಾಳೆ ಈ ರಾಜ್ಯದ ಗತಿ ಏನು? ಯಾರನ್ನು ಉದ್ಧಾರ ಮಾಡುವುದಕ್ಕಾಗಿ ನಾವು ರಾಜಕೀಯ ಮಾಡುತ್ತೇವೆ. ಇವತ್ತು ಶೇ.66-80ರಷ್ಟು ಜನರನ್ನು ಕತ್ತಲೆಯಲ್ಲಿಟ್ಟು, ಆ ಜನಗಳಿಗೆ ಯಾವುದೇ ಯೋಜನೆ ಕೊಡದೆ, ಅವರ ಮುಖವನ್ನು ನೋಡಿ, ನೀನು ಒಳ್ಳೆಯ ಚಿತ್ರ ಬರೆಯಲು ಲಾಯಕ್ಕಾಗಿರುವೆ, ಹೊಟ್ಟೆ ಒಳಕ್ಕೆ ಹೋಗಿದೆ, ಮೂಳೆ ಕಾಣುತ್ತಿದೆ, ಚಿತ್ರಕ್ಕೆ ನ್ಯಾಷನಲ್ ಅವಾರ್ಡ್ ಬರುತ್ತದೆ ಎಂದು ಹೇಳಿಕೊಂಡು ಮಾರ್ಗದರ್ಶನ ಮಾಡಲು ನಾವು ಬದುಕಿದ್ದೇವೆಯೇ? ಇದಕ್ಕೆ ಸ್ವಲ್ಪ ಕನ್‌ಸರ್ನ್ ಇರಬೇಕು. ಏನಾದರೂ ಹೇಳಬೇಕಾದರೆ ಜವಾಬ್ದಾರಿ ಇರಬೇಕು. ಡ್ರಿಪ್ ಇರಿಗೇಷನ್ ಮಾಡಿಸಿದವರದ್ದು ಎಷ್ಟು ಕೊಟ್ಟಿದ್ದಾರೆ? ಇವತ್ತು ಡ್ರಿಪ್ ಇರಿಗೇಷನ್ ಮಾಡಿಸಿದವರು ಏನಾಗಬೇಕು.

ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ, ತೋಟಗಾರಿಕೆ ಇಲಾಖೆಯನ್ನು ಸನ್ಮಾನ್ಯ ಜಯಕುಮಾರ್‌ರವರು ಸರಿ ಮಾಡಬೇಕೆಂದರೆ, ರೈತರು ಪ್ರದರ್ಶನದಲ್ಲಿ ಬದುಕಿಲ್ಲ, ಪ್ರದರ್ಶನ ಮಾಡಿಕೊಂಡು ನಾವು ಬಹಳ ಚೆನ್ನಾಗಿದ್ದೇವೆ ಎಂದರೆ ಆಗುವುದಿಲ್ಲ. ಒಂದು ಫೆಡರೇಷನ್ ಮಾಡಬೇಕಾದರೆ ಏನು ನಿಯಮಗಳಿವೆ? Basically here should be socieites and they should become members of the federation. ಜಿಲ್ಲಾ ಮಟ್ಟದಲ್ಲಿ ಒಕ್ಕೂಟಗಳಿರಬೇಕು. ಅಲ್ಲಿಂದ ಫೆಡರೇಷನ್‌ಗೆ ಸದಸ್ಯರು ಬರಬೇಕು. ನೀವು ಯಾವ ಹಾರ್ಟಿಕಲ್ಚರ್ ಸೊಸೈಟಿಯನ್ನು ಮಾಡಿದ್ದೀರಿ? Which society is a member of your federation? ಈ ರಾಜ್ಯದಲ್ಲಿ ಎಷ್ಟು ಸೊಸೈಟಿಗಳಿವೆ? ಯಾವ ಯಾವ ಗ್ರಾಮದಲ್ಲಿ ಮಾಡಿದ್ದೀರಿ? who are the members of that federation? ಫೆಡರೇಷನ್ ಅನ್ನು ಉದ್ಘಾಟನೆ ಮಾಡುವುದು ಅಂದರೆ ಏನರ್ಥ? ಅಧಿಕಾರಿಗಳು ಒಂದೊಂದು ತಾಲ್ಲೂಕಿಗೆ ಒಂದೊಂದು ಬಸ್ ಕಳುಹಿಸಿ ಜನರನ್ನು ಕರೆದುಕೊಂಡು ಬಂದರೆ ಅವರೆಲ್ಲಾ ಫೆಡರೇಷನ್ನಿನ ಸದಸ್ಯರಾಗುತ್ತಾರೆಯೇ? ಫೆಡರೇಷನ್ ಕಾನ್ಸೆಪ್ಟ್ ನಿಮಗೆ ಗೊತ್ತೇ? ಅದಕ್ಕೆ ಯಾರು ಸ್ವಾಮಿ ಸದಸ್ಯರಾಗಬೇಕು? ಬೇಸಿಕಲಿ ಅಲ್ಲಿ ಒಂದು ಸೊಸೈಟಿ ಆಗಬೇಕು. ಫೆಡರೇಷನ್ನಿಗೆ ಜನ ಡೈರೆಕ್ಟಾಗಿ ಮೆಂಬರ್ ಆಗಲು ಬರುವುದಿಲ್ಲ. A society has to be enrolled as member of the federation. ಜಿಲ್ಲಾಮಟ್ಟದಲ್ಲಿರುವ ಸಂಸ್ಥೆಗಳು ಅಥವಾ ತಾಲ್ಲೂಕು ಮಟ್ಟದಲ್ಲಿರುವ ಸಂಸ್ಥೆಗಳು ಅಥವಾ ಗ್ರಾಸ್ ರೂಟ್‌ನಲ್ಲಿರುವ ಸೊಸೈಟಿಗಳು ಫೆಡರೇಷನ್ನಿನ ಸದಸ್ಯರಾಗಬೇಕು. ಅಲ್ಲಿ ಸದಸ್ಯರಾಗುವುದು ಜನರಲ್ಲ. ಜನರು ಸದಸ್ಯರಾದರೆ, it will never be a federation. I will have to be called as a society. ನಾವೂ ಸಹ ಕೆಲಸ ಮಾಡಿರುವವರು. ಎಷ್ಟು ಸೊಸೈಟಿಗಳಿವೆ ಎನ್ನುವುದನ್ನು ತಾವು ಹೇಳಬೇಕು. ಇನ್ನು ಫ್ಲೋರಿಕಲ್ಚರ್, ಅದು ಎಲ್ಲಿಗೆ ಬಂದಿದೆ. ಫ್ಲೋರಿಕಲ್ಚರ್‌ಅನ್ನು ಏನು ಮಾಡಿದ್ದೀರಿ? ಬೈರೇಗೌಡರಿಗಾದರೂ ಬಿಟ್ಟಿದ್ದರೆ ಅವರು ಕೆಲಸ ಮಾಡುತ್ತಿದ್ದರು. ಅದರಲ್ಲಿ ಅವರಿಗೆ ಆಸಕ್ತಿ ಇತ್ತು. ಬೈರೇಗೌಡರೇ, ನೀವು ಫ್ಲೋರಿಕಲ್ಚರ್ ಡೆವಲಪ್ ಮಾಡುತ್ತೀರಿ ಎಂದು ನಾನು ಸತ್ಯವಾಗಿ ತಿಳಿದುಕೊಂಡಿದ್ದೆ. ನಾನು ಅನೆಸ್ಟ್ ಆಗಿ ಮಾತನಾಡುತ್ತಿದ್ದೇನೆ. ನಮ್ಮ ದುರಾದೃಷ್ಟವೆಂದರೆ ಇವತ್ತು ಆ ಸ್ಕೀಂ ವೈಂಡ್ ಅಪ್ ಆಯಿತು. Karnataka is best suited for flower production. ಆ ಸ್ಕೀಂ ಎಲ್ಲಿಗೆ ಹೋಯಿತು? ಇವತ್ತು ಫ್ಲೋರಿಕಲ್ಚರ್ ಕ್ಷೇತ್ರದಲ್ಲಿ ಏನು ಮಾಡಿದ್ದೀರಿ? ಕೇವಲ ಭಾಷಣ ಮಾಡಿದರೆ ಆಗುತ್ತದೆಯೇ? ಇದಕ್ಕೆ 6-7 ಲಕ್ಷ ರೂಪಾಯಿ ಸಬ್ಸಿಡಿ ಕೊಟ್ಟಿದ್ದೀರಿ. ಇವತ್ತು ಯಾರಾದರೂ ಒಂದು ಕೆ.ಜಿ. ಹೂವನ್ನು ಎಕ್ಸಪೋರ್ಟ್ ಮಾಡುತ್ತಿದ್ದಾರೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) : ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಕರ್ನಾಟಕ ಇವತ್ತು ಇಡೀ ದೇಶದಲ್ಲಿ ಹೂವಿನ ಬೆಳವಣಿಗೆ ಮತ್ತು ಹೊರ ದೇಶಗಳಿಗೆ ರಫ್ತು ಮಾಡುವುದರಲ್ಲಿ ಮೊದಲನೇ ಸ್ಥಾನದಲ್ಲಿದೆ. ಕಳೆದ ವರ್ಷ ಕೇವಲ 14-15 ಹೂವನ್ನು ಬೆಳೆಸುವ ತೋಟಗಳಿದ್ದರೆ, ಇವತ್ತು 34 ಇವೆ ಮತ್ತು ವರ್ಷವರ್ಷಕ್ಕೆ ಹೆಚ್ಚುಕಡಿಮೆ ಶೇ.50 ರಿಂದ 100ರಷ್ಟು ಉತ್ಪತ್ತಿ ಜಾಸ್ತಿಯಾಗುತ್ತಿದೆ. ಇವತ್ತು ಜಪಾನ್ ಮಾರುಕಟ್ಟೆಯಲ್ಲಿ ನಮ್ಮ ಕರ್ನಾಟಕ ರೋಜಾ ಹೂವುಗಳು ಮೊದಲನೇ ಸ್ಥಾನದಲ್ಲಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪೇಟೆಂಟ್ ಯಾವುದು? ಯಾವ ಯಾವುದನ್ನು ಎಕ್ಸ್‌ಪೋರ್ಟ್ ಮಾಡಲಾಗಿದೆ ಎಂಬ ಬಗ್ಗೆ ನಮಗೆ ಹೇಳಿಕೆ ಕೊಡಿ. ಫ್ಲೋರಿಕಲ್ಚರ್ ಕ್ಷೇತ್ರದಲ್ಲಿ 3 ವರ್ಷಗಳಿಂದ ಏನೇನು ಕಾರ್ಯಕ್ರಮಗಳು ಕರ್ನಾಟಕದಲ್ಲಿ ನಡೆದಿವೆ ಎಂಬ ಬಗ್ಗೆ ಹೇಳಿ. ನಮಗೆ ಮಾಹಿತಿ ಬೇಕಲ್ಲವೇ? ವರದಿಯಲ್ಲಿ ಕೊಟ್ಟಿಲ್ಲ. ಫ್ಲೋರಿಕಲ್ಚರ್ ಫೇಲಾಗಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಫ್ಲೋರಿಕಲ್ಚರ್ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇವೆಂದು ಅವರು ಹೇಳಲಿಲ್ಲ. ಆ ಕಡೆ ಗಮನ ಕೊಡಿ ಎಂದು ಸಚಿವರನ್ನು ಒತ್ತಾಯಿಸುತ್ತಿದ್ದೇನೆ. ನಮಗೆ ಡ್ರಿಪ್ ಇರಿಗೇಷನ್ ಹಣವನ್ನು ತಕ್ಷಣ ತರಿಸಿಕೊಡಬೇಕು. ಇಲ್ಲದಿದ್ದರೆ, ನಾವು ರೈತರ ಹತ್ತಿರವೇ ಹೋಗಬೇಕಾಗುತ್ತದೆ. ತಾವು ಇಲ್ಲಿ ಕೊರತೆ ಇಲ್ಲವೆಂದು ಹೇಳಿದ್ದೀರಿ. ಕೊರತೆ ಇದೆ ಅಂದಿದ್ದರೆ ಅವರು ಕಷ್ಟ-ಸುಖಕ್ಕೆ ಭಾಗಿಯಾಗುತ್ತಿದ್ದರು. ಅನಿಮಲ್ ಹಸ್ಬಂಡ್ರಿ ಬಗ್ಗೆ ಮಾತನಾಡಬೇಕಿತ್ತು. ಆದರೆ, ಸಮಯಾಭಾವದಿಂದ ನನ್ನ ಭಾಷಣವನ್ನು ಮುಗಿಸುತ್ತೇನೆ. ವಂದನೆಗಳು.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ಕೃಷಿ, ಪಶು ಸಂಗೋಪನೆ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ ಈ 5 ಇಲಾಖೆಗಳು ಪ್ರಮುಖವಾದ ವಿಷಯಗಳು. ಇವತ್ತು ಪ್ರಕೃತಿದತ್ತವಾಗಿ ಕೃಷಿ ರೈತರಿಗೆ ಮತ್ತು ಸರ್ಕಾರಕ್ಕೆ ಸವಾಲಾಗಿದೆ. ಕೃಷಿಗೆ ಬೆಲೆ ನಿಗದಿ ಮಾಡುವುದಕ್ಕಿಂಥ, ಕೃಷಿ ಕ್ಷೇತ್ರವನ್ನು ಉಳಿಸುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೆಂಬ ಬಗ್ಗೆ ತಾವು ಗಂಭೀರವಾಗಿ ಚಿಂತಿಸಬೇಕು. ನಾವು ಬೀದರ್, ಗುಲ್ಬರ್ಗಾ ಜಿಲ್ಲೆಗಳಿಗೆ ಹೋಗಿ ಸುಮ್ಮನೆ ನೋಡಿ ಬಂದಿದ್ದೇವೆ. ಆದರೆ, ಸನ್ಮಾನ್ಯ ಬೈರೇಗೌಡರವರು ಕೃಷಿ ಕ್ಷೇತ್ರದಲ್ಲಿ ಅನುಭವವಿರುವವರು. ಇನ್ನು ಮೇಲೆ, ಕೃಷಿ ಕ್ಷೇತ್ರವನ್ನು ಚುನಾವಣಾ ರೀತಿಯಲ್ಲಿ ಚಿಂತಿಸಬೇಕು. ಚುನಾವಣೆಯಲ್ಲಿ ಹೇಗೆ ಸೂಕ್ಷ್ಮ ಪ್ರದೇಶವೆಂದು ಗುರುತಿಸುತ್ತಾರೆ. ಅದೇ ರೀತಿ ಇಡೀ ರಾಜ್ಯದಲ್ಲಿರುವ ಬೆಳೆಗಳು ಯಾವ್ಯಾವ ವರ್ಷಗಳಲ್ಲಿ ನಷ್ಟವಾಗಿವೆ ಎಂದು ಚಿಂತಿಸಿ ಗುರುತು ಮಾಡಬೇಕು. ಗುರುತು ಮಾಡಿಕೊಂಡು ಬೆಳೆ ನಷ್ಟವಾಗುವುದಕ್ಕಿಂತ ಮುಂಚೆ ಏನೇನು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದುಕೊಳ್ಳುವ ಬಗ್ಗೆ ಗಂಭೀರವಾಗಿ ಯೋಚಿಸಬೇಕು. ತಾವು ಕೃಷಿ ಕ್ಷೇತ್ರದಲ್ಲಿ ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡಿರುವವರು. ತಮ್ಮ ಕಾಲದಲ್ಲಿ ಈ ತರಹವಾಗುವುದಕ್ಕೆ ಕಾರಣವೇನು? 1992ನೇ ಇಸವಿಯಲ್ಲಿ ಯಾವಾಗ ಗುಲ್ಬರ್ಗಾದಲ್ಲಿ ಮೋಡ ಕವಿದ ವಾತಾವರಣದಲ್ಲಿ ಬೆಳೆ ನಷ್ಟವಾಯಿತು, ಅದನ್ನು ಗುರುತು ಮಾಡಿಕೊಂಡು ನೀವು ಮುನ್ನೆಚ್ಚರಿಕೆ ಕ್ರಮದಲ್ಲಿ ವಾರ್‌ಫುಟಿಂಗ್ ರೀತಿ ಕೆಲಸ ಮಾಡಿದಿರಿ. ತಾವು ದಯವಿಟ್ಟು ಇನ್ನು ಮೇಲೆ ಕೃಷಿ ಕ್ಷೇತ್ರದಲ್ಲಿ ಅರಣ್ಯ ಇಲಾಖೆ, ಮೈನರ್ ಇರಿಗೇಷನ್, ವೈಲ್ಡ್‌ಲೈಫ್‌ನವರೆಲ್ಲರೂ ಸೇರಿ ಕೃಷಿ ಕ್ಷೇತ್ರವನ್ನು ಉಳಿಸುವುದಕ್ಕೇನೇನು ಪ್ಲಾನ್, ಮಾಸ್ಟರ್ ಪ್ಲಾನ್ ಮಾಡಬೇಕೋ, ಅದನ್ನಾದರೂ ಮಾಡಬೇಕು. ಇಲ್ಲದಿದ್ದರೆ, ಕೇವಲ ಯಾವುದೋ ಒಂದು ವರ್ಷದಲ್ಲಿ ಒಂದು ಬೆಳೆ ಬೆಳೆಯುವುದು, ಬೆಳೆ ನಷ್ಟವಾದ ಕೂಡಲೇ ಸದನ ಸಮಿತಿ ಮಾಡುವುದು. ಸದನ ಸಮಿತಿಯವರು ಒಂದು ರಿಪೋರ್ಟ್ ಕೊಡುವುದು. ತಾವೇನೋ ನಾವಿಷ್ಟು ಕೊಡಬಹುದೆಂದು ಮಾತನಾಡುವುದು. ಆದರೆ, ಪೂರ್ಣ ಪ್ರಮಾಣವಾಗಿ ಈಗ ಯೋಚನೆ ಮಾಡಬೇಕು. ಈಗ ಕಳಪೆ ಕೀಟ ನಾಶಕಗಳನ್ನು ಕೊಟ್ಟಿದ್ದೇವೆ. ನಿಮಗೆ ನಿಜವಾಗಿಯೂ ಗೊತ್ತು. ನಾನು ಸರಿಯಾಗಿ ಹೇಳುತ್ತೇನೆ. ತಾವು ಎಕ್ಸ್‌ಪ್ರೆಸ್ ಮಾಡಿದರೆ ರಾಜ್ಯ ಸರ್ಕಾರವೇ ಉಳಿದುಕೊಳ್ಳುವುದಿಲ್ಲ. ಆ ಮಟ್ಟದ ಕಳಪೆ

ಔಷಧಿಗಳ ದಂಧೆ ಅಲ್ಲಿ ನಡೆದಿದೆ. ನಿಮಗೆ ಮಾತ್ರ ಪೂರ್ಣವಾದ ಮಾಹಿತಿ ಇದೆ ಎಂದು ನಾನು ಹೇಳುತ್ತೇನೆ. ಅಷ್ಟೊಂದು ಕಳಪೆ ಕ್ರಿಮಿ ನಾಶಕಗಳನ್ನು ಕೊಟ್ಟು, ರೈತರು ನಾಶವಾಗುವ ಪರಿಸ್ಥಿತಿ ಬಂದಿದೆ. ಅದರ ಮೇಲೊಂದು ಜವಾಬ್ದಾರಿಯ ನಿಯಂತ್ರಣವಿರಬೇಕು. ಕೀಟ ತಜ್ಞರ ಬಗ್ಗೆ ನೀವು ಚರ್ಚೆ ಮಾಡಬೇಕಿಲ್ಲ, ಯಾವಾಗ ಹ್ಯುಮಿನಿಟಿ ಡೆವಲಪ್ ಆಗಿ ಹುಳುಗಳು ನಾಶವಾಗಲಿಲ್ಲ, ಆಗ ಪರತಂತ್ರ ಜೀವಿಗಳನ್ನು ಅಲ್ಲಿ ಬಿಟ್ಟು ಅವು ನಾಶವಾಗುವ ಹಾಗೆ ಮಾಡಬೇಕು. ಸುಮಾರು 8 ವರ್ಷಗಳ ಹಿಂದೆ ಚೈನಾದಲ್ಲಿ ಇದೇ ಪರಿಸ್ಥಿತಿ ಬಂದಿತ್ತು. ಕೊನೆಗೆ, ಒಂದು ವಾರಗಳ ಕಾಲ ಎಲ್ಲ ಶಾಲೆಗಳೂ ರಜೆ ಕೊಟ್ಟು, ಎಲ್ಲ ಜನರನ್ನೂ ಇನ್‌ವಾಲ್ವ್‌ಮೆಂಟ್ ಮಾಡಿಸಿ, ಕೈಯಲ್ಲೇ ಹುಳುಗಳನ್ನು ಸಾಯಿಸಿದರು. ಆದ್ದರಿಂದ, ಕೃಷಿ ಕ್ಷೇತ್ರದಲ್ಲಿ ವೈಜ್ಞಾನಿಕ ಬೆಲೆ ನೀತಿ ಎಷ್ಟು ಮುಖ್ಯವೋ, ಅಷ್ಟೇ ಬೆಳೆಗಳನ್ನೂ ಉಳಿಸಿಕೊಳ್ಳುವುದಕ್ಕೂ ತಾವು ಯೋಚಿಸಬೇಕು. ಅದರಲ್ಲೂ 2 ಭಾಗಗಳಿವೆ. ನೀರಾವರಿ ಪ್ರದೇಶದ ಬೆಳೆಗಳು, ಬಯಲು ಸೀಮೆ ಬೆಳೆಗಳು ಅಂದರೆ ಮಳೆಯಾಧಾರಿತ ಬೆಳೆಗಳು. ಅದರಲ್ಲಿ ಹೆಚ್ಚು ರೋಗಗಳು ಯಾವ ಯಾವುದರಲ್ಲಿ ಹರಡಿರುತ್ತವೆಂದರೆ, ದ್ವಿದಳ ಧಾನ್ಯಗಳಲ್ಲಿ. ನಾವೇ ಹಸಿ ಕಾಳಾದರೆ ಎಷ್ಟು ಚೆನ್ನಾಗಿ ಊಟ ಮಾಡುತ್ತೇವೆ. ಇನ್ನು ಹುಳಗಳಿಗೆ ಒಂದು ರೀತಿ ಹಬ್ಬವಿದ್ದ ಹಾಗೆ. ತಾವು ವಾರ್ ಫುಟಿಂಗ್ ರೀತಿ ಕೆಲಸ ಮಾಡಬೇಕು. ಇಲ್ಲದಿದ್ದರೆ, ಇನ್ನು ಮುಂದೆ ಇನ್ನೂ ಹೆಚ್ಚಿನ ಅಪಾಯ ಅನುಭವಿಸುವ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಇಲ್ಲವಾದರೆ, ಆ ಇಲಾಖೆಯನ್ನೇಕೆ ಇಟ್ಟುಕೊಂಡಿದ್ದೀರಿ? ಕೀಟ ತಜ್ಞರೆಲ್ಲರನ್ನೂ ಏಕೆ ಇಟ್ಟುಕೊಂಡಿದ್ದೀರಿ? ವಿಶ್ವವಿದ್ಯಾನಿಲಯಗಳೇಕೆ? ಸಂಶೋಧನೆ ಏಕೆ? ಆದ್ದರಿಂದ, ದಯವಿಟ್ಟು ತಾವು ಯೋಚಿಸಬೇಕು. ಪರತಂತ್ರ ಜೀವಿಗಳನ್ನು ಕಂಡುಹಿಡಿಯುವ ಸಾಮರ್ಥ್ಯವಿಲ್ಲ. ಆದ್ದರಿಂದ ಕೃಷಿ ಕ್ಷೇತ್ರದ ಬಗ್ಗೆ ತಾವು ಬಹಳ ಗಂಭೀರವಾಗಿ ಯೋಚಿಸಬೇಕು.

ಶ್ರೀ ಸಿ. ಬೈರೇಗೌಡ : ಪ್ರಪಂಚದಲ್ಲಿ ಬಹಳ ಒಳ್ಳೆಯ ವೈದ್ಯರಿದ್ದಾರೆ. ಅಮೆರಿಕಾ ಮತ್ತು ಜರ್ಮನಿ ಮುಂತಾದ ರಾಷ್ಟ್ರಗಳಲ್ಲಿ ದೊಡ್ಡ ದೊಡ್ಡ ವೈದ್ಯರಿದ್ದಾರೆ. ಅಂತಹ ದೇಶಗಳಲ್ಲೂ ಜನ ಸಾಯುವುದು ನಿಂತಿದೆಯೇ? ನೀವು ಇನ್‌ಸೆಕ್ಟಿಸೈಡ್ ಇಲಾಖೆ ಮತ್ತು ವಿಜ್ಞಾನಿಗಳನ್ನೆಲ್ಲ ಏಕೆ ಇಟ್ಟುಕೊಂಡಿದ್ದೀರಿ, ತಡೆಗಟ್ಟಲಿಲ್ಲವೆಂದು ಹೇಳುತ್ತೀರಿ. ಆದರೆ, ಅದೇ ರೀತಿಯಾಗಿ ನಷ್ಟವಾಗಿರುವುದೂ ಗೊತ್ತಿದೆ, ಆದರೆ, ವೈದ್ಯರಿದ್ದಾರೆ ಜನ ಸಾಯುತ್ತಿದ್ದಾರಲ್ಲಾ, ಇದು ಹೇಗೆ? ಹಾಗಾದರೆ, ವೈದ್ಯರೇ ಬೇಡವೆಂದು ಹೇಳಬೇಕೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನು ಬೇಡವೆಂದು ಹೇಳಲಿಲ್ಲ. ಪರ ದೇಶಕ್ಕೂ, ನಮ್ಮ ದೇಶಕ್ಕೂ ಭಾರೀ ವ್ಯತ್ಯಾಸವಿದೆ. ಪರದೇಶದವರು 4-5 ಪರ್ಸೆಂಟ್ ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಪಟ್ಟಿದೆ. ಅವರು ಜವಾಬ್ದಾರಿ ನಿರ್ವಹಣೆ ಮಾಡಿಲ್ಲವೆಂದು ಹೇಳುತ್ತಿದ್ದೇನೆ. ಆ ಜವಾಬ್ದಾರಿಯನ್ನು ನಿರ್ವಹಣೆ ಮಾಡಿಲ್ಲವೆಂಬುದೇ ನನ್ನ ಆಪಾದನೆ. ವಾರ್‌ಫುಟಿಂಗ್ ರೀತಿಯಲ್ಲಿ ಕೀಟದ ಬಗ್ಗೆ ಕೆಲಸ ಮಾಡಬೇಕಾಗಿತ್ತು. ನಮ್ಮಲ್ಲಿ ಉತ್ತಮವಾದ ವಿಜ್ಞಾನಿಗಳಿದ್ದಾರೆ, ಶ್ರೀ ಬೈರೇಗೌಡರು ಬಹಳ ಉತ್ತಮವಾದ ಕೃಷಿ ಮಂತ್ರಿಗಳು. ಆದರೆ, ರೈತರು ಸಾಯಬಾರದಾಗಿತ್ತು. ಬೆಳೆ ನಷ್ಟವಾಗಬಾರದಾಗಿತ್ತು, ಮುನ್ನೆಚ್ಚರಿಕೆ ಕ್ರಮದಲ್ಲಿ ಕೆಲಸ ಮಾಡಬೇಕಾಗಿತ್ತು ಎಂಬುದು ಅಷ್ಟೇ ನಮ್ಮ ಆಪಾದನೆ. ಉದಾಹರಣೆಗೆ, ಬಿತ್ತನೆ

ಬೀಜವನ್ನು ಖಾಸಗಿಯವರಿಗೆ ಕೊಟ್ಟಿದ್ದೀರಿ. ಸರ್ಕಾರದಿಂದ ಕರ್ನಾಟಕದ ಬೀಜ ನಿಗಮ ಮಂಡಲಿ ಇದೆ, ಅದು ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಆದರೆ, ನನ್ನ ಸಲಹೆ ಏನೆಂದರೆ, ಬಹಳ ಜನ ನಿರುದ್ಯೋಗಿ ವಿದ್ಯಾವಂತರು ಬಿಎಸ್ಸಿ(ಎಜಿ), ಎಂಎಸ್ಸಿ(ಎಜಿ) ಮಾಡಿದವರಿದ್ದಾರೆ. ಒಂದು ಜಿಲ್ಲೆ ಅಥವಾ ಒಂದು ತಾಲ್ಲೂಕಿನಲ್ಲಿ ಎಷ್ಟೆಷ್ಟು ಸೀಡ್ಸ್ ಬೇಕು, ಯಾವ್ಯಾವ ಸೀಡ್ಸ್ ಬೇಕೆಂಬುದನ್ನು ಐಡೆಂಟಿಫೈ ಮಾಡಿ. ಒಂದು ಸಮಿತಿ ಮಾಡಿದ ಹಾಗೆ ಮಾಡಿ, ಕೋ-ಅಪರೇಟಿವ್ ಮಿಲ್ ರೀತಿ ಮಾಡಿ, ಬಿತ್ತನೆ ಬೀಜಗಳನ್ನು ಸರಬರಾಜು ಮಾಡುವ ರೀತಿಯಲ್ಲಿ ಮಾಡಿದರೆ ನಿರುದ್ಯೋಗ ಸಮಸ್ಯೆಯೂ ಬಗೆಹರಿಯುತ್ತದೆ. ಆ ಸಬ್ಜೆಕ್ಟ್‌ಗೆ ಸಂಬಂಧಪಟ್ಟಂತೆ ಸಮಿತಿ ಮಾಡಬೇಕು. ಉತ್ತಮವಾದ ಬೀಜಗಳನ್ನು ಸರಬರಾಜು ಮಾಡಿ. ಅದಕ್ಕೋಸ್ಕರ, ಒಂದು ಮಾಸ್ಟರ್‌ಪ್ಲಾನ್ ಮಾಡಬೇಕು. ಒಂದು ಜಿಲ್ಲೆಯಲ್ಲಿ ಯಾವ್ಯಾವ ಬಿತ್ತನೆ ಬೀಜಗಳು ಬೇಕು, ಉತ್ಪಾದನೆ ಮಾಡುವುದಕ್ಕೆ ಎಷ್ಟು ಎಕರೆ ಬೇಕು, ಅದನ್ನು ಯಾವ ರೀತಿಯಾಗಿ ಉತ್ಪಾದನೆ ಮಾಡಬಹುದು ಎಂಬ ಬಗ್ಗೆ ಚಿಂತಿಸಬೇಕು. ಕೋ-ಅಪರೇಟೀವ್ ಮೂವ್‌ಮೆಂಟ್‌ನಲ್ಲಿ ಕಳಪೆ ಬೀಜಗಳನ್ನು ಅವಾಯ್ಡ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮಾಸ್ಟರ್ ಪ್ಲಾನ್ ಮಾಡಿ, ಅದನ್ನು ಇನ್‌ವಾಲ್ವಮೆಂಟ್ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ.

5.40 ಪಿ.ಎಂ

ಮಾರುಕಟ್ಟೆಯಲ್ಲಿ ವೈಜ್ಞಾನಿಕ ಬೆಲೆ ನಿಗದಿ ಮಾಡುವುದರ ಬಗ್ಗೆ ನಿಮ್ಮನ್ನು ಕೇಳಿದರೆ ಇದಕ್ಕೆ ನೀವು ಇದರಲ್ಲಿ ನಮ್ಮದೇನೂ ಇಲ್ಲ, ಎಲ್ಲಾ ಕೇಂದ್ರಸರ್ಕಾರಕ್ಕೆ ಸೇರಿದ್ದುದು ಎನ್ನುವ ಮಾತನ್ನು ಹೇಳುತ್ತೀರಿ. ಉದಾಹರಣೆಗೆ, ತೊಗರಿಬೇಳೆ ನಾಶವಾಗಿದೆ. ತೊಗರಿಬೇಳೆಯ ಬೆಳೆ ಇದ್ದಾಗ ಅದಕ್ಕೆ ಏನು ಬೆಲೆ ಇತ್ತು, ಈಗ ಅದಕ್ಕೇನು ಬೆಲೆ ಇದೆ, ಈಗಲಾದರೂ ಕೂಡ ಇದೇ ಕಡಿಮೆ ಬೆಲೆ ಇದೆ. ತೊಗರಿ ಬೇಳೆಯನ್ನು ಕಡಿಮೆ ಪ್ರಮಾಣದಲ್ಲಿ ಬೆಳೆದಾಗ ಅದಕ್ಕೇನು ಬೆಲೆ ಕೊಡುತ್ತೀರಿ? ನಮಗೆ ಇವತ್ತು ಆಸ್ಟ್ರೇಲಿಯಾದ ಬೇಳೆಯನ್ನು ತರಿಸಿಕೊಂಡು, ಅದನ್ನೇ ಊಟ ಮಾಡುವ ಪರಿಸ್ಥಿತಿ ಬಂದೊದಗಿದೆ. ರೈತರು ಉತ್ತಮವಾದ ಬೆಳೆ ಬೆಳೆದಿದೆ ಅದಕ್ಕೆ ತಕ್ಕಂಥ ಬೆಲೆ ಇಲ್ಲ. ಆಕಸ್ಮಾತ್ ಬೆಳೆದಿರುವ ಬೆಳೆ ಏನಾದರೂ ನಾಶವಾದರೆ ಅದಕ್ಕೂ ಕೂಡ ಸರಿಯಾದ ಬೆಲೆ ಇಲ್ಲ. ನಾವು ವಿದೇಶಿ ಮುಕ್ತ ಮಾರುಕಟ್ಟೆಯಲ್ಲಿ ಯಾವತ್ತು ಆಮುದು, ರಫ್ತು ನೀತಿಗೆ ಸಹಿ ಹಾಕಿದೆವೋ, ಅಂದಿನಿಂದ ರೈತರಿಗೆ ಉತ್ತಮವಾದ ಬೆಲೆ ಕೊಡತಕ್ಕಂಥ ನಿಯಂತ್ರಣ ನಮ್ಮಲ್ಲಿಲ್ಲ. ಇದರಿಂದ, ವಿಶ್ವ ವಾಣಿಜ್ಯ ಸಂಸ್ಥೆಗೆ ನಾವು ಒತ್ತೆ ಇಟ್ಟಂಥ ಪರಿಸ್ಥಿತಿ ಇದೆ. ಇದರಿಂದಾಗಿ, ರೈತರಿಗೆ, ಕೃಷಿ ಕ್ಷೇತ್ರದಲ್ಲಿ ಅಪಾರವಾದ ಅಪಾಯಗಳಾಗುತ್ತವೆ. ಈಗ ನಾವೆಲ್ಲ ಬೀಜಗಳನ್ನು ನಾಶ ಮಾಡಿಕೊಂಡು ಬರುತ್ತಿದ್ದೇವೆ. ತಾವು ಹಿರಿಯರು, ತಮಗೆ ಗೊತ್ತಿರುವ ಹಾಗೆ ನಾನು ಕೃಷಿ ಸಮಿತಿಯ ಸದಸ್ಯನಾಗಿದ್ದಾಗ ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ಎಲ್ಲಾ ಬಿತ್ತನೆ ಬೀಜಗಳನ್ನು ಶೇಖರಣೆ ಮಾಡತಕ್ಕಂಥ ಒಂದು "ಸೀಡ್ಸ್ ಬ್ಯಾಂಕ್" ಮಾಡಬೇಕೆಂದು ಸಲಹೆ ಕೊಟ್ಟಿದ್ದೆ. ನಮ್ಮಲ್ಲಿರುವ ಎರಡು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟೋ ಹಳೆಯ ಬೀಜಗಳಿವೆ. ಇವುಗಳನ್ನು ನಾವು ನಾಶ ಮಾಡಿಕೊಳ್ಳಬಾರದು. ಇವತ್ತು ಭತ್ತವನ್ನು ತೆಗೆದುಕೊಳ್ಳುವುದಾದರೆ, ಬೆಡಗಾರ, ಒಂದೂವರೆ ಭತ್ತ, ರತ್ನಚೂಡಿ, ಬಂಗಾರ ಕಡ್ಡಿ, ಬಂಗಾರ ಸಣ್ಣ, ಇವು ಯಾವು ಭತ್ತಗಳು ಇಂದು ಕಾಣುತ್ತಿಲ್ಲ. ನಮ್ಮ ಅನೇಕ ಹಿರಿಯರು ಉತ್ಪಾದನೆ ಮಾಡಿದಂತಹ ಅನೇಕ ಬೀಜಗಳು ಇಂದು

ಕಾಣಿಸುತ್ತಿಲ್ಲ. ಜಯಾ ಹೈ ಯೀಲ್ಡ್ ಭತ್ತವನ್ನು ಮಾತ್ರ ನಾವಿಂದು ಹಾಕುತ್ತಿರುವುದು. ಇದು ಬಿಟ್ಟರೆ ಬೇರೆ ಯಾವುದೂ ಇಲ್ಲ. ಮಂಡ್ಯದಲ್ಲಿ ಇವತ್ತು ದಡಗಾರ್ ಭತ್ತ ಇಲ್ಲ. ಹೀಗಾಗಿ ಯಾವುದೇ ಬಿತ್ತನೆ ಬೀಜಗಳನ್ನು ಸಂಗ್ರಹಣೆ ಮಾಡುವಂತಹ ಸಾರ್ಮಥ್ಯವಿಲ್ಲ. ಆದ್ದರಿಂದ ಇದಕ್ಕಾಗಿ ತಾವು ಮುಂದೆ ಏನೇನು ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು. ಹಾಗೂ ಮಳೆಯಾಧಾರಿತ ಪ್ರದೇಶಗಳಲ್ಲಿ ರೈತರಿಗೆ ಉಂಟಾಗುವ ಅನ್ಯಾಯದ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಕೂಡ ತಾವು ತಿಳಿಸಬೇಕು. ಮತ್ತೊಂದು ಮುಖ್ಯವಾದ ವಿಚಾರವೇನೆಂದರೆ, ಮಾನ್ಯ ನಾಗೇಗೌಡರು ಇಲ್ಲಿ ಇದ್ದಾರೆ. ನೀರಿನ ಬಳಕೆಯ ವಿಧಾನ ಬಗ್ಗೆ ಒಂದೆರಡು ಮಾತನ್ನು ನಾನು ಹೇಳಬಯಸುತ್ತೇನೆ. ನೀರಾವರಿ ಪ್ರದೇಶಗಳ ರೈತರು ಇಂದು ನೀರಿನ ಬಳಕೆಯ ವಿಧಾನದಲ್ಲಿ ಫೈಲ್ಯೂರ್ ಆಗುತ್ತಿದ್ದಾರೆ. ಇದರಿಂದಾಗಿ ಬಹಳಷ್ಟು ಭೂಮಿಯನ್ನು ಚೌಳು ಮಾಡಿಕೊಂಡು ಭೂಮಿಯ ಪೌಷ್ಠಿಕಾಂಶವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ, ಕೃಷಿ ಇಲಾಖೆ ಮತ್ತು ನೀರಾವರಿ ಇಲಾಖೆಗಳೆರಡೂ ಸೇರಿಕೊಂಡು ಎಲ್ಲಾ ಕಡೆ ಕಾರ್ಯಕ್ರಮವನ್ನು ಹಾಕಿಕೊಳ್ಳುವುದರ ಮೂಲಕ ರೈತರಿಗೆ ತಿಳುವಳಿಕೆ ಕೊಡುವುದರ ಮೂಲಕ ಇಂದು ಭೂಮಿಯನ್ನು ರಕ್ಷಣೆ ಮಾಡಬೇಕಾಗಿದೆ. ಈ ಕೆಲಸವನ್ನು ನಾವಿಂದು ಮಾಡದಿದ್ದರೆ, ದಿನೇ ದಿನೇ ಚೌಳು ಭೂಮಿಯನ್ನು ಹೆಚ್ಚು ಮಾಡುವ ಮಟ್ಟಕ್ಕೆ ಹೋಗುತ್ತೇವೆ. ಉದಾಹರಣೆಗೆ ಹೇಳುವುದಾದರೆ, ರಾಯಚೂರಿನಲ್ಲಿ ಒಂದು ಎಕರೆಗೆ ನಾಲ್ಕು ಚೀಲ ಯೂರಿಯಾ, ಆರು ಚೀಲ ಮಿಕ್ಸರ್, ಹಾಕಿ ಬೆಳೆಯನ್ನು ಬೆಳೆಯುವುದರಿಂದ ಒಟ್ಟಿಗೆ ಹತ್ತು ಚೀಲ ರಾಸಾಯನಿಕ ಗೊಬ್ಬರವನ್ನು ಉಪಯೋಗ ಮಾಡುವುದರಿಂದಾಗಿ ಇಡೀ ರಾಯಚೂರಿನ ಭೂಮಿ ಎಲ್ಲವೂ ಕೂಡ ಸಂಪೂರ್ಣವಾಗಿ ಚೌಳು ಭೂಮಿಯಾಗಿ ಪರಿವರ್ತನೆಯಾಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ವಿಶೇಷವಾಗಿ ಬಯಲು ಸೀಮೆಯ ಹತ್ತಿಯ ಬಗ್ಗೆ ಹೇಳುವುದಾದರೆ, ಈಗಾಗಲೇ ಹತ್ತಿಯ ಡೂಪ್ಲಿಕೇಟ್ ಬಿತ್ತಿಗೆ ಬೀಜಗಳನ್ನು ಕೊಡತಕ್ಕಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಕರ್ನಾಟಕದಲ್ಲಿ ಹತ್ತು ಲಕ್ಷ ಬೆಲೆ ಹತ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಹಾಗೂ ಇದಕ್ಕೊಂದು ಮಾರುಕಟ್ಟೆ ಇದೆ. ಕೇಂದ್ರಸರ್ಕಾರದ ಜೊತೆಯಲ್ಲಿ ಮಾತನಾಡಿ ಕನಿಷ್ಠ ಬೆಲೆಯನ್ನು ನಿಗದಿ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಸದಸ್ಯರು ನೀರು ಬಳಕೆಯ ಬಗ್ಗೆ ಮೂರು ಇಲಾಖೆಗಳು ಜಂಟಿಯಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡು ರೈತರಿಗೆ ತಿಳುವಳಿಕೆ ಕೊಡಬೇಕೆಂದೇನು ಸಲಹೆ ಮಾಡಿದ್ದಾರೆ, ಇದು ಬಹಳ ಮುಖ್ಯವಾಗಿರತಕ್ಕಂಥದ್ದು ಹಾಗೂ ಇಂದಿನ ಪರಿಸ್ಥಿತಿಗೆ ಅವಶ್ಯಕವಾಗಿ ಬೇಕಾಗಿರುವಂಥದ್ದು. ತಾವು ಕೂಡ ಮಲಪ್ರಭಾ ಏರಿಯಾದಿಂದ ಬಂದಿರತಕ್ಕಂಥವರು. ನಮ್ಮ ಡ್ಯಾಮ್‌ಗಳಲ್ಲಿ ಸ್ಟೋರೇಜ್ ವಾಟರ್ ಏನಿದೆ ಇದು ಡ್ರಿಕಿಂಗ್ ವಾಟರ್‌ಗಿಂತ ಬಹಳ ಕಾಸ್ಲಿ ವಾಟರ್. ಈ ಡ್ಯಾಮ್‌ಗಳ ಕನ್‌ಸ್ಟ್ರಕ್ಷನ್ ವೆಚ್ಚ, ವಿತರಣೆ ವೆಚ್ಚ, ಹಾಗೂ ಸಿಸ್ಟಮ್ ಎಕ್ಸ್‌ಪೆಂಡಿಚರ್ ಈ ಎಲ್ಲಾವನ್ನು ಲೆಕ್ಕ ಹಾಕಿದಾಗ ಬಹಳಷ್ಟು ದುಬಾರಿ ನೀರಾವರಿಯ ನೀರಿಗೆ ಆಗುತ್ತದೆ. ಬಳಕೆ ಬಗ್ಗೆ ಹೇಳುವುದಾದರೆ ನನಗೆ ಗೊತ್ತಿರುವ ಹಾಗೆ, ಕನಿಷ್ಠ ಇಪ್ಪತ್ತು ಪರ್ಸೆಂಟ್ ಇನ್‌ಕ್ಲೂಡಿಂಗ್ ಮಲಪ್ರಭಾ, ಘಟಪ್ರಭಾ, ಲೇಟೆಸ್ಟ್ 72ರಿಂದ ಈಚೆಗೆ ಬಂದಿರುವ ಡ್ಯಾಮ್‌ನ ಪ್ರದೇಶಗಳಲ್ಲಿದೆ. ಸುಮಾರು ಐವತ್ತು

ವರ್ಷಗಳಿಂದ ಇರತಕ್ಕಂಥ ತುಂಗಭದ್ರಾ, ಕೆಆರ್‌ಎಸ್, ಹಾಗೂ ನಲವತ್ತು ವರ್ಷಗಳಿಂದ ಭದ್ರಾ ರಿವರ್ ಕೆನಲ್‌ಗಳಲ್ಲಿ ನಲವತ್ತು ಪರ್ಸೆಂಟ್ ಜಾಸ್ತಿ ಹೋಗತಕ್ಕಂಥದ್ದು ಆಗುತ್ತದೆ. ಇದರಿಂದಾಗಿ ನೀರು ಬಳಕೆಗೆ ಬರುವುದಿಲ್ಲ, ಹಾಗೂ ಜಮೀನು ಕೂಡ ಕೆಡುತ್ತದೆ, ವ್ಯವಸಾಯ ಕೂಡ ಆಗುವುದಿಲ್ಲ. ಆದ್ದರಿಂದ, ನಾನೀಗ ಮಾನ್ಯ ಕೃಷಿ ಸಚಿವರಲ್ಲಿ ಮಾತನಾಡಿದೆ. ಇದು ಒಳ್ಳೆಯ ಸಮಯ, ಮಾನ್ಸೂನ್ ಪ್ರಾರಂಭವಾಗುವುದೇ ಜೂನ್‌ಗೆ. ಮೇ, ಜೂನ್, ಜುಲೈ, ಈ ಮೂರು ತಿಂಗಳು ಇಡೀ ರಾಜ್ಯದಲ್ಲಿ ಎಲ್ಲಾ ನೀರಾವರಿ ಪ್ರದೇಶಗಳಲ್ಲಿ ಕೃಷಿ ಇಲಾಖೆ, ನೀರಾವರಿ ಇಲಾಖೆ, ತೋಟಗಾರಿಕೆ ಇಲಾಖೆ, ಈ ಮೂರು ಇಲಾಖೆಗಳು ಜಂಟಿಯಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ನೀರಾವರಿ ಇಲಾಖೆಯವರು ಮುಂದೆ ನಿಂತು, ರೈತರ ಸಮ್ಮೇಳನಗಳನ್ನು ಮಾಡಿ, ನೀರನ್ನು ಯಾವ ರೀತಿ ಬಳಕೆ ಮಾಡಬೇಕು, ಹಾಗೆ ಬಳಕೆ ಮಾಡಿಕೊಂಡು ಜಮೀನು ಫಲವತ್ತತೆಯನ್ನು ಉಳಿಸಿ ಹೆಚ್ಚು ಕೃಷಿ ಮಾಡುವುದಕ್ಕಾಗಿ ಇಡೀ ರಾಜ್ಯದಲ್ಲಿ ಸಮಗ್ರವಾಗಿ ಮೂರು ತಿಂಗಳು ಎಲ್ಲ ಬೇಸಿನ್‌ಗಳಲ್ಲಿ ಮೂವತ್ತೈದು ಪ್ಲಸ್ ಹತ್ತು ಲಕ್ಷ ಹೆಕ್ಟೇರ್ ನೀರಾವರಿ ಮತ್ತು ಒಣ ಬೇಸಾಯ ಇದರಲ್ಲಿ ಸೆಮಿನಾರ್ ಮಾಡತಕ್ಕಂಥ ತೀರ್ಮಾನವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಮೂರು ತಿಂಗಳೆಂದರೆ, ಅಧಿವೇಶನ ಮುಗಿದ ನಂತರ ಕಾರ್ಯಕ್ರಮವನ್ನು ರೂಪಿಸಿ, ನಾನು ಮಾನ್ಯ ಭೈರೇಗೌಡರು, ಮಾನ್ಯ ಜಯಕುಮಾರ್‌ರವರು, ಮೂರು ಜನರು ಇಡೀ ರಾಜ್ಯದಲ್ಲಿ ಮಾಡಿ ಸೆಮಿನಾರ್ ಮಾಡಬೇಕು ಎನ್ನುವುದು ಸರ್ಕಾರದ ತೀರ್ಮಾನವಾಗಿದೆ. ಅಂದರೆ ಎಲ್ಲಾ ಹಳ್ಳಿಗಳಲ್ಲಿ ಅಲ್ಲ. ಅಚ್ಚುಕಟ್ಟು ಪ್ರದೇಶ ಎಲ್ಲಿದೆಯೋ ಅಲ್ಲಿಗೆ ಮಾತ್ರ ಭೇಟಿ ನೀಡುತ್ತೇವೆ. ಅಂದರೆ ಭದ್ರಾದಲ್ಲಿ ಅಚ್ಚುಕಟ್ಟು ಪ್ರದೇಶದ ಮೂರು ಪಾರ್ಟ್, ತುಮಕೂರಿನ ಎರಡು ಪಾರ್ಟ್, ಕೆಆರ್‌ಎಸ್, ಮಲಪ್ರಭಾ, ಘಟಪ್ರಭಾ, ಎರಡು ಪಾರ್ಟ್‌ಗಳಲ್ಲಿ ನಾನು ಮತ್ತು ಮಾನ್ಯ ಉಪಾಧ್ಯಕ್ಷರು ಸೆಮಿನಾರ್ ಮಾಡಿದೆವು. ಬಹುಶಃ ತಮಗೆ ಈ ಬಗ್ಗೆ ಜ್ಞಾಪಕ ಇರಬಹುದು. ಅದು ಬಹಳ ಮಾಸ್ ಸೆಮಿನಾರ್ ಆಯಿತು. ಆದರೆ ಈ ರೀತಿ ಮಾಸ್ ಆಗುವುದು ಬೇಡ, ಸೆಲೆಕ್ಟೆಡ್ ಫಾರ್ಮರ್ಸ್ ತೆಗೆದುಕೊಂಡು ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಮಾಡಿರುವ ಸೆಮಿನಾರ್ ಮಾನ್ಯ ಉಪಾಧ್ಯಕ್ಷರಿಗೆ ನೆನಪಿಲ್ಲ.

ಉಪಾಧ್ಯಕ್ಷರು : ಹಾಗೇನೂ ಇಲ್ಲ ಮಾಡಿದ್ದೇವೆ.

ಶ್ರೀ ಕೆ.ಎನ್.ನಾಗೇಗೌಡ : ಸೆಮಿನಾರ್ ಆದ ಮೇಲೆ ಮಲಪ್ರಭಾ, ಘಟಪ್ರಭಾ ಏರಿಯಾ ಕೃಷ್ಣಾ ಎಂದು ಕಾಂಗ್ರೆಸ್ ಸರ್ಕಾರದಲ್ಲಿ ಕರೆದಿರಲಿಲ್ಲ. ಸೆಮಿನಾರ್ ಮಾಡಿ ಹೋದ ವರ್ಷ ಸುಮಾರು ನೂರಾಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಸಿದರು. ಈ ವರ್ಷ ಇದಕ್ಕಾಗಿ ನೂರಾ ಇಪ್ಪತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದು ಸಮಿನಾರ್ ಅವರ ಜವಾಬ್ದಾರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಮಾರು ಮೂವತ್ತು ವರ್ಷಗಳಿಂದ ಕಾಂಗ್ರೆಸ್‌ನಲ್ಲೇ ಇದ್ದು ಈ ಮಾತನ್ನು ಹೇಳಿದರೆ ಹೇಗೆ? ಈ ನ್ಯೂಲಿ ಕನ್‌ವರ್ಟೆಡ್ ಇರುತ್ತಾರಲ್ಲ, ಅವರು ಬಲು ಡೇಂಜರ್.

(ನಗು)

ಶ್ರೀ ವಾಟಾಳ್ ನಾಗರಾಜ್ : ಅವರು ಹೊಳೆ ದಾಟಿದ ಮೇಲೆ ದೋಣಿ ಏಕೆ?

(ನಗು)

ಶ್ರೀ ಕೆ.ಎಸ್. ನಾಗೇಗೌಡ : ದೋಣಿಯಲ್ಲಿ ಹೋದವನು ನಾನಾ ಅಥವಾ ನನ್ನನ್ನು ಪೂರ್ಣವಾಗಿ ಮುಳಗಿಸಿದವರು ಅವರೋ? ನನ್ನನ್ನು ಮುಳುಗಿಸಲಿಕ್ಕೆ ಹೋಗಿ ಅವರೆ ಮುಳುಗಿಸಿಕೊಂಡರು, ಇದು ಮಾನ್ಯ ಸದಸ್ಯರಿಗೆ ಜ್ಞಾಪಕ ಇರಬೇಕಲ್ಲೆ? ನಾನು ಈ ಕಾಂಗ್ರೆಸ್ ಬಿಡಬೇಕೆಂದು ಇಚ್ಛೆಪಟ್ಟವನಲ್ಲ. ಮಾನ್ಯ ಖರ್ಗೆಯವರು ನನ್ನ ಹತ್ತಿರದಲ್ಲಿದ್ದರು. ನನ್ನ ಮುಳುಗಿಸುವುದಕ್ಕೆ ಹೋಗಿ ಅವರೇ ಕೆಟ್ಟರು.

(ನಗು)

ಉಪಾಧ್ಯಕ್ಷರು : ಪುಟ್ಟಣ್ಣಯ್ಯನವರೇ ತಾವು ಮುಗಿಸಿ, ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, ಇನ್ನೇನು ಇಲ್ಲ ಕೇವಲ ಸಲಹೆ ಕೊಡುತ್ತೇನೆ. ಇನ್ನು ವಿಮೆ ಯೋಜನೆ ಬಗ್ಗೆ ಹೇಳುವುದಾರೆ, ಈಗಿರತಕ್ಕಂಥ ಬೆಳೆ ವಿಮೆ ಯೋಜನೆಯಿಂದ ಯಾವುದೇ ಉಪಯುಕ್ತತೆ ಇಲ್ಲ. ಸಾಮೂಹಿಕವಾಗಿ ರೈತರು ನಾಶವಾದರೆ ಆಗ ಕಂದಾಯ ಇಲಾಖೆಯವರು ಸರಿಯಾಗಿ ಅಣೇವಾರಿ ಲೆಕ್ಕ ಹಾಕಿದಾಗ ಮಾತ್ರ ಈ ವಿಮಾ ಯೋಜನೆಯಿಂದ ಅನುಕೂಲವಾಗುತ್ತದೆ. ಬೆಳೆ ವಿಮೆ ಯೋಜನೆಯಲ್ಲಿ ಒಬ್ಬ ರೈತ ತನ್ನ ಪರಿಶ್ರಮದಿಂದಾಗಿ ಮಾಡಿರುವ ಬೇಸಾಯದಲ್ಲಿ ನಾಶವಾದಂಥ ಸಮಯದಲ್ಲಿ ಆ ವ್ಯಕ್ತಿಗೆ ಆ ಬೆಳೆಯಲ್ಲಿ ಏನು ಲಾಭಾಂಶ ಬರುತ್ತಿತ್ತೋ ಮತ್ತು ಏನು ಖರ್ಚಾಗುತ್ತಿತ್ತೋ ಆ ವಿಚಾರದ ಆಧಾರದ ಮೇಲೆ ಈ ಬೆಳೆ ವಿಮೆ ಯೋಜನೆಯನ್ನು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಈ ಯೋಜನೆಯಿಂದ ಏನೂ ಪ್ರಯೋಜನವಿರುವುದಿಲ್ಲ. ಇಂಡಿವಿಜ್ಯುಯಲ್ ರೈತರಿಗೆ ಏನಾದರೂ ಅನುಕೂಲವಾಗುವ ರೀತಿಯಲ್ಲಿ ಈ ಯೋಜನೆ ಇದ್ದರೆ ನಾವು ಹಣ ಕಟ್ಟುವುದಕ್ಕೂ ಕೂಡ ಅನುಕೂಲವಾಗುತ್ತದೆ. ಯಾವ ರೈತರು ದುರುದ್ದೇಶ ಇಟ್ಟುಕೊಂಡು ವ್ಯವಸಾಯ ಮಾಡುವುದಿಲ್ಲ. ಆಕಸ್ಮಾತ್ ಆಗಿ ರೈತನಿಗೆ ನಷ್ಟ ಉಂಟಾದಾಗ ಅವನಿಗೆ ಯೋಜನೆಯಿಂದ ಹಣ ದೊರಕಿಸಿದಾಗ ಮಾತ್ರ ಈ ವಿಮಾ ಯೋಜನೆಯಿಂದ ಅನುಕೂಲವಾಗುತ್ತದೆ? ಇದರ ಬಗ್ಗೆ ವಿಮಾ ಯೋಜನೆಯವರನ್ನು ಕರೆದು ಮಾತನಾಡಿ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿ ಎಷ್ಟೆಷ್ಟು ಇದೆಯೋ ನನಗೆ ಗೊತ್ತಿಲ್ಲ. ಈ ವಿಮಾ ಯೋಜನೆಯನ್ನು ಹೊಸ ರೀತಿಯಲ್ಲಿ ಬದಲಾವಣೆ ಮಾಡುವ ರೂಪದಲ್ಲಿ ತಾವು ಕೆಲಸ ಮಾಡಬೇಕು. ಇವತ್ತು ತಾವು ಸಬ್ಸಿಡಿ ರೂಪದಲ್ಲಿ ಟ್ರ್ಯಾಕ್ಟರ್ ಮತ್ತು ಪವರ್ ಟಿಲ್ಲರ್ ಅನ್ನು ರೈತರಿಗೆ ಕೊಡುತ್ತೀರಿ. ಆದರೆ ಇದರ ಸಂಖ್ಯೆ ತಾವು ಜಾಸ್ತಿ ಮಾಡಬೇಕು, ಟ್ರ್ಯಾಕ್ಟರ್ ತೆಗೆದುಕೊಳ್ಳಬೇಕಾದರೆ ಮೂವತ್ತು ಹೆಚ್‌ಪಿ ತೆಗೆದುಕೊಂಡರೆ ಮಾತ್ರ ಕೊಡುತ್ತೇವೆ ಎನ್ನುವಂತಹ ಒಂದು ಕಂಡೀಷನ್ ಅನ್ನು ಹಾಕಿದ್ದೀರಿ. ಅದರ ಬದಲಾಗಿ ಐವತ್ತು ಹೆಚ್‌ಪಿ ತೆಗೆದುಕೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಡಿ.

ಇನ್ನು ಮೈನರ್ ಇರಿಗೇಶನ್‌ನಲ್ಲಿ ತಾವು ಹೇಳಿದ ಹಾಗೆ, ಅಂತರ್ಜಲ ಪೂರ್ಣವಾಗಿ ನಾಶವಾಗಿದೆ. ಅಂತರ್ಜಲ ನಾಶವಾಗಿರುವುದಕ್ಕೆ ತಾವು ಚೆಕ್ ಡ್ಯಾಮ್, ಪಿಕ್‌ಅಪ್ಸ್ ಮತ್ತು ಬದ

ಕಟ್ಟುವ ಕಾರ್ಯಕ್ರಮಗಳನ್ನು ಬಯಲು ಸೀಮೆಯಲ್ಲಿ ಮಾಡಿದ್ದೀರಿ. ಆದರೆ, ಮೊದಲು ಪೂರ್ಣವಾಗಿ ಒಂದು ಜಿಲ್ಲೆಯನ್ನು ನೀವು ಸ್ಯಾಂಪಲ್ ಆಗಿ ತೆಗೆದುಕೊಳ್ಳಿ. ತಾವು ಕೆರೆಯ ಹೂಳನ್ನು ತೆಗೆಸಿದ್ದೀರಿ, ಅದನ್ನು ನಾವು ನೋಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇದು ಬಹಳ ಮುಖ್ಯವಾದದ್ದು, ಅದನ್ನು ನಾವು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಬೇರೆ ಮಾತು ಇಲ್ಲ. ಇವತ್ತು ಕರ್ನಾಟಕದಲ್ಲಿ 50 ಸಾವಿರ ಕೆರೆಗಳಿದ್ದರೂ ಕೂಡ ಎರಡು ಸಾವಿರ ಟಿ.ಎಂ.ಸಿ. ನೀರನ್ನು ಕೊಡುವುದಕ್ಕೂ ಸಹ ಬರುವುದಿಲ್ಲ. ಸ್ಯಾಟಲೈಟ್ ಮೂಲಕ ಪರೀಕ್ಷೆ ಮಾಡಿದಾಗ ಅಂತರ್ಜಲ ಕಡಿಮೆಯಾಗುತ್ತಿದ್ದುದು ಕಂಡು ಬಂದಿದೆ. ಈಗಾಗಲೇ ಬೋರ್‌ವೆಲ್‌ನಲ್ಲಿ ನೀರು ಸಹ ಕಡಿಮೆಯಾಗುತ್ತಿದೆ. ಇದಕ್ಕೋಸ್ಕರ ನಬಾರ್ಡಿನಿಂದ ಹೆಚ್ಚು ಸಹಾಯವನ್ನು ಪಡೆಯಬೇಕು, ಇವತ್ತು ಮುಖ್ಯವಾಗಿ ಉತ್ತರ ಕರ್ನಾಟಕದ ಬೀದರ್ ಮತ್ತು ಗುಲ್ಬರ್ಗಾಕ್ಕೆ ಹೋಗಿ ನೋಡಿದಾಗ ಅಲ್ಲಿ ಒಂದು ಕೆರೆಯೂ ಸಹ ಇಲ್ಲ. ಇವತ್ತು ಅಲ್ಲಿ ಎಷ್ಟೋ ಕೆರೆಗಳನ್ನು ಮಾಡಬಹುದಿತ್ತು. ಸೈಂಟಿಫಿಕ್ ಆಗಿ ನಮ್ಮಂಥವರೇ ಯೋಜನೆ ಮಾಡುವಾಗ ಇಲಾಖೆಯವರು ಎಷ್ಟು ಜವಬ್ದಾರಿಯಾಗಪಿ ಈ ಕೆಲಸ ಮಾಡಬೇಕಾಗುತ್ತದೆ. ಇವತ್ತು ಯಾವುದೇ ಸರ್ಕಾರ ಬಂದರೂ ಸಹ ಇದಕ್ಕೋಸ್ಕರ ಕೆಲಸವನ್ನು ಮಾಡಬೇಕು. ಇವತ್ತು ಅಲ್ಲಿ ಹಕ್ಕಿ-ಪಕ್ಷಿಗಳು ಕುಳಿತುಕೊಳ್ಳುವುದಕ್ಕೆ ಒಂದೂ ಗಿಡ-ಮರಗಳು ಇಲ್ಲ. ಇವತ್ತು ಬೆಳೆ ನಾಶವಾಗಿದೆ ಎಂದು ಮಾತನಾಡುಕೊಳ್ಳುತ್ತೇವೆ, ಇದಕ್ಕೆ ಕಾರಣ ವೈಲ್ಡ್ ಲೈಫ್. ನಾನು ಇವತ್ತು 8 ಎಕರೆಗೆ ತರಣೆಕಾಳು ಹಾಕಿದ್ದೇನೆ. ಇದಕ್ಕೆ ಕೋಟ್ಯಾಂತರ ಅವರೇ ಹುಳುಗಳು ಬಿದ್ದಿತ್ತು. ಇದಕ್ಕೆ ಔಷಧಿ ಹೊಡೆಯಬೇಕೆಂದು ಇದ್ದೆ, ಆದರೆ ಬರೀ ಐದು ದಿವಸಗಳಲ್ಲಿ ಗುಬ್ಬಚ್ಚಿಗಳು ಒಂದು ಹುಳುವನ್ನು ಬಿಡದೆ ತಿಂದು ಹಾಕಿದ್ದವು. ಇವತ್ತಿನ ದಿವಸ ವೈಲ್ಡ್ ಲೈಫ್ ಬಹಳ ಮುಖ್ಯವಾದದ್ದು. ಇವತ್ತು ಇಡೀ ದೇಶದಲ್ಲಿ ಸುಮಾರು 1,200 ತರಹ ಹಕ್ಕಿ-ಪಕ್ಷಿಗಳ ಜಾತಿ ಇರಬಹುದು. ಆದರೆ, ಅವುಗಳೆಲ್ಲ ಇವತ್ತು ಎಲ್ಲಿದೆ? ನಮ್ಮ ದೇಶದಲ್ಲಿರತಕ್ಕಂಥ ಹಕ್ಕಿ-ಪಕ್ಷಿಗಳು ಜಾತಿಗಳ ಸಂಖ್ಯೆಯನ್ನು ಯಾವುದೋ ಒಂದು ಪುಸ್ತಕದಲ್ಲಿ ಓದಿದ್ದೇನೆ. ಅಂದರೆ ಸುಮಾರು 1200 ರಿಂದ 1500 ಜಾತಿ ಪಕ್ಷಿಗಳು ಇರಬಹುದು. ಆದರೆ ಇವತ್ತು ಹಕ್ಕಿ-ಪಕ್ಷಿಗಳೇ ಇಲ್ಲ. ಇವತ್ತು ಬೀದರ್ ಮತ್ತು ಗುಲ್ಬರ್ಗದಲ್ಲಿ ನೋಡಿದರೆ ಒಂದೂ ಸಹ ಸಿಗುವುದಿಲ್ಲ. ಹಕ್ಕಿ-ಪಕ್ಷಿಗಳನ್ನು ಬಹಳ ದೂರ ಹೋಗಿ ನೋಡಬೇಕಾಗಿಲ್ಲ, ಉದಾಹರಣೆಗೆ, ಹಾಲು-ತುಪ್ಪ ಮಾಡಿ ತಿಂಡಿಗಳನ್ನು ಇಡುವಾಗ ಬಹಳ ಕಾಗೆಗಳು ಬರುತ್ತಿದ್ದವು. ಆದರೆ ಈಗ ಹಾಲು-ತುಪ್ಪಗಳಿಗೆ ಇಟ್ಟ ತಿಂಡಿಗಳನ್ನು ಕಾಗೆಗಳನ್ನು ನಾವು ಕಾಯುವ ಸ್ಥಿತಿ ಬಂದಿದೆ. ಏಕೆಂದರೆ, ಕಾಗೆ ಬಂದು ತಿಂಡಿಗಳನ್ನು ತಿನ್ನುವವರೆಗೆ ನಮಗೆ ಊಟ ಕೊಡುವುದಿಲ್ಲ, ಅದು ತಿಂಡಿಗಳನ್ನು ತಿಂದ ಮೇಲೆಯೇ ನಮಗೆ ಊಟ ಕೊಡುವುದು, ಇವತ್ತು ಇಂಥ ಸ್ಥಿತಿಗೆ ಬಂದಿದ್ದೇವೆ. ಇವತ್ತಿನ ದಿವಸ ಹಕ್ಕಿ-ಪಕ್ಷಿಗಳ ಪಾತ್ರ ಬಹಳ ಪ್ರಮುಖವಾದದ್ದು. ಆದ್ದರಿಂದ ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಅರಣ್ಯ ಇಲಾಖೆಯನ್ನು ಇನ್ವಾಲ್ವ್ ಮಾಡಿಕೊಂಡು ಇವುಗಳ ಉಳುಯುವಿಕೆಗಾಗಿ ಹೆಚ್ಚು ಪ್ರಯತ್ನವನ್ನು ಮಾಡಬೇಕು. ಇವತ್ತು ಬೀದರ್ ಮತ್ತು ಗುಲ್ಬರ್ಗಾದಲ್ಲಿ ಬೆಳೆ ನಾಶವಾಗಿರುವುದಕ್ಕೆ ಇದು ಸಹ ಮುಖ್ಯವಾದ ಜವಾಬ್ದಾರಿಯಾಗಿದೆ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಬೆಂಗಳೂರಿನಲ್ಲಿ ಪರಿಸರ ಮಾಲಿನ್ಯದಿಂದ ಹಕ್ಕಿಪಕ್ಷಿಗಳೆಲ್ಲಾ ಜಾಗ ಬಿಟ್ಟುಬಿಟ್ಟಿವೆ. ಹಿಂದಿನ ಕಾಲದಲ್ಲಿ ಬೆಳಿಗ್ಗೆ ಆದರೆ ಗುಬ್ಬಚ್ಚಿಗಳು ಬಂದು

ಕೂಗುತ್ತಿದ್ದವು ಮತ್ತು ಪಾರಿವಾಳ, ಗಿಣಿಗಳು ಮನೆ ಹತ್ತಿರ ಬರುತ್ತಿದ್ದವು, ಆದರೆ ಇವತ್ತು ಯಾವುದು ಕಾಣುವುದಿಲ್ಲ. ಇದಕ್ಕೆಲ್ಲ ಮುಖ್ಯ ಕಾರಣ ಹದಗೆಡುತ್ತಿರುವ ಪರಿಸರ ಮಾಲಿನ್ಯ. ಮಾನ್ಯ ಸದಸ್ಯರು ಹೇಳುತ್ತಿರುವುದರಲ್ಲಿ ಸತ್ಯಾಂಶ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆದುದರಿಂದ, ಕೃಷಿ ಕ್ಷೇತ್ರದಲ್ಲಿ ಅತ್ಯಂತ ಜವಾಬ್ಧಾರಿಯುತವಾಗಿ ಚಿಂತನೆ ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಮೊನ್ನೆ ಪೇಪರ್‌ನಲ್ಲಿ ಒಂದು ಆರ್ಟಿಕಲ್ ಬಂದಿತ್ತು, ಏನೆಂದರೆ ದಕ್ಷಿಣ ಕೊರಿಯಾದಲ್ಲಿ ಫುಡ್ ಸೆಕ್ಯೂರಿಟಿ ನಾಶವಾಗಿ ಹಸಿರು ಕಾರ್ಡು ಪಡೆದಂಥ ಒಬ್ಬ ತಾಯಿ, 8-10 ದಿವಸದಿಂದ ಉಪವಾಸದಿಂದ ಇದ್ದು, ತನ್ನ ಎರಡು ವರ್ಷದ ಮಗುವನ್ನು ಕೊಂದು ಊಟ ಮಾಡಿರತಕ್ಕಂಥ ಪರಿಸ್ಥಿತಿ ಅಲ್ಲಿ ನಡೆದಿದೆ. ಆದ್ದರಿಂದ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು. ಅದರಲ್ಲಿಯೂ ವಿಶೇಷವಾಗಿ ಇವತ್ತು ದೇಶದಲ್ಲಿ ಊಟ ಮಾಡುವವರೆಲ್ಲರೂ ಸೇರಿ, ದುಡಿಯುವವರನ್ನು ಯಾವರೀತಿ ದುಡಿಸಿಕೊಂಡು ನಾವೆಲ್ಲ ಯಾವರೀತಿ ಊಟ ಮಾಡಬಹುದು ಎಂಬ ಪ್ಲಾನ್‌ನನ್ನು ಮೊದಲು ಮಾಡಬೇಕು. ಅಂದರೆ, ದುಡಿಯುವವರನ್ನು ನಾವು ಎಷ್ಟು ಚೆನ್ನಾಗಿ ಇಟ್ಟುಕೊಂಡರೆ, ನಾವೆಲ್ಲ ಬದುಕಬಹುದು ಎಂಬ ಚಿಂತನೆಯನ್ನು ಮಾಡಬೇಕು. ಈ ಚಿಂತನೆಯನ್ನು ಕೇವಲ ಇಲಾಖೆ ಒಂದೇ ಮಾಡುವುದಲ್ಲ, ಎಲ್ಲರೂ ಮಾಡಬೇಕು. ಇವತ್ತಿನ ದಿವಸ ಎಲ್ಲರೂ ಚಿಂತನೆ ಮಾಡದೆ ಇದ್ದರೆ ಕೊರಿಯಾ ಸ್ಥಿತಿ ನಮಗೂ ಬರುವುದರಲ್ಲಿ ಯಾವುದೇ ಅನುಮಾನ ಇಲ್ಲ. ಇದರಲ್ಲಿ ವಿಶೇಷವಾಗಿ ಕೃಷಿ ಸಚಿವರಾದ ಮಾನ್ಯ ಬೈರೇಗೌಡರ ಜವಾಬ್ದಾರಿ ಜಾಸ್ತಿ ಇದೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ತಾವು ಸಮಾರೋಪಾದಿಯಲ್ಲಿ ಕೆಲಸ ಮಾಡಬೇಕು. ನಿಮ್ಮ ಇಲಾಖೆ, ಗೃಹರಕ್ಷಕ ಇಲಾಖೆ ಇದ್ದ ಹಾಗೆ. ಆದರೆ, ಹೋಂ ಡಿಪಾರ್ಟ್‌ಮೆಂಟ್‌ನಲ್ಲಿ ಯಾವ್ಯಾವದೋ ಮೂಲೆಯಲ್ಲಿ ಕಳ್ಳತನ ಆಗುತ್ತದೆ, ಆದರೆ ತಮ್ಮ ಇಲಾಖೆಯಲ್ಲಿ ಇಡೀ ಭೂಮಿಯ ಮೇಲೆ ಆಕ್ರಮಣ ಮಾಡತಕ್ಕಂಥ ಬಹಳ ದೊಡ್ಡ ಶತ್ರುಗಳು ಇದ್ದಾರೆ. ಕೃಷಿ ಕ್ಷೇತ್ರದಲ್ಲಿ ಬೆಳೆಗಳನ್ನು ಪೂರ್ಣ ನಾಶಮಾಡುವುದಕ್ಕೋಸ್ಕರ 60 ಸಾವಿರ ತರಹ ಬ್ಯಾಕ್ಟೀರಿಯಾಗಳು ಪ್ರವೇಶ ಮಾಡಿದೆ. ಆದ್ದರಿಂದ ಇದರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಇದು ಕೇವಲ ಸರ್ಕಾರದ ಹೊಣೆಗಾರಿಕೆ ಅಲ್ಲ. ಎಲ್ಲಾ ಶಾಸಕರು ಅತ್ಯಂತ ಜವಾಬ್ಧಾರಿಯುತವಾಗಿ ಅವರವರ ಕ್ಷೇತ್ರದಲ್ಲಿ ಕೆಲಸ ಮಾಡದೆ ಇದ್ದರೆ ಬಹಳ ಅಪಾಯದ ಪರಿಸ್ಥಿತಿ ಖಂಡಿತ ಬರುತ್ತದೆ. ಇದು ಕಾಂಗ್ರೆಸ್ ಅಥವಾ ಜನತಾದಳ, ರೈತ ಸಂಘದ ಪ್ರಶ್ನೆ ಅಲ್ಲ. ನಾವು ಉಳಿದುಕೊಳ್ಳಬೇಕು ಎಂದರೆ, ಅದಕ್ಕೆ ಏನು ಮಾಡಬೇಕು ಎಂಬ ಚಿಂತನೆಯನ್ನು ಮಾಡಬೇಕು. ಈಗಾಗಲೇ ಬಹಳಷ್ಟು ಜನ ಇದರ ಮೇಲೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿದ್ದಾರೆ, ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಜವಾಬ್ದಾರಿಯುತವಾಗಿ ಯೋಚನೆ ಮಾಡಬೇಕು. ತೋಟಗಾರಿಕೆ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಹೆಚ್ಚಿನ ರೈತರು ಮಳೆ ಆಧಾರಿತ ಪ್ರದೇಶದಲ್ಲಿ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ಮತ್ತು ಹಳ್ಳಕೊಳ್ಳದಿಂದ ನೀರನ್ನು ತೆಗೆದುಕೊಂಡು ವ್ಯವಸಾಯ ಮಾಡುವವರು ಜಾಸ್ತಿ ಇದ್ದಾರೆ. ಮೊನ್ನೆದಿವಸ ತಾವು ಕೆ.ಎಚ್.ಎಫ್ ಅನ್ನು ಪ್ರಾರಂಭ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಕೇವಲ ಅದನ್ನು ವಿರೋಧ ಮಾಡುವುದಿಲ್ಲ. ಆದರೆ, ಅದನ್ನು ಹಾಲಿನ ಡೈರಿ ಟೈಪ್ ಮಾಡುತ್ತಿದ್ದೀರಿ. ಈಗಾಗಲೇ ಬೆಳೆಗಾರರು 95 ಪರ್ಸೆಂಟ್‌ನಷ್ಟು

ಯಾವಾಗಲೂ ನಾಶದ ದಿಕ್ಕಿನಲ್ಲಿ ಹೋಗುತ್ತಿದ್ದರು, ಆದರೆ ಇದರಿಂದ ಕನಿಷ್ಠಪಕ್ಷ 10 ರಿಂದ 15 ಪರ್ಸೆಂಟ್ ಸುಧಾರಣೆ ಆಗಬಹುದೆಂದು ಆಸೆಯನ್ನು ಇಟ್ಟುಕೊಂಡಿದ್ದೇನೆ. ಏಕೆಂದರೆ, ಹಾಲು, ವೈಜ್ಞಾನಿಕ ಬೆಲೆ ಏನು ಅಲ್ಲ. ಹಾಲು ಕುಡಿಯುವವರೆಲ್ಲ ಎಷ್ಟು ಕಡಿಮೆಗೆ ಹಾಲು ತೆಗೆದುಕೊಂಡು ಕುಡಿಯಬೇಕೆಂದು ಪ್ಲಾನ್ ಮಾಡಿರುವುದಕ್ಕೆ ಅದನ್ನು ಮಾಡಲಾಗಿದೆ. ಇದನ್ನೆಲ್ಲ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಕೆ.ಹೆಚ್.ಎಫ್ ಅನ್ನು ಪ್ರಾರಂಭ ಮಾಡಿದೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇಲ್ಲಿ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಖಾಸಗಿ ದಲ್ಲಾಳಿ ಮತ್ತು ಸರ್ಕಾರಿ ಹಾಪ್‌ಕಾಮ್ಸ್‌ನಲ್ಲಿ ತಾವು ಕಾಂಪಿಟೇಶನ್‌ನನ್ನು ಕ್ರಿಯೇಟ್ ಮಾಡುತ್ತಿದ್ದೀರಿ. ಹಾಗೆಯೇ ರೈತರು ಬೆಳೆದಂಥ ತರಕಾರಿಗಳನ್ನು ಎಲ್ಲಾ ಕಡೆಯಿಂದ ತಮ್ಮ ವಾಹನಗಳಲ್ಲಿ ಎ.ಪಿ.ಎಂ.ಸಿ. ಮತ್ತು ಹಾಪ್‌ಕಾಮ್ಸ್ ಮಳಿಗೆಗಳಿಗೆ ತರಿಸಿಕೊಳ್ಳಿ ಮತ್ತು ಇದಕ್ಕೆ ರೈತರಿಂದ ಕಮೀಷನ್ ತೆಗೆದುಕೊಂಡು ಈ ಕೆಲಸವನ್ನು ಮಾಡಿ. ಇವತ್ತಿನದಿವಸ ರೈತ ತಾನು ಬೆಳೆದಂತಹ ತರಕಾರಿಗಳನ್ನು ಲಾರಿಯಲ್ಲಿ ರಾತ್ರಿ 12 ಗಂಟೆ ಅಥವಾ 1 ಗಂಟೆಗೆ ತಂದು, ತರಕಾರಿಗಳನ್ನೆಲ್ಲ ಬೀದಿಗಳ ಮೇಲೆ ಹಾಕಿಕೊಂಡು ಸೊಳ್ಳೆ ಕಡಿಸಿಕೊಂಡು ಆ ಪದಾರ್ಥಗಳನ್ನೆಲ್ಲ ಕಾಯ್ದುಕೊಂಡು ಇರತಕ್ಕಂಥ ಕಷ್ಟವನ್ನು ಖಂಡಿತ ನೋಡುವುದಕ್ಕೆ ಆಗುವುದಿಲ್ಲ. ಕನಿಷ್ಠಪಕ್ಷ ನೀವು ಏನು ಮಾಡದೆ ಇದ್ದರೂ ಚಿಂತೆ ಇಲ್ಲ, ಆ ತರಕಾರಿಗಳನ್ನು ಮಾರುಕಟ್ಟೆಗೆ ತರಿಸಿಕೊಳ್ಳುವ ಸಾಗಾಣಿಕೆ ಬಗ್ಗೆ ಚಿಂತನೆ ಮಾಡಿ. ಇವತ್ತು ಎ.ಪಿ.ಎಂ.ಸಿ. ಮತ್ತು ಹಾಪ್‌ಕಾಮ್ಸ್ ಎಲ್ಲೆಲ್ಲಿವೆ, ಅಲ್ಲೆಲ್ಲ ರೂಟ್ ಫಿಕ್ಸ್ ಮಾಡಿಕೊಂಡು ಈ ಕೆಲಸವನ್ನು ಮಾಡಬೇಕು.

ಶ್ರೀ ಸಿ. ಬೈರೇಗೌಡ : ಈಗಾಗಲೇ ಈ ವ್ಯವಸ್ಥೆ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾರುಕಟ್ಟೆಗೆ ತರಕಾರಿಗಳನ್ನು ತರತಕ್ಕಂಥದ್ದು ಕೇವಲ ಎಂಟು ಜಿಲ್ಲೆಗಳಲ್ಲಿ ಮಾತ್ರ ಇದೆ. ಆದರೆ ಇದನ್ನು ಕರ್ನಾಟಕ ರಾಜ್ಯದಾದ್ಯಂತ ಮಾಡಬೇಕು. ರೈತರು ಹೇಗಿದ್ದರೂ ಮೆಂಬರ್‌ಶಿಫ್ ಪಡೆದುಕೊಂಡಿರುತ್ತಾರೆ ಮತ್ತು ಅವರಿಗೆ ಸರ್ಕಾರ ಐಡೆಂಟಿಟಿ ಕಾರ್ಡನ್ನು ಸಹ ಕೊಟ್ಟಿರುತ್ತೀರಿ. ಮಾರ್ಕೆಟ್‌ನಲ್ಲಿರತಕ್ಕಂಥ ಬೆಲೆಯಲ್ಲಿ 10 ರಿಂದ 15 ಪರ್ಸೆಂಟ್ ನಷ್ಟು ಕನಿಷ್ಠ ಬೆಲೆಯನ್ನು ನಿಗದಿಮಾಡಿ ಅದರ ಆಧಾರದ ಮೇಲೆ ಅವರಿಗೆ ಲಾಭ ಕೊಡುತ್ತೀರಿ. ವಿಶೇಷವಾಗಿ ನೀವು ಮಾವಿನ ಹಣ್ಣಿಗೆ ಮಾರ್ಕೆಟ್ ಕ್ರಿಯೇಟ್ ಮಾಡಬೇಕು. ಉತ್ತರ ಕರ್ನಾಟಕದಲ್ಲಿ ಮಾವಿನ ಹಣ್ಣನ್ನು ಜಾಸ್ತಿ ಬೆಳೆಯುತ್ತಾರೆ. ಆದರೆ ಸರಿಯಾದ ಮಾರ್ಕೆಟ್ ವ್ಯವಸ್ಥೆ ಇಲ್ಲ. ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ಸರ್ಕಾರ ಮಾವಿನ ಸಸಿಗಳನ್ನು ಉಚಿತವಾಗಿ ಕೊಡಬೇಕು. ಉದಾಹರಣೆಗೆ ನಾನು ತಮ್ಮನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಏನೆಂದರೆ, ನೀರಾವರಿ ಪ್ರದೇಶಗಳಲ್ಲಿ ಒಂದು ಎಕರೆಗೆ ನೀರು ಕೊಡಬೇಕಾದರೆ, ಅಲ್ಲಿ ಡ್ಯಾಮ್ ಕಟ್ಟಿ ಮತ್ತು ಕಾಲುವೆ ಮಾಡಿ ಈ ಕೆಲಸಕ್ಕೆ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ರೈತರಿಗೆ ನೀರು ಕೊಡುತ್ತೇವೆ. ಲಿಫ್ಟ್ ಇರಿಗೇಷನ್‌ಗೆ 75 ಸಾವಿರ ರೂಪಾಯಿ ಆಗಬಹುದು, ಆದರೆ ಸರಾಸರಿ 40 ರಿಂದ 50 ಸಾವಿರ ರೂಪಾಯಿ ಆಗುತ್ತದೆ. ಆದರೆ, ಮಳೆ ಆಧಾರಿತ ಪ್ರದೇಶದ ರೈತನಿಗೆ ಒಂದು ಎಕರೆಗೆ ತಾವು ಏನು ಕೊಡುತ್ತೀರಿ? ಇವರಿಗೆ ಒಂದು ಲಕ್ಷ ಅಥವಾ ಎರಡು ಲಕ್ಷ ಮಾವಿನ ಸಸಿಗಳನ್ನು ಒಂದೊಂದು ಕ್ಷೇತ್ರಕ್ಕೆ ಉಚಿತವಾಗಿ ಕೊಡಿ. ಇದಕ್ಕೋಸ್ಕರ ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನು ಫಿಕ್ಸ್ ಮಾಡಿ.

ಶ್ರೀ ಸಿ. ಭೈರೇಗೌಡ : ಒಂದು ಸಸಿಗೆ ಕನಿಷ್ಠಪಕ್ಷ 25 ರೂಪಾಯಿ ಆಗುತ್ತದೆ.

ಉಪಾಧ್ಯಕ್ಷರು : ತಾವು ಹೇಳುತ್ತಿರುವುದು ಸೊಸಿನ ಅಥವಾ ಸಸಿನಾ?

ಶ್ರೀ ವಾಟಾಳ್ ನಾಗರಾಜ್ : ಹಳ್ಳಿಯ ಭಾಷೆಯಲ್ಲಿ ಯಾರು ವ್ಯಾಕರಣ ಬದ್ಧವಾಗಿ ಮಾತನಾಡುವುದಿಲ್ಲ. ಎಲ್ಲರು ಸಸಿಗೆ, ಸೊಸಿ ಎಂದು ಹೇಳುತ್ತಾರೆ. ಹಾಗೆಯೇ ಹಳ್ಳಿಗಳಲ್ಲಿ ಆಟೋರಿಕ್ಷಗಳಿಗೆ, ವೃಕ್ಷ ಎಂದು ಕರೆಯುತ್ತಾರೆ, ಅದಕ್ಕೆ ಏನು ಮಾಡುವುದು? ಅವು ವೃಕ್ಷ ಆಗುತ್ತದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರಿರುವ ಕಡೆ ಸೊಸಿ ಎಂಬ ಪದ ಬೇರೆ ಅರ್ಥ ಸೂಚಿಸುತ್ತದೆ. ಅದಕ್ಕಾಗಿ ನೀವು ಸೊಸಿ ಎಂದರು ಅಥವಾ ಸಸಿ ಎಂದು ಹೇಳಿದ್ದೀರಾ ಎಂದು ಕ್ಲಾರಿಫಿಕೇಶನ್ ಕೇಳುತ್ತಿದ್ದಾರೆ.

ಶ್ರೀ ಕೆ.ಎಸ್ ಪುಟ್ಟಣ್ಣಯ್ಯ : ನಾನು ಹೋದ ಸಲ ಹೇಳಿದ್ದೆ; ತಾವು ಒಂದು ಜಿಲ್ಲೆಯನ್ನು ತೆಗೆದುಕೊಳ್ಳಿ, ಉದಾಹರಣೆಗೆ ಬಿಜಾಪುರ ಜಿಲ್ಲೆಯಲ್ಲಿ ನಾವು ಏನೇನು ಮಾಡಬಹುದು. ಮಳೆಯಾಧಾರಿತ ಪ್ರದೇಶದಲ್ಲಿ ಡ್ರಿಪ್ ಇರಿಗೇಷನ್ ಮಾಡಿದರೆ ಯಾವ ಯಾವ ಪ್ಲಾಂಟ್‌ಗಳಾಗುತ್ತದೆ. ವಿಶೇಷವಾಗಿ ಅಲ್ಲಿ ಯಾವ ಹಣ್ಣಿನ ಗಿಡಗಳನ್ನು ಬೆಳೆಯುವುದಕ್ಕೆ ಸೂಕ್ತ ಹವಾಗುಣ ಇದೆ. ಅಲ್ಲಿ ದ್ರಾಕ್ಷಿ, ದಾಳಿಂಬೆ ಮತ್ತು ಮಾವು ಈ ತರಹ ಸಸಿಗಳನ್ನು ಬೆಳೆಯಬಹುದು. ನೀವು ಒಂದು ಜಿಲ್ಲೆಯನ್ನು ತೆಗೆದುಕೊಂಡು ಅಲ್ಲಿ ಫಿಕ್ಸ್ ಮಾಡಿ, ಅಲ್ಲಿ ಡ್ರಿಪ್ ಇರಿಗೇಷನ್ ಎಷ್ಟು ಮಾಡಬೇಕು. ಎಷ್ಟು ಸ್ಪಿಂಕ್ಲರ್ ಮಾಡಬಹುದು. ಯಾವ ರೀತಿಯಾಗಿ ತರಕಾರಿ ಬೆಳೆಗಳನ್ನು ಒಂದು ವರ್ಷದಲ್ಲಿ ಉತ್ಪಾದನೆ ಮಾಡಬಹುದು. ಒಂದೊಂದು ವರ್ಷಕ್ಕೆ ಒಂದೊಂದು ಜಿಲ್ಲೆಯನ್ನು ತೆಗೆದುಕೊಂಡು ಆ ಕೆಲಸವನ್ನು ಮಾಡಿ ಮುಗಿಸಬೇಕು. ಯಾವ ಸರ್ಕಾರ ಬಂದರು, ಮೂರು-ನಾಲ್ಕು ವರ್ಷಗಳನ್ನು ತೆಗೆದುಕೊಂಡು ಎರಡು-ಮೂರು ಜಿಲ್ಲೆಗಳನ್ನು ಮಾಡಿ ಮುಗಿಸಬೇಕು. ಇಲ್ಲದಿದ್ದರೆ ನಿಮಗೆ ಏನು ಮಾಡುವುದಕ್ಕಾಗುತ್ತದೆ. ತೋಟಗಾರಿಕೆ ಇಲಾಖೆ ತೆಗೆದುಕೊಂಡರೆ, ಅವರಿಗೆ ರೆಸ್ಪಾನ್ಸಿಬಿಲಿಟಿ ಇಲ್ಲ. ಅವರಿಗೆ ಕಮಿಟ್‌ಮೆಂಟ್ ಇರಬೇಕು. ಅವರಿಗೆ ಜವಾಬ್ದಾರಿ ಇರಬೇಕು. ಮಾಡದಿದ್ದರೆ ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ವೇತನ ತೆಗೆದುಕೊಂಡು ಸಸಿಗಳನ್ನು ನೆಡುವುದು, ಮುಂಜಾನೆ 10 ರಿಂದ ಸಂಜೆ 5 ಗಂಟೆಯವರಿಗೆ ಕಛೇರಿಯಲ್ಲಿ ಕುಳಿತುಕೊಳ್ಳುವುದು ಅಲ್ಲ. ಪೊಲೀಸ್ ಇಲಾಖೆಯಂತೆ ಪ್ರತಿಯೊಬ್ಬರು 24 ಗಂಟೆಯಂತೆ ಕೆಲಸ ಮಾಡಬೇಕು. ರೋಗ ಜಾಸ್ತಿಯಾಗಿದೆ. ಪರತಂತ್ರ ಜೀವಿಗಳು ಪ್ರಾರಂಭದ ಹಂತದಲ್ಲಿಯೇ ನೀವು ಇಂಟ್ರಡ್ಯೂಸ್ ಮಾಡಿದರೆ, ಏಕೆಂದರೆ ಅದು ರೈತರಿಗೆ ಗೊತ್ತಿಲ್ಲ. 15 ಜನ ರೈತರ ಬೆಳೆಗಳಿಗೆ ಅಟ್ಯಾಕ್ ಆದರೆ ಅದರಲ್ಲಿ ಯಾರೋ ಒಬ್ಬರು ಮಾತ್ರ ಉಪಯೋಗಿಸುತ್ತಾರೆ. 15 ಜನ ಮಾತ್ರ ಅದನ್ನು ಉಪಯೋಗಿಸಿದರೆ ಆ ರೋಗವನ್ನು ನಾಶ ಮಾಡುವುದಕ್ಕಾಗುತ್ತದೆ. ಮತ್ತು ಅಲ್ಲಿ ಕಪ್ಪು ಕಲೆ ಹುಳು ಎಂದು ಹಸಿರನ್ನು ಮೆಯಿದು ಹಾಕುತ್ತದೆ. ಅದನ್ನು ನಾಶ ಮಾಡುವುದಕ್ಕೆ ನೀವು ಒಂದು ವಾರ ಪೂರ್ಣ ಕೆಲಸ ಮಾಡಬೇಕು; ಎಲ್ಲಿ ಇದು ಆಗಿಲ್ಲ. ಒಂದು ಮೊಬೈಲ್ ಸ್ಕ್ವಾಡ್ ಸಿಸ್ಟಮ್ ಮಾಡಿ. ಅದನ್ನು ಅಟಾಕ್ ಮಾಡಬೇಕು. ಅದರಿಂದ ಅವರಿಗೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕು. ರೈತರು

ಪರತಂತ್ರ ಜೀವಿಗಳೋ ಏನೋ ಗೊತ್ತಿಲ್ಲ. ಕಾಂಡವನ್ನು ಕಟ್ ಮಾಡಿ, ಸೀಸೆಯಲ್ಲಿ ಔಷಧಿ ಮಿಕ್ಸ್ ಮಾಡಿ ಆ ಬೇರಿಗೆ ಕೊಟ್ಟರೆ ಪೂರ್ಣ ಪ್ರಮಾಣದಲ್ಲಿ ನಾಶವಾಗುತ್ತದೆ. ಒಂದೆರಡು ತಿಂಗಳು ಕಾಯಿಯನ್ನು ಕೀಳಬೇಡಿ ಎಂದು ಅಷ್ಟನ್ನಾದರೂ ಮಾಡಲು ಹೇಳಬೇಕು. ಇಲ್ಲದಿದ್ದರೆ ನೀವು ನೋಡಿ ಬೇಕಾದರೆ, ಮಂಡ್ಯ ಜಿಲ್ಲೆಯಲ್ಲಿ ಬಹಳ ನಾಶವಾಗುತ್ತದೆ. ಅದಕ್ಕೆ ಮಳೆಗಾಲ ಜಾಸ್ತಿಯಾದರೆ ಆಟೋಮ್ಯಾಟಿಕ್ ಆಗಿ ಹೋಗುತ್ತದೆ. ಮಳೆಗಾಲ ಕಡಿಮೆ ಆದರೆ ಅದು ಜಾಸ್ತಿ ಆಗುತ್ತದೆ. ಅದರ ಬಗ್ಗೆ ತಾವು ಕೆಲಸ ಮಾಡಬೇಕು. ಎಷ್ಟರಮಟ್ಟಿಗೆ ಡ್ರಿಪ್ ಇರಿಗೇಷನ್ ಮಾಡಬೇಕು ತಾವು ನೋಡಿ, ನಾನು ನೋಡಿದ್ದೇನೆ. ಅದು ಎಷ್ಟರಮಟ್ಟಿಗೆ ಇಂಪ್ಲಿಮೆಂಟ್ ಆಗುತ್ತದೆ ನನಗೆ ಗೊತ್ತಿಲ್ಲ. ಎಷ್ಟು ಎಕರೆ ಕ್ಷೇತ್ರವೆಂದು ಫಿಕ್ಸ್ ಮಾಡಿದ್ದೀರಿ, ಆ ಇಲಾಖೆಯವರನ್ನು ರೆಸ್ಪಾನ್ಸಿಬಿಲಿಟಿ ಮಾಡಿದ್ದೀರಾ? ತಾವು ಎಷ್ಟು ಜನರ ರೈತರಿಗೆ ಇನ್‌ವಾಲ್ವ್ ಮಾಡಿದ್ದೀರಿ. ಡ್ರಿಪ್ ಇರಿಗೇಷನ್ ಮಾಡಿ ಎಲ್ಲ ಕಡೆಯದು ಸ್ಯಾಂಪಲ್ ಪ್ಲಾಂಟ್ ಮಾಡಿ, ರೈತರನ್ನು ಕರೆಸಿ, ವಾಟರ್ ಎಕಾನಮಿ ಬಗ್ಗೆ ಅವರಿಗೆ ತಿಳುವಳಿಕೆ ಹೇಳಬೇಕು. ಡ್ರಿಪ್ ಇರಿಗೇಷನ್ ಆಗ ಸಾಧ್ಯವಾಗುತ್ತದೆ. ನೀವು ಏನು ಮಾಡುತ್ತೀರಿ, ಡ್ರಿಪ್ ಇರಿಗೇಷನ್‌ಗಾಗಿ ಒಂದು ಕಂಪನಿಗೆ ಫಿಕ್ಸ್ ಮಾಡುತ್ತೀರಿ. ಅದಕ್ಕೆ ರೇಟ್ ಒಂದಕ್ಕೆ ಎರಡರಷ್ಟು ಆಗುತ್ತದೆ. ಬೋರವೆಲ್ ತೆಗೆದುಕೊಳ್ಳಿ ಸರ್ಕಾರಿ ಬೋರ್‌ವೆಲ್ ಅದನ್ನು ಬದಲಾಯಿಸಬೇಕು. ನಮಗೆ ಯಾವುದು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಅಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಎಲ್ಲ ಅಧಿಕಾರಿಗಳು ಕಮೀಷನ್ ಮಾತನಾಡಿ ಕಮೀಷನ್ ತೆಗೆದುಕೊಳ್ಳುತ್ತಾರೆ. ನಮಗೆ ಎಲ್ಲಿ ಅವಕಾಶ ಇದೆ, ಅಲ್ಲಿ ಅವಕಾಶ ಮಾಡಿ ಕೊಡಿ.

ಶ್ರೀ ಸಿ. ಬೈರೇಗೌಡ : ರೈತರೆ ಎಲ್ಲೆಲ್ಲಿ, ಪೈಪು, ಲಾಟರಲ್ ಸಿಗುತ್ತವೆ ಸ್ವತಃ ಆ ಕಂಪನಿಗಳು ಎಲ್ಲಿ ತಯಾರು ಮಾಡುತ್ತವೆ ಅಲ್ಲಿಯೇ ತೆಗೆದುಕೊಳ್ಳುತ್ತಾರೆ. ಅವರು ತಾಂತ್ರಿಕವಾಗಿ ಮಾಡಿಕೊಂಡರೆ ಮತ್ತು ವೈಯಕ್ತಿಕವಾಗಿ ಮಾಡಿಕೊಂಡರೆ ನಾವು ಸಬ್ಸಿಡಿ ಕೊಡತಕ್ಕಂಥ ಅವಕಾಶ ನಮ್ಮಲ್ಲಿ ಇದೆ. ಇಂತಹವರಿಗೆ ಕೊಡಬೇಕೆಂದು ನಿಬಂದನೆ ಇಲ್ಲ. ರೈತರೇ ಸ್ವತಃ ಮಾಡಿಕೊಂಡರೆ ಅವರಿಗೆ ವ್ಯವಸ್ಥೆ ಇದೆ. ನಾನು ಹೇಳುತ್ತೇನೆ, ಪರೀಕ್ಷೆಗೋಸ್ಕರ ಸ್ವತಃ ಪುಟ್ಟಣ್ಣಯ್ಯನವರು ಡ್ರಿಪ್ ಇರಿಗೇಷನ್ ಮಾಡಿಸಿಕೊಳ್ಳಲಿ ಅವರಿಗೆ ನೇರವಾಗಿ ಹಣ ಸಿಗುವ ವ್ಯವಸ್ಥೆ ನಾನು ಮಾಡಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಹಾಗಾದರೆ, ತಾವು ಎಲ್ಲಾ ಕಛೇರಿಯ ಹತ್ತಿರ ಬೋರ್ಡ್ ಹಾಕಿಸಿಬಿಡಿ. ಒಂದು ವರ್ಷದಲ್ಲಿ ಒಂದು ಜಿಲ್ಲೆ ಎಂದು ತೀರ್ಮಾನ ಮಾಡಿದರೆ ಕನಿಷ್ಟ ಮೂರು ತಾಲ್ಲೂಕ್ಕಾದರು ಆ ಜಿಲ್ಲೆಯಲ್ಲಿ ಮಾಡಿಮುಗಿಸಿ.

ಶ್ರೀ ಸಿ. ಭೈರೇಗೌಡ : ಡ್ರಿಪ್ ಇರಿಗೇಷನ್‌ನಿಂದ ಮೊದಲನೆಯದಾಗಿ ನೀರು ಕಡಿಮೆ ಆಗುತ್ತದೆ. ಎಲ್ಲಕ್ಕಿಂತ ಹೆಚ್ಚಿಗೆ, ಬೆಳೆಗೆ ಯಾವ ಸಂದರ್ಭದಲ್ಲಿ ಎಷ್ಟು ಪ್ರಮಾಣದಲ್ಲಿ ನೀರು ಕೊಡಬೇಕು, ಆ ಪ್ರಮಾಣದಲ್ಲಿ ನೀರು ಕೊಟ್ಟರೆ ಭೂಮಿ ಕೆಡುವುದಿಲ್ಲ. ಇದರಲ್ಲಿ ಅನೇಕ ಸೌಲಭ್ಯಗಳು ಇವೆ. ಆದ್ದರಿಂದ ಇನ್ನು ಮುಂದೆ ಕೃಷಿ ಪಂಪಸೆಟ್ಟು ಸರ್ವ ಮಾಡತಕ್ಕಂಥ, ವಿದ್ಯುತ್ ಕೊಡತಕ್ಕಂಥ ಸಂದರ್ಭದಲ್ಲಿ,

ಯಾರು ಕಡ್ಡಾಯವಾಗಿ ಈ ಡ್ರಿಪ್ ಇರಿಗೇಷನ್ ಅಳವಡಿಸುತ್ತಾರೆ ಅಂತಹವರಿಗೆ ವಿದ್ಯುತ್ ಸಮರ್ಪಕವಾಗಿ ಕೊಡತಕ್ಕಂಥ ನಿಯಮ ಮಾಡಿದರೆ ಅದಕ್ಕೆ ಏನು ಹೇಳುತ್ತೀರಿ ? ಸದನ ಒಪ್ಪುವುದಾದರೆ ನಾವು ಕೊಡುತ್ತೇವೆ. ಆ ರೀತಿ ನಿಯಮವನ್ನು ಮಾಡಲಿಕ್ಕೆ ಸರ್ಕಾರ ಸಿದ್ಧವಾಗಿದೆ. ಏಕೆಂದರೆ, ವಿದ್ಯುತ್ ದುರ್ಬಳಕೆ, ನೀರು ದುರ್ಬಳಕೆ, ಎಲ್ಲಾ ದುರ್ಬಳಕೆಯಾಗುತ್ತಿದೆ. ಇದನ್ನು ಮಿತಿಗೊಳಿಸುವುದು ಅತಿ ಅವಶ್ಯಕ ಇದೆ. ನಾನು ಆ ರೀತಿಯಾಗಿ ಯೋಚನೆ ಮಾಡಿದ್ದೇನೆ. ಸದನ ಒಪ್ಪುವುದಾದರೆ, ನಾವು ಈ ಸದನದಲ್ಲಿ ತಂದಾಗ ಇಲ್ಲಿ ವಿರೋಧ ಬಂದರೆ ನಾವು ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಮತ್ತು ಸದನ ಒಪ್ಪುವುದಾದರೆ ಈ ರೀತಿಯಾದ ಒಂದು ನಿಬಂಧನೆ ತರುವುದು ಅತಿ ಅವಶ್ಯಕ. ಏಕೆಂದರೆ, ಶೇಕಡ 75 ರಿಂದ 80 ಸಬ್ಸಿಡಿ ಸಿಗುತ್ತದೆ. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಶೇಕಡ 90ರಂತೆ ಸಬ್ಸಿಡಿ ಸಿಗುತ್ತದೆ. ಅಷ್ಟೇ ಅಲ್ಲದೆ, ರೇಷ್ಮೆ ಏನು ಇದೆ, ಹಿಪ್ಪೆ ನೇರಳೆ ಡ್ರಿಪ್ ಇರಿಗೇಷನ್ ಕೊಡುವ ವ್ಯವಸ್ಥೆ ಇದೆ. ಅದಕ್ಕೆ ಸಬ್ಸಿಡಿ ಕೊಡುವ ವ್ಯವಸ್ಥೆ ಇದೆ. ಅದು ಬಳಕೆಯಾಗಬೇಕಾದುದು ಅವಶ್ಯಕ. ಸದನ ಒಪ್ಪುವುದಾದರೆ ಸರ್ಕಾರ ಅದನ್ನು ಕಡ್ಡಾಯ ಎಂದು ಮಾಡತಕ್ಕಂಥದ್ದು, ಸರ್ಕಾರದ ಪರವಾಗಿ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ವೀಳ್ಯದ ಎಲೆ ಇದೆ, ಅದಕ್ಕೆ ಅವಶ್ಯಕವಾದ ಮಾರುಕಟ್ಟೆ ಇದೆ. ಅದನ್ನು ಬಹಳ ಶ್ರಮದಿಂದ ಬೆಳೆಯುತ್ತಾರೆ. ತಾವು ಉದ್ಯೋಗ ಭರವಸೆ ಯೋಜನೆಯಲ್ಲಿ ಇವತ್ತು ಗೇಣಿ ರದ್ದಾಗಿರಬಹುದು. 10 ಗಂಟೆ 5 ಗುಂಟೆ ಎಂದಾಯಿತು. ಮನೆಯಲ್ಲಿ ಹೆಂಡತಿ ಮಕ್ಕಳು ವೀಳ್ಯದ ಲೆ ದುಡಿದು ತಂದು ಮಾರುತ್ತಾರೆ ಅದಕ್ಕೆ ಮಾರುಕಟ್ಟೆ ಬಗ್ಗೆ ತಾವು ಚಿಂತನೆ ಮಾಡಬೇಕು. ಅದರ ಜೊತೆಗೆ ಮಾನ್ಯ ಬೈರೇಗೌಡರಲ್ಲಿ ನನ್ನದೊಂದು ವಿನಂತಿ, ಬಹಳ ಮುಖ್ಯವಾದ ಕೆಲಸವೆಂದರೆ ತಾವು ಐಡೆಂಟಿಟಿ ಕಾರ್ಡ್ ಕೊಡಬೇಕು. ಮಣ್ಣನ್ನು ಪರೀಕ್ಷೆ ಮಾಡಿ, ಯಾವ ಅಂಶಗಳು ಎಂದು ಆ ಕಾರ್ಡ್‌ನಲ್ಲಿ ಫಿಕ್ಸ್ ಮಾಡಿ, ತಾವು 19-20 ಮಣ್ಣಿನ ಪರೀಕ್ಷಾ ಕೇಂದ್ರಗಳನ್ನು ಫಿಕ್ಸ್ ಮಾಡಿ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾದವು. ಭೂಮಿ ಮಾತ್ರ ಅಷ್ಟೇ ಇದೆ. ಬೇಕಾದರೆ ಮಕ್ಕಳನ್ನು ಹೆಚ್ಚಿಗೆ ಬೇಕಾದರೆ ಮಾಡಬಹುದು. ಅದಕ್ಕಾಗಿ ರೈತರಿಗೆ ಐಡೆಂಟಿಟಿ ಕಾರ್ಡ್ ಕೊಟ್ಟು ಭೂಮಿಯಲ್ಲಿ ಏನು ಅಂಶ ಕಡಿಮೆ ಇದೆ, ಅದನ್ನು ಮಾಡದಿದ್ದರೆ ಈ ಭೂಮಿ ಹಾಳಾಗಿ ಹೋಗುತ್ತದೆ. ನೀವು ಸ್ಕ್ಯಾನಿಂಗ್ ಮಾಡಿ. ಇಂತಹ ಖಾಯಿಲೆ ಇದೆ, ಅದನ್ನು ವಾಸಿ ಮಾಡಿಕೊಂಡು ಚೆನ್ನಾಗಿ ಇರಬೇಕೆಂದು ಹೇಳಬೇಕು. 50 ವರ್ಷವಾದರು ಮಣ್ಣು ಪರೀಕ್ಷೆ ಮಾಡುವುದಕ್ಕಾಗಲಿಲ್ಲ ಅಂದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಐಡೆಂಟಿಟಿ ಕಾರ್ಡ್ ಕೊಡಬೇಕು. ಯಾವ ಅಂಶಗಳು ಅದರಲ್ಲಿ ಕಡಿಮೆ ಇದೆ ಎನ್ನುವುದನ್ನು ಆ ಐಡೆಂಟಿಟಿ ಕಾರ್ಡಿನಲ್ಲಿ ಎಂಟ್ರಿ ಮಾಡಬೇಕು. ಆಗ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ತಾವು ಯೋಚನೆ ಮಾಡಬೇಕು. ಈರುಳ್ಳಿ, ಆಲೂಗಡ್ಡೆ ರೇಟ್ ಬಿದ್ದ ತಕ್ಷಣ ನಾವು ಮಾರುಕಟ್ಟೆ ಪ್ರವೇಶ ಮಾಡುತ್ತೇವೆ. ಈರುಳ್ಳಿ, ಆಲೂಗಡ್ಡೆ ಬೆಳೆ ಬರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಸರ್ಕಾರ ಏನು ಮಾಡಬೇಕು ಅದರ ಬಗ್ಗೆ ಯೋಚನೆ ಮಾಡಿ. ಈರುಳ್ಳಿ ಇಡೀ ಪ್ರಪಂಚಕ್ಕೆ ಬೇಕು. ಹೆಚ್ಚು ಹಣವನ್ನು ಟರ್ನ್‌ಓವರ್ ಮಾಡುವುದು. ಪ್ರಪಂಚದ ಎಲ್ಲ ದೇಶಕ್ಕೂ ಈರುಳ್ಳಿ ಬೇಕು. ಈರುಳ್ಳಿ ಬೆಲೆ ಸರಿಯಾಗಿರದಿದ್ದರೆ ಬೆಳೆದಂಥವನ ಕಣ್ಣಲ್ಲಿ ನೀರು ಬರಿಸುತ್ತದೆ. ಈ

ವರ್ಷ ತಿನ್ನುವವರ ಕಣ್ಣಲ್ಲಿ ನೀರು ಬಂತು. ಆದರೆ ವಿಶೇಷವಾಗಿ ಶೇಕಡ 80-90 ಭಾಗ ಬೆಳದವನಿಗೆ ಅನಾನುಕೂಲವಾಗುತ್ತದೆ. ಒಂದು ಆಲೂಗಡ್ಡೆ, ಅಥವಾ ಒಂದು ಈರುಳ್ಳಿ 100 ಗ್ರಾಂ ಇರುತ್ತದೆ, ಅದನ್ನು ಕೊರೆದು ಜ್ಯೂಸ್ ಮಾಡಿಕೊಟ್ಟರೆ ಅದಕ್ಕೆ 20 ರೂಪಾಯಿ ತೆಗೆದುಕೊಳ್ಳುತ್ತಾರೆ, ನಾವು ಅದನ್ನು ತಿಂದು ಹಣವನ್ನು ಕೊಡುತ್ತೇವೆ. ಟನ್‌ಗಟ್ಟಲೇ ಈರುಳ್ಳಿ ಬೆಳೆದಂತಹನಿಗೆ ಇಂದು ಮಾರುಕಟ್ಟೆ ಇಲ್ಲ. ನೀವು ಮಾರುಕಟ್ಟೆ ಕೊಡುವ ವ್ಯವಸ್ಥೆ ಮಾಡಬೇಕು. ಏನು ಪ್ರೋಸಸ್ ಯೂನಿಟ್ ಇದೆ, ಸ್ಮಾಲ್ ಯೂನಿಟ್ ಇದೆ, ಟೊಮೆಟೋ ಎಷ್ಟು ತರಹ ಇದೆ. ಅದರಿಂದ ಎಷ್ಟು ತರಹ ಜ್ಯೂಸ್ ಮಾಡಬಹುದು. ಕೆಚಪ್ ಮಾಡಬಹುದು, ಇಂತಹ ಉದ್ಯೋಗ ಮಾಡುವುದರಿಂದ ಇವತ್ತು ನಿರುದ್ಯೋಗ ಸಮಸ್ಯೆ ಏನು ಇದೆ, ಅದನ್ನು ಬಗೆಹರಿಸುವುದಕ್ಕಾದರೂ ನೀವು ಇನ್‌ವಾಲ್ವ್‌ಮೆಂಟ್ ಮಾಡಬೇಕು. ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುತ್ತಾ ಬೀಜ ನಿಗಮ ಮಂಡಳಿಗೆ ಅಂಥವರನ್ನು ಸೇರಿಸಿ ಎಂದು ಸನ್ಮಾನ್ಯ ಬೈರೇಗೌಡರಿಗೆ ಹೇಳಿದ್ದೆ. ಕೋ-ಅಪರೇಟೀವ್ ಮೂವ್‌ಮೆಂಟ್ಸ್ ಮಾಡಿಸಿ ಇಡೀ ಜಿಲ್ಲೆಗೆ ಬೇಕಾದ ಬಿತ್ತನೆ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ತಾವು ಚಿಂತನೆಯನ್ನು ಮಾಡಬೇಕು. ಇದು ಬಹಳ ಒಳ್ಳೆಯ ಕೆಲಸ. ನಾವು ಕನಿಷ್ಠಪಕ್ಷ ಉತ್ತಮವಾದ ಗುಣಮಟ್ಟದ ಬಿತ್ತನೆ ಬೀಜಗಳನ್ನು ಕೊಡುವುದಕ್ಕೆ ಆಗಲಿಲ್ಲ. ಈಗ ಹಳೆಯ ತಳಿಗಳೆಲ್ಲಾ ನಾಶವಾಯಿತು. ನೀವು ಬಹಳ ಹೈಬ್ರಿಡ್ ಟೋಮೋಟೋ ತಳಿಗಳನ್ನು ಇಂಟ್ರಡ್ಯೂಸ್ ಮಾಡುತ್ತೀರಿ. ನಾವು 15 ಟೋಮೋಟೋ ಹಣ್ಣನ್ನು ಹಾಕುವುದು ಒಂದೇ, ಒಂದೆರಡು ಮದನದಲ್ಲಿ ಟೋಮೋಟೊವನ್ನು ಸಾರಿಗೆ ಹಾಕೋದು ಒಂದೇ, ಆ ಮದನದಲ್ಲಿ ಟೋಮೋಟೊ ನಾಶವಾಗುತ್ತಾ ಹೋಗುತ್ತಿದೆ. ಹಳೆಯ ಬಿತ್ತನೆಯ ಬೀಜಗಳನ್ನು ನಾಶಮಾಡಬಾರದು. ಮದನಪಲ್ಲಿ ಅಂದರೆ ಛತ್ರಿ ಹೊಡೆದ ಹಾಗೆ ಹೊಡೆಯುತ್ತದೆ. ಮದನಪಲ್ಲಿಯಿಂದ ಮಾಡಿದ ಸಾಂಬಾರು ಬಹಳ ಚೆನ್ನಾಗಿರುತ್ತದೆ.

ಉಪಾಧ್ಯಕ್ಷರು : ನಮ್ಮ ಉತ್ತರದ ಕಡೆ ಇದಕ್ಕೆ ಚಪ್ಪರದ ಹಣ್ಣು ಎಂದು ಕರೆಯುತ್ತಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೆ, ಅದು ಬೇರೆ ಚಪ್ಪರದ ಮೇಲೆ ಲೋಲಾಕು ಟೈಪ್ ಬೆಳೆಯುವುದು, ಅದು ಹಾಗೆ ಗಿಡವಾಗುತ್ತದೆ. ಲೋಲಾಕು ಎಂದರೆ ಸುಮ್ಮನೆ ನೇತಾಡುತ್ತಿರುತ್ತದೆ. ಲೋಲಾಕು ಎಂದರೆ ಹೆಣ್ಣುಮಕ್ಕಳು ಹಾಕಿಕೊಳ್ಳುತ್ತಾರೆ ಆ ಟೈಪಿನ ತರಹ ಇರುತ್ತದೆ. ಮಾನ್ಯ ಕೆ.ಎಸ್. ನಾಗೇಗೌಡರು ವ್ಯವಸಾಯವನ್ನು ಮಾಡಿದ್ದಾರೆ, ಆದರೆ ಲೋಲಾಕು ಟೈಪ್ ಟೋಮೋಟೊ ಹಣ್ಣನ್ನು ನೋಡಿಲ್ಲ. ನಾನು ಬೆಳಿಗ್ಗೆ ಎದ್ದು ದನವನ್ನು ನೋಡುತ್ತಿದ್ದೆ ಎಂದು ಅವರು ಹೇಳಿದರು. ಆದ್ದರಿಂದ ತಾವು, ಅದರ ಬಗ್ಗೆ ಹಳೆಯ ಬಿತ್ತನೆ ಬೀಜಗಳನ್ನು ಶೇಖರಿಸಿಡುವುದಕ್ಕೆ ಏನಾದರೂ ಚಿಂತನೆಯನ್ನು ಮಾಡಬೇಕು. ಮಾನ್ಯ ಬಿ.ಬಿ. ನಿಂಗಯ್ಯನವರ ಪಶುಸಂಗೋಪನಾ ಇಲಾಖೆ ಬಹಳ ಮುಖ್ಯವಾದುದು. 40 ವರ್ಷ ಕಳೆದರೂ ಅದರಲ್ಲಿ ಪ್ರಗತಿಯನ್ನು ಕಾಣಲಾಗಲಿಲ್ಲ.

ಉಪಾಧ್ಯಕ್ಷರು : ಮಾನ್ಯ ಸುರೇಶ್‌ಕುಮಾರ್‌ರವರೆ, ನಿಮ್ಮ ಕಡೆಯವರೆಲ್ಲಾ ಎದ್ದು ಹೋಗಿದ್ದಾರೆ. ನೀವು ಹೋಗುವುದಿಲ್ಲವೇ?

ಶ್ರೀ ಎಸ್ ಸುರೇಶ್‌ಕುಮಾರ್ : ನಮ್ಮ ಕಡೆಯವರು ನನ್ನೊಬ್ಬನನ್ನು ಕೂರಿಸಿದ್ದಾರೆ. ಆದರೆ ನಾನು ಪುಟ್ಟಣ್ಣಯ್ಯನವರು ಭಾಷಣ ಓದುತ್ತಾರೆ ಎಂದು ಕುಳಿತಿಲ್ಲ. ಅವರ ಭಾಷಣ ಕೇಳುವುದಕ್ಕೆ ಕುಳಿತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಪಶುಸಂಗೋಪನಾ ಇಲಾಖೆ ಬಹಳ ಜವಾಬ್ದಾರಿಯಾದ ಇಲಾಖೆಯಾಗಿದೆ. ಔಷಧಾಲಯಗಳನ್ನು ಎಷ್ಟು ಮುಖ್ಯವಾಗಿ ಕಟ್ಟುತ್ತೀರೋ ಅಷ್ಟೇ ಜವಾಬ್ಧಾರಿಯುತವಾಗಿ ದನಗಳ ಬಗ್ಗೆ ಚಿಂತನೆಯನ್ನು ತಾವು ಮಾಡಬೇಕು. ಕೃಷಿ ಕ್ಷೇತ್ರಕ್ಕೆ ಮೂಲ ಆಧಾರವೆಂದರೆ ದನಗಳು. ನಾವು ಯಾರು ಟ್ರಾಕ್ಟರ್ ಟಿಲ್ಲರ್‌ಗಳನ್ನು ಇಟ್ಟುಕೊಂಡು ಬೇಸಾಯ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ನಮ್ಮ ಸಾಂಸ್ಕೃತಿಕ ತಳಿಗಳ ಮೇಲೆ ಬದುಕಿದ್ದೇವೆ. ಇವತ್ತಿನ ಪ್ರಪಂಚದ ಪೂರ್ಣ ಸಮೀಕ್ಷೆ ಮಾಡಿದರೆ 40 ವರ್ಷದಲ್ಲಿ ಡೀಸೆಲ್ ಆಯಿಲ್ ಮುಗಿದುಹೋಗುತ್ತದೆ. ಹಿಂದೆ ನಮ್ಮ ತಾತನ ಕಾಲದಲ್ಲಿ ಸಾಗಾಣಿಕೆಗೆ ಕತ್ತೆಯನ್ನು ಉಪಯೋಗಿಸುತ್ತಿದ್ದರು. ನಾವುಗಳು ಭತ್ತವನ್ನು ಕತ್ತೆಯ ಮೇಲೆ ಹೇರುತ್ತಿದ್ದೆವು. ಈಗ ಕತ್ತೆಗಳು ಇಲ್ಲ, ಎಲ್ಲಾ ಡೀಸಲ್ ವಾಹನಗಳ ಮೇಲೆ ಅವಲಂಬಿಸಿದೆ. ಇನ್ನು 40 ವರ್ಷ ಆದರೆ ಡೀಸೆಲ್ ಮುಗಿದುಹೋಗುತ್ತದೆ. ಸಾಂಸ್ಕೃತಿಕ ತಳಿಗಳ ಬಗ್ಗೆ ಯಾವುದೇ ಚಿಂತನೆ ಮಾಡುತ್ತಿಲ್ಲ. ಬೇರೆ ದೇಶಗಳಲ್ಲಿ ಹೈನು ತಳಿಗಳ ಬಗ್ಗೆ ಮಾತ್ರ ಚಿಂತನೆಯನ್ನು ಮಾಡುತ್ತಾರೆ. ಆದರೆ ನಮ್ಮದು ಹಾಗಲ್ಲ. ಹೈನು ಮತ್ತು ಬೇಸಾಯ ಎರಡು ಕ್ಷೇತ್ರಕ್ಕೆ ಬೇಕಾದಂತಹ ತಳಿಗಳ ಬಗ್ಗೆ ಚಿಂತನೆ ಮಾಡುತ್ತಾರೆ. ಇಲ್ಲಿ ದನಗಳನ್ನೆಲ್ಲಾ ಸ್ಲಾಟರ್ ಹೌಸ್‌ಗೆ ಹೊಡೆಯುತ್ತಿದ್ದಾರೆ. ತಾವು ಕಾನೂನು ಮಾಡಿ ಇದುವರೆಗೂ ಏನು ಕ್ರಮಗಳನ್ನು ಕೈಗೊಂಡಿದ್ದೀರಿ? ಮೊನ್ನೇ ದಿವಸ ನಾವು ಆಂಧ್ರದಿಂದ ಬರಬೇಕಾದರೆ ವಯಸ್ಸಾದ ಕರ್ನಾಟಕದ ಎಲ್ಲಾ ದನಗಳು ಲಾರಿಯಲ್ಲಿ ಹೋಗುತ್ತಿತ್ತು. ಇದರ ಮೇಲೆ ಯಾವುದೇ ನಿಯಂತ್ರಣವಿಲ್ಲ. ವ್ಯವಸಾಯ ಕ್ಷೇತ್ರಕ್ಕೆ ಅನುಕೂಲವಾಗುವಂತೆ ಅದಕ್ಕೊಂದು ಕಾನೂನು ಇದ್ದು ಏನು ಇಂಪ್ಲಿಮೆಂಟ್ ಆಗುತ್ತಾ ಇಲ್ಲ. ಬಹಳ ಚಿಕ್ಕಚಿಕ್ಕ ದನಗಳನ್ನು ನಾವು ನಾಶಮಾಡುತ್ತಾ ಹೋದರೆ ದನಗಳನ್ನು ನೀವು ಎಲ್ಲಿಂದ ತರುತ್ತೀರಿ? ನಾನು ವಿಷಯ ಸಮಿತಿಯಲ್ಲಿದ್ದಾಗಲೇ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಯಾವುದೇ ನಾಡ ತಳಿಯ ಕರುಗಳು ಹುಟ್ಟಿದರೆ, ಅದು ಅಮೃತ್‌ಮಹಲ್ ತಳಿ, ಕಿಲಾರಿತಳಿ, ಹಳ್ಳಿಕಾರ್ ತಳಿ ಅಥವಾ ಕೃಷ್ಣಾ ತಳಿ ಆಗಬಹುದು, ಆ ಎಲ್ಲಾ ತಳಿಗಳು ಒಂದು ಕರುವನ್ನು ಹಾಕಿದರೆ ಅದಕ್ಕೆ ತಾವು 250 ರೂಪಾಯಿ ಬೋನಸ್‌ನ್ನು ಘೋಷಿಸಿದರೆ ಜನರಿಗೆ ಇದರ ಬಗ್ಗೆ ಆಸಕ್ತಿ ಬರುತ್ತದೆ. ಆಮೇಲೆ ಇನ್ಸಿಮಿನೇಷನನ್ನು ಜಾರಿಗೆ ತರಬೇಕು. ಇಲಾತಿ ದನಗಳನ್ನು ಇಂಟ್ರಡ್ಯೂಸ್ ಮಾಡಿದಿರಿ. ಆ ಇಲಾತಿ ದನಗಳಿಂದ ಬೇಸಾಯವನ್ನು ಮಾಡುವುದಕ್ಕೆ ಆಗುತ್ತದಾ? ಆ ದನಗಳ ಮುಖವನ್ನು ನೋಡುವುದಕ್ಕೆ ಆಗುತ್ತದೆಯೇ, ನಮ್ಮ ದನಗಳು ಹೇಗೆ ಇದೆ ನೋಡಿ. ಇಲಾತಿ ದನಗಳ ಮುಖದಲ್ಲಿ ಗೊಬ್ಬರ ಹಾಕಿಕೊಂಡಿರುವ ತರಹ ಇರುತ್ತದೆ. ಆ ದನಗಳನ್ನು ನೋಡುವುದಕ್ಕಾಗುವುದಿಲ್ಲ. ನಾನು ವ್ಯವಸಾಯ ಮಾಡಲು ಆ ದನಗಳನ್ನು ಕಟ್ಟಿಕೊಂಡು ಊಳುತ್ತಿರುವಾಗ ಒಂದು ಸಾರಿ ಅದು ಕೆಳಗೆ ಬಿತ್ತು. ಆ ಸಂದರ್ಭದಲ್ಲಿ ಅದನ್ನು ಎತ್ತಬೇಕಾದರೆ 15-20 ಜನ ಬೇಕಾಗುತ್ತದೆ. ಆ ದನಗಳಿಗೆ ನೊಗ ಕುಳಿತುಕೊಳ್ಳುವುದಿಲ್ಲ. ಅದಕ್ಕೆ ಕೋಡು ಇರುವುದಿಲ್ಲ. ಅಂತಹ ಹೋರಿಗಳನ್ನು ನಾವು ವಿದೇಶದಿಂದ ತರಿಸುತ್ತಿದ್ದೇವೆ. ತಾವು ಹೆಚ್.ಎಫ್. ದನಗಳನ್ನು ತರಿಸುವುದರಿಂದ ಹಾಲು ಉತ್ಪಾದನೆ ಜಾಸ್ತಿಯಾಗಬಹುದು. ಆದರೆ ನಾಡ ತಳಿಗಳು ನಾಶವಾಗುತ್ತಿದೆ. ಲಂಚಗುಳಿತನ ಎಲ್ಲಿಯವರೆಗೆ ಹೋಗಿದೆ ಎಂದರೆ ನಮ್ಮಲ್ಲಿ ಒಬ್ಬ ಹುಡುಗ ಇದ್ದ, ಅವನಿಗೆ ಹಸುವಿಗೆ ಹೋರಿ ಕೊಡಿಸಿಕೊಂಡು ಬಾ

ಎಂದು 50 ರೂಪಾಯಿನ್ನು ಕೊಟ್ಟು ಕಳುಹಿಸಿದೆ. ಅವನು ಹೋರಿ ಕೊಡಿಸಿಕೊಂಡು ಬಂದೆ ಎಂದು ತಿಳಿಸಿದೆ. ಆ ಹಸು ಹೋರಿ ಕೊಡಿಸಿ ಒಂದು ವರ್ಷದ ನಂತರ ಇಲಾತಿ ಕರುವನ್ನು ಹಾಕಿತು. ಇದೇನು ಈ ಹಸು ನಾಡ ತಳಿ ಕರುವನ್ನು ಹಾಕುವ ಬದಲು ಇಲಾತಿ ಕರುವನ್ನು ಹಾಕಿದೆಯಲ್ಲಾ ಎಂದು ಕೇಳಿದೆ. ಅದಕ್ಕೆ ಅವನು ಇನ್ನೆರಡು ದಿವಸಗಳಲ್ಲಿ ಬಣ್ಣ ಬದಲಾವಣೆಯಾಗುತ್ತದೆ ಎಂದು ಹೇಳುತ್ತಾನೆ. ನಾನು ಲಂಚಗುಳಿತನ ಎಲ್ಲಿಯವರೆಗೆ ಹೋಗಿದೆ ಎಂದು ಹೇಳುತ್ತಿರುವುದು. ತಾವು ಇದರ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಚಿಂತನೆಯನ್ನು ಮಾಡಬೇಕಾಗಿದೆ. ಈ ತಳಿಗಳನ್ನು ಉಳಿಸಿಕೊಳ್ಳುವ ದಿಕ್ಕಿನಲ್ಲಿ ನಾವು ಕೆಲಸ ಮಾಡಲಿಲ್ಲ ಎಂದರೆ ಮುಂದಿನ ಪೀಳಿಗೆಗೆ ಕಷ್ಟವಾಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಹೆಸರಘಟ್ಟ, ಹೆಬ್ಬಾಳ, ಧಾರವಾಡ ಮತ್ತು ಮುನಿರಾಬಾದ್ ನಾಲ್ಕು ಕಡೆ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳು ಇದೆ. ಪುನಃ ಎರಡು ವೀರ್ಯ ಕೇಂದ್ರವನ್ನು ಬೀರೂರು ಮತ್ತು ಕೊಯಿಲಾದಲ್ಲಿ ಮಾಡಬೇಕೆಂದಿದ್ದೇವೆ. ತಾವೇನು ಸಾಂಸ್ಕೃತಿಕ ತಳಿಗಳು ಎಂದು ಹೇಳಿದ್ದೀರೋ ಅದಕ್ಕೆ ಒತ್ತು ಕೊಟ್ಟು ಅದರ ಬಗ್ಗೆ 2-3 ಸಾರಿ ಪ್ರಸ್ತಾಪವನ್ನು ಮಾಡಿದ್ದೀರಿ ನಾವು ಸದರಿ ವಿಷಯವನ್ನು ಗಮನದಲ್ಲಿಟ್ಟುಕೊಂಡು ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಬೀರೂರಿನಲ್ಲಿ ಫಾರಂನ್ನು ಮಾಡಬೇಕೆಂದಿದ್ದೇವೆ. ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ದಿ. ಶ್ರೀ ಡಿ. ದೇವರಾಜ್ ಅರಸ್‌ರವರಿಗೆ ಈ ದನಗಳನ್ನು ಸಾಕುವ ಬಗ್ಗೆ ಬಹಳ ಆಸಕ್ತಿ ಇತ್ತೆಂದು ನಾನು ಕೇಳಿದ್ದೆ. ಸದರಿ ಬೀರೂರಿನ ಫಾರಂಗೆ ದಿ. ಶ್ರೀ ಡಿ. ದೇವರಾಜ್ ಅರಸ್‌ರವರ ಹೆಸರನ್ನು ಇಟ್ಟು ಹೊಸದಾಗಿ ಮಾಡತಕ್ಕಂತಹ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರವನ್ನು ಅಲ್ಲಿ ಮಾಡಬೇಕೆಂದು ಇದ್ದೇವೆ. ಅಮೃತ್ ಮಹಲ್ ಕಿಲಾರಿ, ದೋಣಿ, ಕೃಷ್ಣಾ ತಳಿ ಹಳ್ಳಿಕಾರ್ ಇವುಗಳಿಗೆ ಹೆಚ್ಚು ಒತ್ತುಕೊಟ್ಟು ಉತ್ಪಾದನೆ ಮಾಡಲು ಆಲೋಚನೆಯನ್ನು ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು ಬರೀ ಆಲೋಚನೆ ಮಾಡಿದರೆ ಸಾಲದು.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಸಚಿವರು) : ಇಲ್ಲ ಅದರ ಬಗ್ಗೆ ಕಾರ್ಯಕ್ರಮವೂ ಕೂಡ ಇದೆ.

ಶ್ರೀ ಕೆ.ಎಸ್ ಪುಟ್ಟಣ್ಣಯ್ಯ : ತಾವು ಫಾರನ್ನು ಮಾಡಿ ಅದನ್ನು ಅಭಿವೃದ್ಧಿ ಮಾಡಬೇಕು. ಈಗ ಎಲ್ಲಾ ದನಗಳು ಕಸಾಯಿಖಾನೆಗೆ ಹೋಗುತ್ತಿದೆ. ಇದು ಬಹಳ ಗಂಭೀರವಾದ ಸಮಸ್ಯೆ. ಅದರ ಬಗ್ಗೆ ಕಾನೂನು ಇದ್ದರೂ ಏನೂ ಕ್ರಮವನ್ನು ತೆಗೆದುಕೊಳ್ಳುತ್ತಾ ಇಲ್ಲ. ಆದ್ದರಿಂದ, ತಾವು ಯಾವ ಯಾವ ಏರಿಯಾದಲ್ಲಿ ಯಾವ ಯಾವ ತಳಿಗಳು ಇದೆ. ಆ ತಳಿಗಳ ಫಾರಂನ್ನು ಕಡ್ಡಾಯವಾಗಿ ತೆರೆಯಬೇಕು. ನೀವು ಅಮೇರಿಕಾ, ರಷ್ಯಾದ ತಳಿಗಳ ಬಗ್ಗೆ ಹೇಳುತ್ತೀರಿ. ಒಂದು ಹೋರಿ 10 ಸಾವಿರ ಕರುಗಳಿಗೆ ತಂದೆಯಾಗಿದೆ. ಅದಕ್ಕೆ ಡಿಸೀಸಸ್ ಅಟ್ಯಾಕ್ ಆಯಿತು. ನಾವು ನೇರವಾಗಿ ಆ ಹಸುವಿಗೆ ಹೋರಿ ಕೊಡಿಸುವುದರಿಂದ ಲೈಂಗಿಕ ಕಾಯಿಲೆ ಬರುವುದು ಜಾಸ್ತಿಯಾಯಿತು.

6.20 ಪಿ.ಎಂ

ಇನ್‌ಸೆಮಿನೇಷನ್ ಬಗ್ಗೆ ಒಂದು ಸಾರಿ ಹೇಳಿದ್ದೆ. ಇನ್‌ಸೇಮಿನೇಷನ್ ಫೈಲ್ಯೂರ್ ಆಗುತ್ತದೆಂದರೆ ಸಾಮಾನ್ಯವಾಗಿ ದನಗಳನ್ನು ನೋಡಿಕೊಂಡು ನೂರಕ್ಕೆ 80 ಜನ ಹೆಣ್ಣುಮಕ್ಕಳು. ಅವರ ಮುಂದೆ ಲೈಂಗಿಕತೆ ವಿಷಯವನ್ನು ವೈದ್ಯರು ಮಾತನಾಡಲು ಸಂಕೋಚಪಡುತ್ತಾರೆ. ಹಿಂಬೆದೆ, ಮುಂಬೆದೆ, ಮಧ್ಯಬೆದೆ ಎಂದು ಹೇಳಿ 3 ಸಿಂಪ್ಟಮ್ಸ್ ಇರುತ್ತವೆ. ಇದರಲ್ಲಿ ನಾಚಿಕೆ ಸ್ವಭಾವ ಬೇಡ. ಇದನ್ನು ವಿವರಿಸಿ ಹೇಳಬೇಕು. ಸಿಂಪ್ಟಮ್ಸ್ ಬಂದಾಗ ಇನ್‌ಸೆಮಿನೇಷನ್ ಮಾಡಲಿಲ್ಲವೆಂದರೆ ಫೈಲ್ಯೂರ್ ಆಗುತ್ತದೆ. ಪರ್ಸೆಂಟೇಜ್ ತೆಗೆದುಕೊಳ್ಳಿ, ಅದೂ ಕೂಡ ಫೈಲ್ಯೂರ್ ಆಗುತ್ತದೆ. ಆದ್ದರಿಂದ ಉತ್ತಮವಾದ ಇನ್‌ಸಮಿನೇಷನ್ ಬಗ್ಗೆ ತಾವು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಅದರ ಮೇಲೆ ಸಿಕ್ಕಾಬಟ್ಟೆ ದೂರುಗಳು ಇವೆ. ಎಲ್ಲ ಪ್ರದೇಶಗಳಲ್ಲಿ ಅಮೃತ್‌ಮಹಲ್ ತಳಿ ಉತ್ಪಾದನೆ ಮಾಡುವ ಕೆಲಸ ಆಗಬೇಕು. ಮಹದೇಶ್ವರ ಬೆಟ್ಟದ ತಪ್ಪಲಲ್ಲಿ ಬೆಂಟಳ್ಳಿ ಎಂದು ಬರುತ್ತದೆ. ಬೆಂಟಳ್ಳಿಯಲ್ಲಿ ಸಾವಿರಾರು ಕರುಗಳಿವೆ. ನೀವು ಅದನ್ನು ಅಬ್ಸರ್ವ್ ಮಾಡಿ ಅಲ್ಲಿ ಒಂದು ಫಾರಂ ಮಾಡಿ. ಅಲ್ಲಿ ಲಕ್ಷಾಂತರ ಕರುಗಳು ಬಹಳ ಚೆನ್ನಾಗಿವೆ, ಬೆಂಗಳ್ಳಿ ಬ್ರೀಡ್ ತುಂಬಾ ಚೆನ್ನಾಗಿದೆ. ಇದನ್ನೆಲ್ಲಾ ತಾವು ಐಡೆಂಟಿಫೈ ಮಾಡಬೇಕು. ಇನ್ನೊಂದು ನಿರುದ್ಯೋಗ ಸಮಸ್ಯೆಯನ್ನು ತಾವು ಬಗೆಹರಿಸಬೇಕು. ಗಿರಿರಾಜ ಕೋಳಿಗಳನ್ನು ಸಾಕುವುದರ ಮೂಲಕ ಮಹಿಳೆಯರಿಗೆ ಉದ್ಯೋಗ ಸೃಷ್ಟಿ ಮಾಡಿಕೊಡಬಹುದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಣ ಕೊಡುತ್ತೀರಲ್ಲ ಅದನ್ನು ಅವರೆಲ್ಲರ ಕೈಗೆ ಕೊಟ್ಟಿದ್ದರೆ ಅವರೆಲ್ಲ ಸುಮಾರಾಗಿ ಚೆನ್ನಾಗಿಯೇ ಇರುತ್ತಿದ್ದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹೆಸರಿನಲ್ಲಿ ಅನೇಕರು ಹಳ್ಳಿಯಲ್ಲಿ ದುಡ್ಡು ತಿಂದು ಹಾಕುತ್ತಾರೆ. ಇವತ್ತು ಗಿರಿರಾಜಾಗೆ ಮಾರುಕಟ್ಟೆ ಇದೆ, ಅದು ಸುಮಾರು 200-250 ಮೊಟ್ಟೆಗಳನ್ನು ಇಡುತ್ತದೆ. ಇಂಥ ಕೋಳಿಗಳನ್ನು ಕೊಟ್ಟರೆ ಅವರ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಸಿದ್ದರಾಮಯ್ಯ : ಅದಕ್ಕೆ ಮಾರ್ಕೆಟ್ ಇಲ್ಲ.

ಶ್ರೀ ಬಿ.ಬಿ. ನಿಂಗಯ್ಯ : ಗಿರಿರಾಜ, ತಮಗೆ ಗೊತ್ತಿರುವ ಹಾಗೆ ಅದು ನಮ್ಮಲ್ಲೇ ಮಾಡಿದ ತಳಿ. ಅದನ್ನು ಹಳ್ಳಿಗಳಲ್ಲೇ ಸಾಕಬಹುದು. ಆದರೆ ಒಂದು ಏನಾಗಿದೆ ಎಂದರೆ ನಮ್ಮ ನಾಯಕರುಗಳು ಹೇಳಿದ ಹಾಗೆ ಅದಕ್ಕೆ ಹೆಚ್ಚು ಮಾರ್ಕೆಟ್ ಸಿಗುತ್ತಿಲ್ಲ.

ಶ್ರೀ ಎನ್. ರಾಜಣ್ಣ : ಗಿರಿರಾಜ ಎಂದು ಬಹಳ ಚೆನ್ನಾಗಿ ಹೇಳಿದರು. ನಿನ್ನೆ ನಾನು ಮಾತನಾಡಬೇಕೆಂದು ಇಚ್ಛೆ. ಸಮಯದ ಅಭಾವದಿಂದ ಮಾತನಾಡುವುದಕ್ಕೆ ಆಗಲಿಲ್ಲ. ಅದರ ಫೋಟೋ ತಮಗೆ ಕಳುಹಿಸಿಕೊಡುತ್ತೇನೆ. ಗಿರಿರಾಜ ತುಂಬಾ ಒಳ್ಳೆಯ ತಳಿ.

ಉಪಾಧ್ಯಕ್ಷರು : ಸೋಮವಾರ ತಾವು ಮಾಡಿ ಆಗ ನಾಡಿ ಎಲ್ಲವನ್ನೂ ವಿವರಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕರಾವಳಿ ಮೀನುಗಾರರು ಮತ್ತು ಒಳನಾಡು ಮೀನುಗಾರರು ಎಂದು ಎರಡು ವಿಧ ಇದೆ. ಅದರಲ್ಲಿ ಕರಾವಳಿ ಮೀನುಗಾರರನ್ನು ಇನ್‌ಶ್ಯೂರೆನ್ಸ್‌ಗೆ ಒಳಪಡಿಸಿದ್ದೀರಿ ಒಳನಾಡು ಮೀನುಗಾರರನ್ನು ಇನ್‌ಶ್ಯೂರೆನ್ಸ್‌ಗೆ ಒಳಪಡಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಗಿರಿರಾಜ ಕೋಳಿ ಚೆನ್ನಾಗಿರುತ್ತದೋ ಅಥವಾ ಸ್ಥಳೀಯ ಕೋಳಿ ಚೆನ್ನಾಗಿರುತ್ತದೋ ಎಂದು ತಾವು ಅಧ್ಯಕ್ಷರು ಹೇಳಬೇಕು.

ಉಪಾಧ್ಯಕ್ಷರು : ಯಾರು ಉಪಯೋಗ ಮಾಡಿದ್ದಾರೆ ಅವರನ್ನು ಕೇಳಿ ನಾನು ಸೋಮವಾರ ಹೇಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ಇಬ್ಬರಿಗೂ ಕೋಳಿ ತಿಂದು ಅನುಭವ ಇಲ್ಲವೆಂದು ನನ್ನ ಭಾವನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅಧ್ಯಕ್ಷರಿಗೆ ಮತ್ತು ನಾಗರಾಜ್ ಅವರಿಗೆ ಸ್ಯಾಂಪಲ್ ನೋಡಿಸೋಣ. ಇನ್‌ಶ್ಯೂರೆನ್ಸ್‌ಗೆ ಹಣವನ್ನು ಕೇಂದ್ರ ಸರ್ಕಾರ 50 ಪರ್ಸೆಂಟ್ ಕೊಡುತ್ತದೆ. ರಾಜ್ಯ ಸರ್ಕಾರ 50 ಪರ್ಸೆಂಟ್ ಕೊಡುತ್ತದೆ, ಆದರೆ ಏನು ಅಪಘಾತವಾಗುತ್ತದೆ ಆಗ ಇನ್‌ಶ್ಯೂರೆನ್ಸ್ ಸರಿಯಾಗಿ ಕವರ್ ಆಗುತ್ತಿಲ್ಲ. ನಾವೇನು ಇನ್‌ಶ್ಯೂರೆನ್ಸ್ ಹಣ ಕಟ್ಟಿರುತ್ತೇವೆ ಅದರಲ್ಲಿ ನಮಗೆ 25-30 ಪರ್ಸೆಂಟ್ ಕವರ್ ಆಗುತ್ತದೆ. 70 ಪರ್ಸೆಂಟ್ ಇನ್‌ಶ್ಯೂರೆನ್ಸ್ ಅವರಿಗೆ ಅನುಕೂಲವಾಗುತ್ತದೆ. ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ 50-50 ಪರ್ಸೆಂಟ್ ಕೊಡುವುದರಿಂದ ಅದನ್ನು ಪರಿಶೀಲನೆ ಮಾಡಿ ಅವರಿಗೆ ಮೊತ್ತ ಜಾಸ್ತಿ ಮಾಡಿ. ಅವರಿಗೆ ಮೊತ್ತ ಜಾಸ್ತಿ ಮಾಡಿಕೊಡದಿದ್ದರೆ, ಮೀನುಗಾರರು ಏನು ಪ್ರಕೃತಿದತ್ತವಾಗಿ ಹೋರಾಟ ಮಾಡಿ ಬದುಕುತ್ತಾರೆ ಅವರ ಜೀವನ ಭದ್ರತೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಏನು ಹಣ ಕೊಡುತ್ತದೆ ಅದು ಕೇವಲ 30 ಪರ್ಸೆಂಟ್ ಮಾತ್ರ ಕವರ್ ಆಗುತ್ತದೆ. ಇನ್ನು 70 ಪರ್ಸೆಂಟ್ ಇನ್‌ಶ್ಯೂರೆನ್ಸ್ ಕಂಪನಿಗೆ ಲಾಭವಾಗಿ ಉಳಿದುಕೊಳ್ಳುತ್ತದೆ. ಆದ್ದರಿಂದ ಮೊತ್ತ ಜಾಸ್ತಿ ಮಾಡಿ ಅಪಘಾತ ವಿಮೆಗೆ ಸಂಬಂಧಪಟ್ಟವರನ್ನು ಕರೆಸಿ ಮಾತನಾಡುವುದರ ಮೂಲಕ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿ. ಪಂಚಾಯಿತಿಗೆ ಒಂದು ಕೊಳ ಮಾಡಿ ಒಳನಾಡಿನಲ್ಲಿ ಮೀನಿನ ಅಭಿವೃದ್ಧಿ ಮಾಡಬೇಕೆಂದು ಯೋಚನೆ ಮಾಡಿದ್ದಿರಿ. ಅದು ಈಗ ಯಾವ ಮಟ್ಟಕ್ಕೆ ಕಾರ್ಯಕ್ರಮ ರೂಪಿಸಿದಿರಿ? ನಾನು ಪುಸ್ತಕದಲ್ಲಿ ನೋಡಿದೆ. ಅದರ ಬಗ್ಗೆ ಏನೂ ಕಾರ್ಯಕ್ರಮ, ಚಿಂತನೆ ಇಲ್ಲ. ಇನ್ನೊಂದು ಸೀಗಡಿ ಮೀನು. ಸ್ಥಳೀಯ ಸೀಗಡಿಗಳು ನಾಶವಾದವು. ಅದು ಮಹಿಳೆಯರು ತೊಟ್ಟಿ ಕಟ್ಟಿಕೊಂಡು ಉತ್ಪಾದನೆ ಮಾಡುವಂಥದ್ದು. ವಿದೇಶಕ್ಕೆ ಕಳುಹಿಸುವ ಸೀಗಡಿ ಏನಲ್ಲ. ಮೊದಲೆಲ್ಲ ಅವರೆಕಾಳು ಸಾರು, ಸೀಗಡಿ ಸಾರು ಎಂದರೆ ಬಹಳ ಚೆನ್ನಾಗಿ ಊಟ ಮಾಡುತ್ತಿದ್ದೆವು. ಊಟದ ರುಚಿ ಬಲ್ಲವರೇ ಬಲ್ಲರು, ಬಲ್ಲದೆ ಇದ್ದವರಿಗೆ ನಾವೇನು ಮಾಡಲು ಸಾಧ್ಯವಿಲ್ಲ. ಇವತ್ತಿನ ದಿವಸ, ಬಹಳ ಜನರಿಗೆ ನಿರುದ್ಯೋಗ ಸಮಸ್ಯೆ ಇದೆ. ವಿಶೇಷವಾಗಿ ಮಹಿಳೆಯರು ಒಂದು ಗಾರೆ ತೊಟ್ಟಿ ಕಟ್ಟಿಕೊಂಡು ಅದರಲ್ಲಿ ಸೀಗಡಿ ಮೀನು ಉತ್ಪಾದನೆ ಮಾಡಿ ಬೆಳಸಬಹುದು. ಮಳ್ಳಿ ಮೀನು ಮತ್ತು ಸೀಗಡಿ ಮೀನು ಎರಡೂ ಇಲ್ಲ ಇವತ್ತು. ಮಳ್ಳಿ ಮೀನು ಅಂದರೆ ಇಷ್ಟೇ ಇಷ್ಟ ಬರುತ್ತದೆ. ಬಹಳ ಮಳ್ಳಿ ಹಾಗೆ ಆಡುತ್ತೀಯಲ್ಲ ಎಂದು ಹೇಳುತ್ತಾರಲ್ಲ ಹಾಗೆ ಆ ಮೀನು ಕೂಡ ಇರುತ್ತದೆ. ಈಗ ಅವೆರಡೂ ಇಲ್ಲ. ದಯವಿಟ್ಟು ಅವೆರಡ್ನನು ಉತ್ಪಾದನೆ ಮಾಡುವ ಮೂಲಕ ಮಹಿಳೆಯರ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬಹುದು. ಬೇಕಾದರೆ ಸ್ಯಾಂಪಲ್‌ಗೆ ಒಂದೆರಡು ಕಡೆ ಮಾಡಿ ನೋಡಿ; ಅದ್ದರಿಂದ ಅನುಕೂಲವಾಗುತ್ತದೆ.

ಶ್ರೀ ಬಿ.ಎ. ಮೊಹಿದ್ದೀನ್ : ಶಾಖಾಹಾರಿಗಳು ಮೀನು ತಿನ್ನುವುದಕ್ಕೆ ಶುರು ಮಾಡಬೇಕು. ಬಂಗಾಳಿ ಬ್ರಾಹ್ಮಣರು ಮೀನು ತಿಂದು ಬುದ್ಧಿವಂತರಾಗಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅಲ್ಲಿ ಮೀನು ತಿನ್ನುತ್ತಾರೆ. ಇಲ್ಲಿ ಮೀನೇ ಅವರನ್ನು ತಿನ್ನುವುದಕ್ಕೆ ಶುರು ಮಾಡಿವೆ, ಅದಕ್ಕೆ ತಿನ್ನುತ್ತಿಲ್ಲ. ಆದುದರಿಂದ, ಇನ್‌ಶ್ಯೂರೆನ್ಸ್, ಮಳ್ಳೆ ಮೀನು ಮತ್ತು ಸೀಗಡಿ ಮೀನಿನ ಬಗ್ಗೆ ತಾವು ಯೋಚನೆ ಮಾಡಬೇಕು. ಇನ್ನೊಂದು ರೇಷ್ಮೆ ಇಲಾಖೆಯ ಬಗ್ಗೆ ಹೇಳುವುದಾದರೆ, ಕೋ-ಅಪರೇಟೀವ್ ಮೂವ್‌ಮೆಂಟ್‌ನಲ್ಲಿ, ಸಹಕಾರ ಕ್ಷೇತ್ರದಲ್ಲಿ ತಾವು 30-40 ಎಕರೆ ಇರುತ್ತದೆ. ಅದರಲ್ಲಿ ನೂರಾರು ಜನ ರೈತರನ್ನು ಇನ್‌ವಾಲ್ವ್ ಮಾಡುವುದರಲ್ಲಿ ತಾವು ಏನು ಹೊಸ ವಿಧಾನ ಅಳವಡಿಸಿದ್ದೀರಲ್ಲ ಆ ಹೊಸ ವಿಧಾನದ ಮೂಲಕ ದೊಡ್ಡ ಕಟ್ಟಡ ಕಟ್ಟುವುದು ಮತ್ತು ಅದನ್ನು ಭಾಗವಾಗಿ ಕೊಡುವುದು. 30-40 ಎಕರೆ ಜಮೀನು ಇರುವವರಿಗೆ ಕೋ-ಅಪರೇಟೀವ್ ಮೂವ್‌ಮೆಂಟ್‌ನಲ್ಲಿ ಲೋನ್ ರೂಪದಲ್ಲಿ ಕೊಡಿ. ಆ ಜಮೀನಿಗೆ ಬೇಕಾದ ಲಿಫ್ಟ್ ಇರಿಗೇಷನ್ ಇಂಟ್ರಡ್ಯೂಸ್ ಮಾಡಿಕೊಡಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಾಗೂ ಬಡತನದಲ್ಲಿರುವವರಿಗೆ ಸಹಾಯ ಮಾಡಬೇಕೆಂದರೆ ಅವರಿಗೆ 10-10 ಗುಂಟೆ ಜಾಗ ಕೊಡಿ. 10-10 ಗುಂಟೆ ಜಾಗ ಕೊಟ್ಟು ಅವರಿಗೆ ತರಬೇತಿ ಮಾಡಿಸಿ ಅನುಕೂಲ ಮಾಡಿಕೊಟ್ಟರೆ ಅವರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಬಹಳ ಉತ್ತಮ ರೀತಿಯಲ್ಲಿ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಭೆ ಸೇರುತ್ತದೆ.

(ಸಭೆಯ ಸಂಜೆ 6.30ಕ್ಕೆ ಮುಕ್ತಾಯಗೊಂಡು ಪುನಃ 11ನೇ ಮೇ 1998 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

(+ ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).